ರಂಗಪೇಟೆ ಕನ್ನಡ ಸಾಹಿತ್ಯ ಸಂಘ : ಒಂದು ಅವಲೋಕನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕ

ಮಹಾಂತಗೌಡ

ಮಾರ್ಗದರ್ಶಕರು

ಡಾ. ವೆಂಕಟೇಶನ್ ಆರ್.

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ರಂಗಪೇಟೆ ಕನ್ನಡ ಸಾಹಿತ್ಯ ಸಂಘ : ಒಂದು ಅವಲೋಕನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕ

ಮಹಾಂತಗೌಡ

ಮಾರ್ಗದರ್ಶಕರು

ಡಾ. ವೆಂಕಟೇಶನ್ ಆರ್.

ಪ್ರವಾಚಕರು

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

"ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ : ಒಂದು ಅವಲೋಕನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಮಹಾಂತಗೌಡ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿ ಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 10-10-2008
ಸ್ಥಳ : ವಿದ್ಯಾರಣ್ಯ

(ಡಾ. ವೆಂಕಟೇಶನ್ ಆರ್.)
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

"ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ: ಒಂದು ಅವಲೋಕನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ವೆಂಕಟೇಶನ್ ಆರ್. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 10-10-2008

ಸ್ಥಳ : ವಿದ್ಯಾರಣ್ಯ

ಮಹಾಂತಗೌಡ
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬.

ಕೃತಜ್ಞತೆಗಳು

"ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ : ಒಂದು ಅವಲೋಕನ" ಎಂಬ ಸಂಶೋಧನ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಒಪ್ಪಿಸಲು ಅವಕಾಶ ಮಾಡಿಕೊಟ್ಟು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಹಾಗೂ ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯರವರಿಗೆ ವಂದನೆಗಳು.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆಗಳನ್ನು ಸಹಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ. ಪಾಂಡುರಂಗಬಾಬು ಹಾಗೂ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಂ. ಪುಟ್ಟಯ್ಯ ಅವರುಗಳಿಗೆ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ಅಧ್ಯಯನ ಕೈಗೊಳ್ಳಲು ನನಗೆ ನಿಬಂಧದ ವಿಷಯ ಸೂಚಿಸಿ, ಅಧ್ಯಯನದುದ್ದಕ್ಕೂ ತಪ್ಪುಗಳನ್ನು ತಿದ್ದುತ್ತಾ, ತಿಳಿಹೇಳಿ ತಾಳ್ಮೆಯ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ. ಆರ್. ವೆಂಕಟೇಶನ್ ಅವರಿಗೆ ನನ್ನ ವಂದನೆಗಳು.

ನನ್ನ ಅಧ್ಯಯನಕ್ಕೆ ಸ್ಫೂರ್ತಿ ಮತ್ತು ಸಲಹೆ ನೀಡಿದ ಹಾಗೂ ನನ್ನನ್ನು ಪ್ರೀತಿಯಿಂದ ಕಂಡು ವಿಚಾರಿಸಿ ಅಧ್ಯಯನದ ತಾತ್ವಿಕ ಬೋಧನೆಯನ್ನು ನೀಡಿದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರೊ. ರಹಮತ ತರೀಕೆರೆ ಅವರಿಗೂ ಹಾಗೂ ಪ್ರವಾಚಕರುಗಳಾದ ಡಾ. ಎನ್. ಅಮರೇಶ, ಡಾ. ಮಲ್ಲಿಕಾರ್ಜುನ ಗೌಡ ಅವರುಗಳಿಗೆ ಹೃದಯಪೂರ್ವಕ ವಂದನೆಗಳು ಹಾಗೂ ವಿಭಾಗದ ಸಿಬ್ಬಂದಿ ವರ್ಗದವರಾದ ಶ್ರೀ ಶಿವಪ್ಪ ಕೊಳ್ಳೂರು ಹಾಗೂ ಹನುಮಂತಪ್ಪ ಅವರಿಗೂ ನನ್ನ ವಂದನೆಗಳು.

ಡಾ. ಈಶ್ವರಯ್ಯ ಮಠ, ಡಾ. ಶಿವಾನಂದ ವಿರಕ್ತಮಠ, ಡಾ. ಮಂಜುನಾಥ ಬೇವಿನಕಟ್ಟಿ ಹಾಗೂ ನನ್ನೂರಿನ ಶಿಕ್ಷಣವನ್ನು ಪ್ರೋತ್ಸಾಹಿಸಿ ಬೆಳೆಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ಗೋನಾಳ್ ಭೀಮಪ್ಪ ಐ.ಎ.ಎಸ್. ಅವರಿಗೂ ನನ್ನ ಹೃದಯಪೂರ್ವಕ ಅಭಿನಂದನೆಗಳು.

ನನ್ನ ಅಧ್ಯಯನಕ್ಕೆ ಸಂಪೂರ್ಣವಾಗಿ ಸಹಕರಿಸಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಇಂದಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಹಲವಾರು ಕಷ್ಟಗಳ ನಡುವೆಯಲ್ಲಿ ಹಗಲು-ಇರುಳು ಮಗನ ಓದನ್ನು ಮತ್ತು ಏಳ್ಗೆಯನ್ನು ಸದಾ ಬಯಸುತ್ತಿರುವ ತಂದೆ-ತಾಯಿ ಇವರುಗಳಿಗೆ ಹಾಗೂ ಅಕ್ಕ, ಅಣ್ಣ-ತಮ್ಮಂದಿರುಗಳಿಗೂ ನನ್ನ ನಮನಗಳು.

ಅಧ್ಯಯನದುದ್ದಕ್ಕೂ ಸಕಲ ರೀತಿಯಿಂದ ಸಹ ಮನಸ್ಕ ಸ್ನೇಹಿಗಳಾದ ಜಗದೀಶಕುಮಾರ ನಾಯಕ, ಹಣಮಂತ್ರಾಯ ದೊಡ್ಡಮನಿ, ಡಿ. ಓಬಯ್ಯ, ಅರುಣ್ ಜೋಳದ ಕೂಡ್ಲಿಗಿ ಹಾಗೂ ಎಂ.ಫಿಲ್ ತರಗತಿಯ ಸಹಪಾಠಿಗಳಾದ ಉಮಾಮಹೇಶ್ವರ, ಯಾಸ್ಮೀನ್, ವಿಜಯಶ್ರೀ, ಪದ್ಮಶ್ರೀ ಇವರಿಗೆ ವಂದನೆಗಳು.

ಗೆಳೆಯರಾದ ರಂಗನಾಥ ಕೆ. ಚಿಂತಾಮಣಿ, ಮಹೇಶ್, ಬಲಭೀಮ ದೇಸಾಯಿ, ಬಿ.ಎಚ್. ಶಹಾಪೂರ, ಮೋನಯ್ಯ ಬಸವತಂಪೂರ, ನಾರಾಯಣ, ಮೌನೇಶ ಶಾರದಳ್ಳಿ, ಹಣಮಂತ ಚಂದ್ಲಾಪೂರ ಹಾಗೂ ನನ್ನ ಯಶಸ್ಸಿಗೆ ಪ್ರೋತ್ಸಾಹಿಸುತ್ತಿರುವ ಪಿ.ಆರ್. ಪ್ರಮೀಳಾ ಅವರಿಗೂ ವಂದನೆಗಳು.

ಅಚ್ಚುಕಟ್ಟಾಗಿ ಅಕ್ಷರ ಜೋಡಣೆ ಮಾಡಿದ ಶ್ರೀನಿವಾಸ ಕೆ. ಕಲಾಲ್ ಭಾವನಾ ಗ್ರಾಫಿಕ್ಸ್, ಕಮಲಾಪುರ ಅವರಿಗೂ ನನ್ನ ವಂದನೆಗಳು.

ಪ್ರೀತಿಯ ಕೃತಜ್ಞತೆಗಳೊಂದಿಗೆ,

ಸ್ಥಳ : ವಿದ್ಯಾರಣ್ಯ

(ಮಹಾಂತಗೌಡ)
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅನುಬಂಧಗಳು

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಹೈದ್ರಾಬಾದ್ ಕರ್ನಾಟಕದ ವ್ಯಾಪ್ತಿಗೆ ಒಳಪಡುವ ಗುಲ್ಬರ್ಗಾ ಜಿಲ್ಲೆಯ ಸುರಪುರ ಶಹಾಪುರ ಮತ್ತು ಜೇವರ್ಗಿ ಈ ಮೂರು ತಾಲ್ಲೂಕುಗಳ ಗಡಿಯಾದ ಕೃಷ್ಣ ಮತ್ತು ಭೀಮಾ ನದಿಗಳ ಹರಿವಿನ ವ್ಯಾಪ್ತಿಯುಳ್ಳ ಪ್ರದೇಶವೇ 'ಸಗರನಾಡು'. ಪ್ರಾಚೀನ ಕಾಲದಿಂದಲೂ ಐತಿಹಾಸಿಕವಾಗಿ ಹಾಗೂ ಪೌರಾಣಿಕವಾಗಿ ಮತ್ತು ಧಾರ್ಮಿಕವಾಗಿ ಹೆಸರು ಪಡೆಧಿರುವ ಈ ನಾಡು ಚಾರಿತ್ರಿಕ ದೃಷ್ಟಿಯಿಂದಲೂ ಅತ್ಯಂತ ಮಹತ್ವ ಪಡೆದಿದೆ.

ಈ ಪ್ರದೇಶವನ್ನು ಕನ್ನಡದ ಅನೇಕ ಅರಸು ಮನೆತನಗಳಾದ ಶಾತವಾಹನರು, ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು ಹಾಗೂ ಸೇವಣರ ಆಳ್ವಿಕೆಗೆ ಒಳಪಟ್ಟಿತ್ತು. ತದನಂತರ ೧೭ನೇ ಶತಮಾನದ ಪೂರ್ವಾರ್ಧದಿಂದ ೧೯ನೇ ಶತಮಾನದ ಉತ್ತರಾರ್ಧದವರೆಗೆ ಸುಮಾರು ಎರಡುನೂರಾ ಇಪ್ಪತ್ತೇರಡು ವರ್ಷಗಳ ಕಾಲ ಈ ಪ್ರದೇಶವನ್ನು 'ಗೋಸಲ' ವಂಶದ ನಾಯಕರು ಸುರಪುರದಲ್ಲಿ ಸಂಸ್ಥಾನವನ್ನು ಕಟ್ಟಿ ಆಳ್ವಿಕೆ ಮಾಡಿದರು. ಅವರಲ್ಲಿ ಪಿತಾಂಬರ ಬಹರಿ ಪಿಡ್ಡನಾಯಕ, ಮುಮ್ಮಡಿ ಪಿಡ್ಡನಾಯಕ, ಮುಮ್ಮಡಿ ಪಾಮನಾಯಕ (ರಾಘವ) ಹಿರಿಯ ವೆಂಕಟಪ್ಪ ನಾಯಕ ಹಾಗೂ ನಾಲ್ವಡಿ ವೆಂಕಟಪ್ಪ ನಾಯಕರಲ್ಲದೆ ಇನ್ನೂ ಅನೇಕ ನಾಯಕರು ಸುರಪುರ ಸಂಸ್ಥಾನವನ್ನು ಕಟ್ಟಿ ಬೆಳೆಸುವುದರಲ್ಲಿ ಮಹತ್ವದ ಪಾತ್ರವಹಿಸಿದರು. ಇವರು ಸಾಹಿತ್ಯ, ಸಂಸ್ಕೃತಿ, ಭಾಷೆ ಹಾಗೂ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ರಾಜಾಶ್ರಯ ನೀಡಿ ಪೋಷಿಸಿ ಬೆಳೆಸುವಲ್ಲಿ ಇವರ ಪಾತ್ರ ಹಿರಿದಾದದ್ದು.

ಧರ್ಮ ಹಾಗೂ ಕಲೆಗೆ ಹೆಚ್ಚು ಮಹತ್ವ ನೀಡಿದ ಈ ಪ್ರದೇಶವು ತನ್ನದೆಯಾದ ಐತಿಹಾಸಿಕ

ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಕಾರಣ ಹಿಂದೂ ಹಾಗೂ ಮುಸ್ಲಿಂರ ಭಾವೈಕ್ಯತೆಗೆ ಸಾಕ್ಷಿಯಾದ 'ದಕ್ಷಿಣದ ಕಾಶಿ' ಎಂದೇ ಪ್ರಸಿದ್ಧಿ ಪಡೆದ ತಿಂಥಣಿ ಮೌನೇಶ್ವರ ಹಾಗೂ ಕಾಲಜ್ಞಾನ ವಚನಗಳಿಗೆ ಹೆಸರುವಾಸಿಯಾದ ಕೊಡೇಕಲ್ಲ ಬಸವಣ್ಣನಂತ ಮಹಾನ್ ಪುರುಷರ ಆದರ್ಶ ಜೀವನ, ಅವರನ್ನು ಕುರಿತ ಹಬ್ಬ ಹರಿದಿನದ ಆಚರಣೆಗಳು ಧಾರ್ಮಿಕ ಭಾವೈಕ್ಯತೆಗೆ ಸಾಕ್ಷಿಯಾಗಿವೆ. ಹಾಗೆಯೇ ಇಲ್ಲಿನ 'ಗರುಡಾದ್ರಿಕಲೆ'*ಯು ಜಾಗತೀಕ ಮಟ್ಟದಲ್ಲಿ ಹೆಸರುವಾಸಿಯಾಗಿರುವುದು ಸುರಪುರದ ಕಲೆಯ ಮಹತ್ವವನ್ನು ಸಾರುತ್ತದೆ.

ಸ್ವಾತಂತ್ರ ಪೂರ್ವದಲ್ಲಿ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ 'ಸಗರನಾಡು' ಮರಾಠಿ, ಉರ್ದು, ಅಲ್ಲದೆ ಇತರ ಅನ್ಯ ಭಾಷೆಗಳ ಪ್ರಾಬಲ್ಯವೇ ಹೆಚ್ಚಾಗಿತ್ತು. ಹೀಗಾಗಿ ಇಲ್ಲಿ ಕನ್ನಡ ಭಾಷೆಗೆ ಯಾವ ಪ್ರಾಧಾನ್ಯತೆಯಿಲ್ಲದೆ ತಿರಸ್ಕಾರಕ್ಕೊಳಗಾಗಿತ್ತು. ಇಂತಹ ಕಠಿಣ ಸಂಧರ್ಭದಲ್ಲಿ ಸುರುಪುರದ ಕೇಂದ್ರಬಿಂದುವಾದ 'ರಂಗಂಪೇಟೆ' ಎಂಬಲ್ಲಿ ಕನ್ನಡ ಮಾತನಾಡುವ ಪ್ರೇಮಿಗಳು ಒಂದಡೆ ಸೇರಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪ್ರಸಾರ ಮತ್ತು ಪ್ರಚಾರಕ್ಕೆ ಕಂಕಣಬದ್ಧರಾದರು. ಈ ಹಿನ್ನೆಲೆಯಲ್ಲಿ ರಂಗಂಪೇಟೆದ ಕನ್ನಡ ಬಳಗವು "ಕನ್ನಡ ಸಾಹಿತ್ಯ ಸಂಘ"ವನ್ನು ಏಪ್ರಿಲ್ ೫, ೧೯೪೩ರಲ್ಲಿ ಸ್ಥಾಪನೆ ಮಾಡಿತು.

---

* ೧೭ನೇ ಶತಮಾನದಲ್ಲಿ ಸ್ಥಾಪನೆಯಾದ ಸುರಪುರ ಸಂಸ್ಥಾನವು ಕಲೆ, ಸಾಹಿತ್ಯ ವಾಸ್ತುಶಿಲ್ಪ ಕಲಾವಿದರಿಗೆ ರಾಜಾಶ್ರಯ ನೀಡಿ ಅವರಿಗೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದರು. ಅಂತಹ ಮನೆತನಗಳಲ್ಲಿ ಚಿತ್ರಕಲೆಯ (ಮನೆತನ) ಗರುಡಾದ್ರಿ ಮನೆತನವು ಪ್ರಸಿದ್ಧಿ ಪಡೆದಿದೆ. ಈ ಮನೆತನದ ಮೂಲ ಪುರುಷ ಚೇಡಿವೇಲಯ್ಯ. ಎರಡನೇ ಬಾನಯ್ಯನ ಕಾಲದಲ್ಲಿ ಈ "ಗರುಡಾದ್ರಿ ಕಲೆ" ಉತ್ತುಂಗದಲ್ಲಿತ್ತು. ಆ ಮನೆತನದ ಹೆಸರಿನಿಂದಲೇ ಆ ಕಲೆಯನ್ನು ಗುರುತಿಸುತ್ತಾರೆ. ದಖನ್ ಚಿತ್ರಕಲೆಗಳಲ್ಲಿ ಸುರಪುರದ ಗರುಡಾದ್ರಿ ಕಲೆ ಪ್ರಮುಖವಾದದ್ದು. ಈ ಗರುಡಾದ್ರಿ ಚಿತ್ರಕಲೆಯಲ್ಲಿ ಮೂರು ಪ್ರಮುಖ ವಿಧಗಳಿವೆ.

೧. **ಭಿತ್ತಿಚಿತ್ರಗಳು:** ಈ ಚಿತ್ರಗಳಲ್ಲಿ ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಕೋಟೆಗಳಲ್ಲಿ ವಿಷ್ಣುವಿನ ಚಿತ್ರ ಹನುಮನ ಗರುಡ ಚಿತ್ರಗಳು ಪ್ರಮುವಾಗಿವೆ.

೨. **ಹಸ್ತಪ್ರತಿ ಚಿತ್ರ:** ಸುರಪುರದ ಅರಸುಮನೆತನಗಳಲ್ಲಿ, ಮಠಗಳಲ್ಲಿ ಈ ಹಸ್ತಪ್ರತಿ ಚಿತ್ರಗಳನ್ನು ಕಾಣುತ್ತೇವೆ. ರೇಖಾಚಿತ್ರ ವರ್ಣಚಿತ್ರ ಪ್ರಮುಖವಾಗಿ ಕಂಡುಬರುತ್ತವೆ. ಇವುಗಳಲ್ಲಿ ಅರಸರ ಜನ್ಮಕುಂಡಲಿ, ಚನ್ನಬಸವ ಪುರಾಣ, ಲಕ್ಷ್ಮೀಶನ ಜೈಮಿನಿಭಾರತ ವಿಷಯಧಾರಿತ ಚಿತ್ರಗಳು ಕಾಣಸಿಗುತ್ತವೆ.

೩. **ಸಂಕೀರ್ಣ ಚಿತ್ರಗಳು:** ಇಲ್ಲಿ ಪೌರಾಣಿಕ, ಧಾರ್ಮಿಕ ಚಿತ್ರಗಳು ಕಾಣಿಸುತ್ತವೆ.

ಮುಖ್ಯವಾಗಿ ವ್ಯಕ್ತಿಚಿತ್ರಗಳು ಸಂಯೋಜನಾ ಚಿತ್ರಗಳು ಕಾಣಿಸುತ್ತವೆ. ಹೀಗೆ 'ಗರುಡಾದ್ರಿ ಕಲೆ' ವಿಶ್ವಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಈ ಚಿತ್ರಕಲೆಯನ್ನು ಕುರಿತಂತೆ ಪ್ರಮುಖವಾಗಿ ಮಲ್ಲಿಕಾರ್ಜುನ ಸಿ. ಬಾಗೋಡಿಯವರು, ಎಂ.ಫಿಲ್, ಪಿಎಚ್.ಡಿ ಸಂಶೋಧನೆಯನ್ನು ಮಾಡಿದ್ದಾರೆ. ಹಾಗೂ ವಿಜಯ ಹಾಗರಗುಂಡಿಗಿಯವರ 'ಗರುಡಾದ್ರಿ' ಚಿತ್ರಗಳು ಇಂಗ್ಲೆಂಡಿನಲ್ಲಿ ಪ್ರದರ್ಶನವಾಗುತ್ತಿವೆ.

ಕವಿಶ್ರೇಷ್ಠರಾದ "ಕವಿಚೂತನವನ ಚೈತ್ರ"ರೆಂದೇ ಖ್ಯಾತರಾದ ದೇವಾಪುರದ ಲಕ್ಷ್ಮೀಶ ಹಾಗೂ ಆದ್ಯವಚನಕಾರರಾದ ಜೇಡರ ದಾಸಿಮಯ್ಯ ಅವರಂತಹ ಶ್ರೇಷ್ಠ ಸಾಹಿತಿಗಳ ಆದರ್ಶದ ತತ್ವಗಳಿಂದ ಪ್ರಭಾವಿತರಾದಂತಹ ಈ ನಾಡಿನ ಸಾಹಿತ್ಯಾಸಕ್ತರು ಸಾಹಿತ್ಯಾಭಿಮಾನಿಗಳಾದ ಶ್ರೀ ರಾಮಣ್ಣ ಬೋಡಾ, ಶ್ರೀ ಅಡಿವೆಪ್ಪಾ ಗೋಲಗೇರಿ, ಶ್ರೀ ಡಿ. ಗೋವಿಂದಪ್ಪ, ಶ್ರೀ ಎಂ.ಆರ್. ಬುದ್ದಿವಂತ ಶೆಟ್ಟಿ, ಶ್ರೀ ಸಗರ ಕೃಷ್ಣಚಾರ್ಯ ಮತ್ತು ಸೀತಾರಾಮ ಜಾಗೀರದಾರ್ ಹಾಗೂ ಗಳೆಯರ ಬಳಗವು "ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ"ವನ್ನು ಕಟ್ಟಿ ಬೆಳೆಸುವಲ್ಲಿ ಯಶಸ್ವಿಯಾದರು.

ಈ ಸಂಘವು ಮೊಟ್ಟಮೊದಲಬಾರಿಗೆ 'ಅರುಣಾ' ಕೈಬರಹ(೧೯೪೩)ದ ಮಾಸ ಪತ್ರಿಕೆಯನ್ನು ಪ್ರಾರಂಭಿಸಿತು. ನಂತರ ಕೃತಿಗಳನ್ನು ಪ್ರಕಟಿಸುವ ಉದ್ದೇಶದಿಂದ 'ಗ್ರಂಥಮಾಲೆ'ಯನ್ನು ಪ್ರಾರಂಭಿಸುವ ಉದ್ದೇಶದಿಂದಲೇ ಆರಂಭದಲ್ಲಿ 'ಅರುಣಾ ಗ್ರಂಥ' ಮಾಲೆ ಹಾಗೂ 'ಮಿರಿಯಾಲ ರಂಗಯ್ಯ' ಸ್ಮಾರಕ ಮಾಲೆಗಳನ್ನು ಆರಂಭಿಸಿತು. ಈ ಸಂಘದ ಚೊಚ್ಚಲ ಕೃತಿಯಾದ 'ಮಧುರ ಮಿಲನ' (೧೯೪೪) ಕಥಾಸಂಕಲನ, 'ಕವನ ಕುಸುಮ' (೧೯೫೫) ಕವನ ಸಂಕಲನ, ಸಾಹಿತ್ಯ ಸುಧೆ (೧೯೬೪) ಪ್ರಬಂಧ ಸಂಕಲನ, ಬೃಂದಾವನ (೧೯೬೫) ಕವನ ಸಂಕಲನ ಗ್ರಂಥ ಸಂಪಾದನ ಶಾಸ್ತ್ರ ಪರಿಚಯ (೧೯೭೮), ಆಧುನಿಕ ಭಾರತದ ಸಪ್ತರ್ಷಿಗಳು (೧೯೮೦) ಹೀಗೆ ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯದ ಸಾರಸತ್ವ ಲೋಕಕ್ಕೆ ನೀಡಿ ಇತ್ತೀಚೆಗೆ ೨೦೦೪ರಲ್ಲಿ ತನ್ನ 'ವಜ್ರಮಹೋತ್ಸವ'ದ ಸಂಭ್ರಮವನ್ನು ಆಚರಿಸಿಕೊಂಡಿತು.

ಅಧ್ಯಯನದ ಉದ್ದೇಶ

ಸುರಪುರ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯ ವಿಚಾರಗಳ ನೆಲೆಯಲ್ಲಿ ಚಿಂತನೆ ಮಾಡಿದ ಪ್ರಮುಖರಲ್ಲಿ ಶ್ರೀ ಎಂ.ಆರ್. ಬುದ್ದಿವಂತಶೆಟ್ಟರು, ದಿ. ಶ್ರೀ ರಾಮಣ್ಣಬೋಡಾ, ದಿ. ಶ್ರೀ ಸಗರ ಕೃಷ್ಣಾಚಾರ್ಯರು ಅಂದಿನ ವಸಾಹತು ಸಂದರ್ಭದಲ್ಲಿ ಮತ್ತು ಹೈದ್ರಾಬಾದ್ ನಿಜಾಮರ ಆಳ್ವಿಕೆ ಸಂದರ್ಭದಲ್ಲಿ ಕನ್ನಡ ಪ್ರದೇಶಗಳನ್ನು ಒಂದೆಡೆ ಸೇರಿಸುವಂತ ಮನಸ್ಸುಗಳನ್ನು ಸೃಷ್ಟಿಸುವಂತಹ ಕೆಲಸವನ್ನು ಮಾಡಿದ ಕೀರ್ತಿ, ಶ್ರೇಯಸ್ಸು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಸಲ್ಲುತ್ತದೆ.

ಪ್ರಾರಂಭದಲ್ಲಿ ಈ ಸಾಹಿತ್ಯ ಸಂಘದ ಮುಂದೆ ಅನೇಕ ಸವಾಲುಗಳು ಎದುರಾದದ್ದು ನಿಜ. ಈ ಸಂಘದ ಅನೇಕ ಹಿರಿಯರು ಭಾಷೆಯ ಅಡಿಯಲ್ಲಿ ಸಾಂಸ್ಕೃತಿಕ ವಿಚಾರಗಳನ್ನು ಒಂದೆಡೆ ಕಲೆಹಾಕಿದ್ದು ಹೇಗೆ? ಸಂಘದ ಮಹತ್ವ ಮತ್ತು ಇದರ ಕಾರ್ಯ ಯೋಜನೆಗಳೇನು? ಅಲ್ಲದೆ ಸಂಘವು ವಿವಿಧ ಹಂತಗಳಲ್ಲಿ ಬೆಳೆದು ಬಂದ ದಾರಿ ಹಾಗೂ ನಾಡಿನ ಏಕೀಕರಣದಂತಹ ಸಂದರ್ಭದಲ್ಲಿ ಈ ಸಂಘವು ವಹಿಸಿದ ಪಾತ್ರವೇನು? ಜೊತೆಗೆ ಅದರ ಧ್ಯೇಯೋದ್ದೇಶಗಳೇನು? ನಿಲುವುಗಳೇನು? ಎಂಬಂಥ ಹಲವು ಅಂಶಗಳನ್ನು ಈ ಅಧ್ಯಯನದುದ್ದಕ್ಕೂ ಚರ್ಚಿಸಲಾಗಿದೆ.

ಅಲ್ಲದೆ ಬ್ರಿಟೀಷ್ ಭಾರತದಲ್ಲಿ ನಾಡು ನುಡಿಯನ್ನು ಕಟ್ಟಿ ಬೆಳೆಸುವುದರ ಜೊತೆಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದ ಈ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕುರಿತಂತೆ ಇದುವರೆಗೂ ಯಾವುದೇ ಅಧ್ಯಯನಗಳು ನಡೆದಿಲ್ಲದಿರುವುದರಿಂದ ಈ ವಸ್ತು ವಿಷಯವನ್ನು ಕುರಿತಂತೆ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಳ್ಳಲಾಯಿತು.

ಅಧ್ಯಾಯನದ ವ್ಯಾಪ್ತಿ

"ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ : ಒಂದು ಅವಲೋಕನ" ಎಂಬ ವಿಷಯವನ್ನು ಕೇಂದ್ರಬಿಂದುವನ್ನಾಗಿಸಿಕೊಂಡ ಈ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಮತ್ತು ಮಿತಿಯನ್ನು ಒಳಗೊಂಡಿದೆ. ಸಂಘ ಹುಟ್ಟಿದ ಸಂದರ್ಭ. ಹೈದ್ರಾಬಾದ್ ನಿಜಾಂನ ದಬ್ಬಾಳಿಕೆ ಹಾಗೂ ಸ್ವಾತಂತ್ರ್ಯ ಪೂರ್ವ ಸಂದರ್ಭದಲ್ಲಿ ಅದು ಬೆಳೆದು ಬಂದ ವಿವಿಧ ಹಂತಗಳು ಹಾಗೂ ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗೆ ಅದರ ಕೊಡುಗೆಗಳನ್ನು ಕುರಿತಂತೆ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಒಟ್ಟು ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಅದನ್ನು ಪರಿವಿಡಿ ರೂಪದ ಈ ಕೆಳಗಿನ ಅಂಶಗಳಿಂದ ತಿಳಿಯಬಹುದಾಗಿದೆ.

ಒಂದನೆಯ ಅಧ್ಯಾಯದಲ್ಲಿ ಒಟ್ಟಾರೆ ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪವನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಸುರಪುರ ತಾಲ್ಲೂಕಿನ ಸಾಂಸ್ಕೃತಿಕ ಪರಿಸರವನ್ನು ಕುರಿತು ಚರ್ಚಿಸಲಾಗಿದೆ. ಭೌಗೋಳಿಕ ಹಿನ್ನೆಲೆ ಐತಿಹಾಸಿಕ ಮಹತ್ವ, ರಾಜಕೀಯ ಮಹತ್ವ ಸಾಮಾಜಿಕ ಜೀವನ, ಧಾರ್ಮಿಕ ಆಚರಣೆಗಳು ಹಾಗೂ ತಾಲ್ಲೂಕಿನ ಸಾಹಿತ್ಯಿಕ ಪರಿಸರದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ "ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ"ವನ್ನು ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ನೋಡಲಾಗಿದೆ. ಕನ್ನಡ ಸಾಹಿತ್ಯ ಸಂಘ ಹುಟ್ಟಿನ ಸಂದರ್ಭದಲ್ಲಿ ಗಡಿಭಾಗದಲ್ಲಿ ಅನ್ಯ ಭಾಷೆಗಳ ಪ್ರಾಬಲ್ಯ, ಸುರಪುರದ ಪರಿಸರದಲ್ಲಿನ ಅನೇಕ ಚಳುವಳಿಗಳು, ಅಧಿವೇಶನಗಳು ಮತ್ತು ರಜಾಕಾರರ ಹಾವಳಿಯನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಲ್ಲದೆ ೧೯೪೭-೪೮ರ ಸಂದರ್ಭದಲ್ಲಿ ಸ್ಥಳೀಯ ಪತ್ರಿಕೆಗಳು ಹಾಗೂ ಈ ಮುಂಚಿನ ಸಂಘ ಸಂಸ್ಥೆಗಳು ನಿಜಾಂನ ಅನ್ಯ ಭಾಷಾ ಧೋರಣಾ ನೀತಿಯನ್ನು ಕುರಿತಂತೆಯೂ ಕೂಡ ಚರ್ಚೆಗೆ ಒಳಪಡಿಸಲಾಗಿದೆ.

ಸಾಹಿತ್ಯ ಸಂಘವು ಸ್ವಾತಂತ್ರ್ಯ ಪೂರ್ವಹಂತ, ಕರ್ನಾಟಕ ಏಕೀಕರಣ ಹಂತ ಹಾಗೂ ಕರ್ನಾಟಕ ಏಕೀಕರಣ ನಂತರದ ಹಂತದ ಮೂರು ಹಂತಗಳಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಸಮೃದ್ಧಿಯ ಬಗೆಗೆ ಈ ಸಂಘವು ತೆಗೆದುಕೊಂಡ ಮಹತ್ವದ ನಿರ್ಣಯಗಳನ್ನು ಅಲ್ಲದೆ ಆ ನಿಟ್ಟಿನಲ್ಲಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿದ ಬಗೆಯನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ "ಕನ್ನಡ ಸಾಹಿತ್ಯ ಸಂಘದ ಸಾಹಿತ್ಯಿಕ ಪರಿಸರ"ವನ್ನು ಕುರಿತು ಚರ್ಚಿಸಿ ವಿಶ್ಲೇಷಿಸಲಾಗಿದೆ. ಸಂಘ ಸ್ಥಾಪನೆಯ ಪ್ರಮುಖ ಕಾರಣಕರ್ತರು, ವಾರ್ಷಿಕ ಆಚರಣೆಗಳ ಮೂಲಕ ಕನ್ನಡ ಬೆಳೆಸಿದ ಬಗೆ ಜೊತೆಗೆ ಸಾಹಿತ್ಯಕ ಪ್ರಕಟಣೆಗಳು ತಿಳಿಸುವುದಲ್ಲದೆ ಪ್ರಕಟಣೆಯ ತಾತ್ವಿಕತೆಯ ಗುರಿ. ಉದ್ದೇಶಗಳನ್ನು ಕೂಡ ಈ ಅಧ್ಯಾಯದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಯ ತಾತ್ವಿಕತೆ ಆಶಯ ಗುರಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬರುವ ಮುಂಚೆ ಅವುಗಳದ್ದೇ ಆದ ಗುರಿ ಉದ್ದೇಶ, ಆಶಯಗಳೊಂದಿಗೆ ಹಾಗೂ ತನ್ನದೇಯಾದ ಬದ್ಧತೆಗಳೊಂದಿಗೆ ಪ್ರಕಟಣೆ ಮತ್ತು ಪ್ರಸಾರ ಕಾರ್ಯವನ್ನು ಹಮ್ಮಿಕೊಳ್ಳುವ ಬಗ್ಗೆಯನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಾಹಿತ್ಯ ಸಂಘದ ಪ್ರಸ್ತುತ ಸಮಸ್ಯೆ ಮತ್ತು ಸವಾಲುಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡು ಅವುಗಳಿಂದ ಹೊರಬರಲು ಪರ್ಯಾಯ ಮತ್ತು ಹೊಸ ಸಾಧ್ಯತೆಗಳನ್ನು ಕೂಡ ಸಂಘದ ಬೆಳವಣಿಗೆಯ ದೃಷ್ಟಿಯಿಂದ ಇಲ್ಲಿ ಚರ್ಚಿಸಿ ವಿಶ್ಲೇಷಿಸಲಾಗಿದೆ.

ಕೊನೆಯ ಏಳನೇ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಫಲಿತಗಳನ್ನು ಅಭಿವ್ಯಕ್ತಿಸಲಾಗಿದೆ. ಅಲ್ಲದೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸಕರಾತ್ಮಕ ಬೆಳವಣಿಗೆಗೆ ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ ಸಂಘ ಪ್ರಾರಂಭವಾದಾಗಿನಿಂದ ಭೇಟಿ ನೀಡಿದ ಸಾಹಿತಿ ಗಣ್ಯರ ಮತ್ತು ರಾಜಕಾರಣಿ ಗಣ್ಯರ ಅಭಿಪ್ರಾಯವನ್ನು ಅನುಬಂಧದಲ್ಲಿ ನೀಡಲಾಗಿದೆ. ಜೊತೆಗೆ ಛಾಯಾಚಿತ್ರಗಳನ್ನು, ವಕ್ತೃ ವಿವರಗಳನ್ನು ಸಂದರ್ಶನದ ಮಾಹಿತಿಯನ್ನು ನೀಡಲಾಗಿದೆ.

ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಈ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಬಗೆಗೆ ನಿರ್ಲಕ್ಷ್ಯ ನೀತಿಯನ್ನು ಅನುಸರಿಸಿದೆ ಎಂದರೆ ತಪ್ಪಾಗದು. ಕರ್ನಾಟಕದ ಸರ್ಕಾರವು ಕೂಡ ಈ ಸಾಹಿತ್ಯ ಸಂಘ ಕುರಿತಂತೆ ಮಲತಾಯಿ ಧೋರಣೆ ನೀತಿಯನ್ನು ಅನುಸರಿಸುತ್ತಿರುವುದು ಒಂದು ವಿಪರ್ಯಾಸವೇ ಸರಿ.

ಅಧ್ಯಾಯ ೨

ಸುರಪುರ ತಾಲ್ಲೂಕಿನ ಸಾಂಸ್ಕೃತಿಕ ಪರಿಸರ

೧. ಭೌಗೋಳಿಕ ಹಿನ್ನೆಲೆ

೨. ಐತಿಹಾಸಿಕ ಮಹತ್ವ

೩. ರಾಜಕೀಯ ಮಹತ್ವ

೪. ಸಾಮಾಜಿಕ ಜೀವನ

೫. ಧಾರ್ಮಿಕ ಆಚರಣೆಗಳು

೬. ಸಾಹಿತ್ಯಕ ಮಹತ್ವ

ಸುರಪುರ ತಾಲ್ಲೂಕಿನ ಸಾಂಸ್ಕೃತಿಕ ಪರಿಸರ

ಕಲ್ಬುರ್ಗಿ ಜಿಲ್ಲೆಯು ಕರ್ನಾಟಕದ ಉಳಿದೆಲ್ಲ ಜಿಲ್ಲೆಗಳಿಗಿಂತ ಸಾಂಸ್ಕೃತಿಕವಾಗಿ ಸಂಪದ್ಭರಿತ ಪ್ರದೇಶವಾಗಿದೆ. ಅದರಲ್ಲಿ ಸುರಪುರ ತಾಲ್ಲೂಕು ಅತ್ಯಂತ ಮಹತ್ವವಾದದ್ದು. ಈ ತಾಲ್ಲೂಕು ಪ್ರಾಚೀನ ಕಾಲದಿಂದಲೂ ಮತ್ತು ಐತಿಹಾಸಿಕ ದೃಷ್ಟಿಯಿಂದಲೂ ತನ್ನದೆಯಾದ ಸಾಂಸ್ಕೃತಿಕ ಮಹತ್ವವನ್ನು ಪಡೆದಿದೆ. ಇಲ್ಲಿ ಪ್ರಾಗೈತಿಕ ಇತಿಹಾಸ ಕಾಲಘಟ್ಟದ ಅವಶೇಷಗಳ ಕುರುಹುಗಳು ಈ ತಾಲ್ಲೂಕಿನಲ್ಲಿ ದೊರೆತಿವೆ. ಅವುಗಳಲ್ಲಿ ಈ ಪ್ರದೇಶದ ವ್ಯಾಪ್ತಿಗೆ ಒಳಪಡುವ ಸ್ಥಳಗಳಾದ ಹುಣಸಗಿ, ಹಗರಟಗಿ, ಕೆಂಬಾವಿ, ಎಡಹಳ್ಳಿ ಮತ್ತು ಬೂದಿಹಾಳ ಮುಂತಾದ ಕಡೆಗಳಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಆದಿಮಾನವ ನೆಲೆಸಿದ ಹಾಗೂ ಆತನು ಬಳಕೆಮಾಡಿದ ಕೈಗೊಡಲು, ಬಲ್ಲೆ, ಕೈಗುದ್ದಲಿ ಹಾಗೂ ಉಳಿ ಮುಂತಾದವುಗಳು ಈ ಪ್ರದೇಶದಲ್ಲಿ ದೊರೆತಿವೆ.

ಪ್ರಾಚೀನ ಕನ್ನಡ ನಾಡನ್ನು ಆಳಿದ ಅನೇಕ ಅರಸು ಮನೆತನಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು ಹಾಗೂ ದೇವಗಿರಿಯ ಯಾದವರು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದಾರೆ. ಅಲ್ಲದೆ ಕ್ರಿ.ಶ. ೧೬೩೪ರಲ್ಲಿ 'ಗೋಸಲ' ವಂಶದ ಬಹರಿ ಪಿತಾಂಬರಿ ಪಿಡ್ಡನಾಯಕ ಸುರಪುರ ಸಂಸ್ಥಾನವನ್ನು ಮೂಲತಃ 'ವಾಗನಗಿರಿ'ಯಲ್ಲಿ ಸ್ಥಾಪನೆ ಮಾಡಿದನು. ಈತನು ಶತ್ರುಗಳ ದಾಳಿಗಳಿಂದ ರಕ್ಷಿಸಿಕೊಳ್ಳಲು 'ಭವ್ಯ'ವಾದ ಕೋಟೆಯನ್ನು ನಿರ್ಮಿಸಿದನು. ಮುಂದೆ ಕ್ರಿ.ಶ. ೧೭೦೭ರಲ್ಲಿ ಪಿಡ್ಡನಾಯಕನ ಕಾಲದಲ್ಲಿ ಈ ಸಂಸ್ಥಾನವನ್ನು 'ವಾಗನಗಿರಿ'ಯಿಂದ 'ಸುರಪುರ'ಕ್ಕೆ ಸ್ಥಳಾಂತರಿಸುವುದರೊಂದಿಗೆ ಅದನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಸುಮಾರು ೨೨೨ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಇವರ ಕಾಲದಲ್ಲಿ ಈ ಪ್ರದೇಶವು ರಾಜಕೀಯವಾಗಿ, ಆರ್ಥಿಕವಾಗಿ, ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ತುಂಬಾ ಮಹತ್ವದ ಏಳಿಗೆಯನ್ನು ಸಾಧಿಸಿತು. ಈ ರಾಜಮನೆತನಗಳ ಆಳ್ವಿಕೆಯ ಅವಧಿಯಲ್ಲಿ

ಕನ್ನಡ ನಾಡು-ನುಡಿ, ಸಾಹಿತ್ಯ ಸಂಸ್ಕೃತಿಯು ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ನಿಜಾಂನ ಆಳ್ವಿಕೆ ಸಂದರ್ಭದಲ್ಲಿ ಕನ್ನಡ ಭಾಷೆಯು ಅನ್ಯಭಾಷೆಗಳಿಂದ ಸಂಪೂರ್ಣವಾಗಿ ತುಳಿತಕ್ಕೆ ಒಳಗಾದಂತ ಸಂದರ್ಭ(ಮರಾಠಿ, ಉರ್ದು ಮತ್ತು ತೆಲುಗು)ದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಈ 'ಗೋಸಲ'ವಂಶದ ಅರಸರು ಕನ್ನಡ ನುಡಿಗೆ ರಾಜಾಶ್ರಯ ನೀಡಿ ಪೋಷಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಅಲ್ಲದೆ ಕ್ರಿ.ಶ. ೧೮೫೭ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಕ್ಷಿಣ ಭಾರತದ ನಾಯಕತ್ವವನ್ನು ವಹಿಸಿದ ಕೀರ್ತಿ ಸುರಪುರ ಸಂಸ್ಥಾನಕ್ಕೆ ಹಾಗೂ ಹುಟ್ಟು ಹೋರಾಟಗಾರನಾದ ನಾಲ್ವಡಿ ವೆಂಕಟಪ್ಪನಾಯಕನಿಗೆ ಸಲ್ಲುತ್ತದೆ.

ಸುರಪುರ ತಾಲ್ಲೂಕು ರಾಜಕೀಯವಾಗಿ ಮಹತ್ವ ಪಡೆದಷ್ಟೆ ಧಾರ್ಮಿಕ ಹಾಗೂ ಸಾಹಿತ್ಯಿಕವಾಗಿ ವಿಶೇಷತೆಯನ್ನು ಪಡೆದುಕೊಂಡಿದೆ. ಹೀಗಾಗಿ ಈ ನೆಲದಲ್ಲಿ ಕವಿಪುಂಗರು, ಸಂತರು, ಶರಣರು, ದಾಸರು ಹಾಗೂ ವಚನಕಾರರು ಹುಟ್ಟಿ ಬೆಳೆಯಲು ಸಾಧ್ಯವಾಯಿತು. 'ಜೈಮಿನಿಭಾರತ'ದ ಕರ್ತೃ ಲಕ್ಷ್ಮೀಶ ಜನಿಸಿದ್ದು ಕೃಷ್ಣಾನದಿಯ ಮೇಲ್ದಂಡೆ ನಾಡಾದ ಸುರಪುರ ತಾಲ್ಲೂಕಿನ ದೇವಪುರದಲ್ಲೇ. ಅಲ್ಲದೆ ವಚನ ಸಾಹಿತ್ಯದ ಗಂಗೋತ್ರಿಯ ನಾಡೆಂದು ಹೆಸರಾದ ಸುರಪುರ ಅನೇಕ ಶರಣರು, ದಾಸರು, ಸಂತರು ಹಾಗೂ ಸೂಫಿಗಳಿಗೆ ಜನ್ಮವಿತ್ತ ಪವಿತ್ರ ತಾಣವಾಗಿದೆ. ಇದರಲ್ಲಿ ಮುದುನೂರಿನ ಜ್ಯೋತಿಯೆಂದು ಹೆಸರಾದ ಜೇಡರ ದಾಸಿಮಯ್ಯನ ವಚನಗಳು ಈ ನಾಡಿನ ವೈಚಾರಿಕತೆಯನ್ನು ಸಾಕ್ಷೀಕರಿಸುತ್ತವೆ. ಜೊತೆಗೆ ಸಮಾಜಕ್ಕೆ ಒಂದು ಹೊಸ ಸಂದೇಶವನ್ನು ನೀಡಿವೆ.

ಕಲೆಗೆ ಇನ್ನೊಂದು ಹೆಸರೆ ಸುರಪುರ ಎಂದರೆ ಅತಿಶಯೋಕ್ತಿಯಾಗಲಾರದೇನೋ ಏಕೆಂದರೆ ಕಲೆಯಲ್ಲಿಯೇ ವಿಶಿಷ್ಟವಾದ 'ಗರುಡಾದ್ರಿಕಲೆ'ಯನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ್ದು ಈ ಸುರಪುರ ಸಂಸ್ಥಾನದ ಇನ್ನೊಂದು ವಿಶಿಷ್ಟ ಸಾಧನೆಯೇ ಸರಿ.

ಸರ್ವಧರ್ಮ ಸಮನ್ವಯತೆಯನ್ನು ಸಾರಿದ ಕೀರ್ತಿ ಈ ಪ್ರದೇಶಕ್ಕೆ ಸಲ್ಲುತ್ತದೆ. ಅಂತೆಯೇ ಹಿಂದೂ ಮುಸ್ಲಿಂರನ್ನು ಸಮಾನ ದೃಷ್ಟಿಯಿಂದ ಕಂಡ ಸಂತ ಸೂಫಿ (ತಿಂಥಣಿ ಮೌನೇಶ್ವರ) ಮೌನೇಶ್ವರ ಜನಿಸಿದ್ದು ಈ ತಾಲ್ಲೂಕಿನ 'ದೇವರಗೋನಾಲ'ದಲ್ಲಿ. ಈತನ ಸಮಾದಿಯ ಮೇಲೆ 'ಭವ್ಯ'ವಾದ ಗೋರಿಯನ್ನು ನಿರ್ಮಾಣ ಮಾಡಿದ್ದು ಅದು 'ಇಂಡೋ-ಇಸ್ಲಾಮಿಕ್' (ಸಾರ್ಸನಿಕ್) ಶೈಲಿಯನ್ನು ಹೊಂದಿದೆ. ಇಲ್ಲಿ ಮುಸ್ಲಿಂರು ನಮಾಜ ಮಾಡಿದರೆ, ಹಿಂದೂಗಳು ಪೂಜಿಸುವ ಅಪರೂಪದ ಕ್ಷಣಗಳು ಇನ್ನೂ ಜೀವಂತವಾಗಿವೆ. ಇಂತಹ ವಿಶಿಷ್ಟ ಸಾಲಿಗೆ ಸೇರುವ ಇನ್ನೊಂದು ಐತಿಹಾಸಿಕ ಸ್ಥಳ ಕೊಡೇಕಲ್. ಕಾಲಜ್ಞಾನ ವಚನಗಳಿಗೆ ಹೆಸರಾದ ಬಸವಣ್ಣ ಜನಿಸಿದ್ದು ಇಲ್ಲಿಯೇ. ಜಲದುರ್ಗ 'ಜಲಪಾತ' ಎಂದು ಹೆಸರಾದ ಕೃಷ್ಣಾನದಿಯ ಜಲಪಾತವಿರುವುದು ನಾರಾಯಣಪುರದ ಹತ್ತಿರದಲ್ಲಿಯೇ. ಇಲ್ಲಿ 'ಛಾಯಾಭಗವತಿ' ಎಂಬ ಸೂರ್ಯದೇವನ ಪತ್ನಿಯನ್ನು ಪೂಜಿಸುವುದು ಇಲ್ಲಿಯ ಇನ್ನೊಂದು ವಿಶೇಷತೆಯಾಗಿದೆ.

ಒಟ್ಟಿನಲ್ಲಿ ಸುರಪುರ ತಾಲ್ಲೂಕು ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲಘಟ್ಟದವರೆಗೆ ತನ್ನದೆಯಾದ ಸಾಂಸ್ಕೃತಿಕ ಮಹತ್ವವನ್ನು ಉಳಿಸಿಕೊಂಡು ಬಂದಿದೆ ಎಂದರೆ ತಪ್ಪಾಗಲಾರದು.

ಭೌಗೋಳಿಕ ಹಿನ್ನೆಲೆ

ಬೆಂಗಳೂರಿನಿಂದ ೫೨೦ ಕಿ.ಮೀ. ದೂರದಲ್ಲಿರುವ ಸುರಪುರವು ಗುಲ್ಬರ್ಗಾ ಜಿಲ್ಲೆಯ ದಕ್ಷಿಣ ಭಾಗದಲ್ಲಿದೆ. ಈ ಪ್ರದೇಶವು ಕಲ್ಯಾಣ ಚಾಲುಕ್ಯರಿಂದ ಸುರಪುರದ ಅರಸರ ಕಾಲದವರೆಗೂ ಔರಂಗಜೇಬನ ಆಳ್ವಿಕೆಯಿಂದ ಹೈದ್ರಾಬಾದ್ ನಿಜಾಂನವರೆಗೆ ವಿವಿಧ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿದೆ. ಸುರಪುರವನ್ನು (ದೇವತೆಗಳ ಊರು) 'ಶೂರರಪುರ' ಎಂದು ಕರೆಯುವ ವಾಡಿಕೆಯಿದೆ. ಆದರೆ ಮುಸ್ಲಿಂರ ಆಗಮನ ನಂತರ 'ಶೋರಾಪುರ' ಎಂಬ ಹೆಸರು ಸ್ಥಿರವಾಯಿತು. ಭೀಮಾನದಿಯಿಂದ ಕೃಷ್ಣಾ ನದಿಯವರೆಗಿನ ಈ ಪ್ರದೇಶಕ್ಕೆ 'ಸಗರನಾಡು' ಎಂದು ಕರೆಯುತ್ತಿದ್ದರು. ೨೦೧ ಗ್ರಾಮಗಳನ್ನು ಹೊಂದಿದ ಈ ತಾಲ್ಲೂಕು ಜಿಲ್ಲೆಯಲ್ಲಿಯೇ ದೊಡ್ಡದು. ವಿಸ್ತೀರ್ಣದಲ್ಲಿ ೭ನೆಯ ಸ್ಥಾನವನ್ನು ಹೊಂದಿದೆ. ಇದರ ವಿಸ್ತೀರ್ಣ ೧.೮೨೦ ಚದುರ ಕಿ.ಮೀ. ಉತ್ತರ ಅಕ್ಷಾಂಶ ೭೬° ೧೮ ರಿಂದ ೭೬° ೫೪ ಹಾಗೂ ಪೂರ್ವರೇಖಾಂಶ ೧೬° ೧೫ ರಿಂದ ೧೬° ೪೪ ಇದೆ. (ಪಾಟೀಲ ೧೯೯೪:೪) ಸುರುಪುರ ತಾಲ್ಲೂಕಿನ ಉತ್ತರಕ್ಕೆ ಜೇವರ್ಗಿ ತಾಲ್ಲೂಕು, ಪೂರ್ವಕ್ಕೆ ಶಹಾಪುರ ತಾಲ್ಲೂಕು, ಪಶ್ಚಿಮಕ್ಕೆ ಬಿಜಾಪುರ ಜಿಲ್ಲೆಯ ಮದ್ದೇಬಿಹಾಳ ತಾಲ್ಲೂಕು ಮತ್ತು ದಕ್ಷಿಣಕ್ಕೆ ಹರಿದು ಹೋಗುವ ಕೃಷ್ಣಾನದಿ ಸುರಪುರವನ್ನು ರಾಯಚೂರು ಜಿಲ್ಲೆಯಿಂದ ಪ್ರತ್ಯೇಕಿಸುತ್ತದೆ. (ರೇವಣಸಿದ್ದಯ್ಯ ೧೯೮೬:೪)

ಈ ಪ್ರದೇಶದಲ್ಲಿ ಪ್ರಾಚೀನ ಕನ್ನಡ ನಾಡಿನ ರಾಜಮನೆತನಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಚಾಲುಕ್ಯರು, ಕಲಚೂರಿಗಳು ಹಾಗೂ ದೇವಗಿರಿಯ ಯಾದವರು ಇಲ್ಲಿ ಆಳ್ವಿಕೆ ಮಾಡಿದ್ದಾರೆ. "ಕ್ರಿ.ಶ. ೧೭೦೭ರಲ್ಲಿ ಪಿತಾಂಬರಿ ಬಹರಿ ಪಿಡ್ಡನಾಯಕನು ಸುರಪುರ ಸಂಸ್ಥಾನ"ವನ್ನು ಸ್ಥಾಪಿಸಿದನು. ಭಾರತದ ಉಪಖಂಡದಲ್ಲೂ ಅದರಲ್ಲೂ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಅಥವಾ ರಾಜ್ಯಗಳ ಉಗಮಕ್ಕೆ ಸಂಬಂಧಿಸಿದಂತೆ ಜನಪ್ರಿಯ 'ಮೂಲ'ವನ್ನು ಸುರಪುರದಲ್ಲಿಯು ನೋಡಬಹುದು.

ಸುರಪುರ ಸಂಸ್ಥಾನ ಸ್ಥಾಪನೆಯ ಸಮಯದಲ್ಲಿ ಪಿತಾಂಬರಿ ಬಹರಿ ಪಿಡ್ಡನಾಯಕನು ತನ್ನ ಗುರು ಗೋಪಣ್ಣನೊಂದಿಗೆ ಹೊರಟಾಗ "ಮೊಲವೇ ನಾಯಿಯನ್ನು ಹಿಡಿಯುವ ದೃಶ್ಯವನ್ನು ಕಂಡು ಬೆರಗಾದನು ಇದು ಸಂಸ್ಥಾನದ ಸ್ಥಾಪನೆಗೆ ಸೂಕ್ತ ಸ್ಥಳವೆಂದು ಗುರುತಿಸಿದನು".[೩] (ಮುಡಬೂಳ ೨೦೦೧:೧೫)

"ಸುರಪುರ ಪ್ರದೇಶವು ಸುತ್ತಲೂ ಗುಡ್ಡಗಳಿಂದ ಆವೃತವಾಗಿರುವುದರಿಂದ ನಿಸರ್ಗದ ದುರ್ಗದಂತೆ ಗೋಚರಿಸುತ್ತಿದೆ. ಪಿತಾಂಬರಿ ಬಹರಿ ಪಿಡ್ಡನಾಯಕನು ಈ ಸ್ಥಳದ ಮಹತ್ವವನ್ನು ಕಂಡು ತನ್ನ

ರಾಜಧಾನಿಯನ್ನಾಗಿ ಮಾಡಿಕೊಂಡಿದ್ದು ಅವನ ಜಾಣ್ಮೆಯನ್ನು ತೋರಿಸುತ್ತದೆ ಎಂದು ಕಪಟರಾಳ ಕೃಷ್ಣರಾಯ ಅವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ".[೪] (ಕಪಟರಾಳ ೧೯೯೭:೭೪)

ಕೃಷ್ಣಾನದಿಯು ಈ ಭಾಗದ ಮುಖ್ಯ ನದಿಯಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯವಿದೆ. ಜನರು ಕೆರೆ (೬೯೧ ಹೆಕ್ಟರ್ಸ್) ಕಾಲುವೆ (೮೬.೯೩೩ ಹೆಕ್ಟರ್ಸ್) ಬಾವಿ (೧೦.೮೦ ಹೆಕ್ಟರ್ಸ್) ಕೊಳವೆಬಾವಿ (೧೩೩ ಹೆಕ್ಟರ್ಸ್) ಏತ ನೀರಾವರಿ ಮೂಲಕ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇಲ್ಲಿ ನೀರಾವರಿಯಿರುವುದರಿಂದ ಕೃಷಿಯು ಪ್ರಧಾನವಾದ ಉದ್ಯೋಗವಾಗಿದೆ. ಇಲ್ಲಿ ಮುಂಗಾರು ಬೆಳೆ ಮತ್ತು ಹಿಂಗಾರ ಬೆಳೆ ಹೀಗೆ ಎರಡು ರೀತಿಯ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿ ಭೂಮಿಯು ಎರೆಭೂಮಿ, ಕರ್ಲಿಭೂಮಿ, ಕೆಂಪುಭೂಮಿ, ಉಸುಕು ಮಿಶ್ರಿತ ಭೂಮಿಯಿಂದ ಕೂಡಿದೆ. ಬಿಳಿಜೋಳ, ಹೆಸರು, ಉದ್ದು, ತೊಗರಿ, ಸಜ್ಜೆ, ಗೋಧಿ, ಕುಸುಬೆ, ಶೇಂಗಾ, ಸೂರ್ಯಕಾಂತಿ, ಇತ್ತೀಚೆಗೆ ಭತ್ತವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಕುಂಬಾರಿಕೆ, ನೇಕಾರಿಕೆ, ಕಮ್ಮಾರಿಕೆ, ಬಿದುರಿನಿಂದ ಬುಟ್ಟಿ ಹೆಣೆಯುವುದು, ನಾರಿನಿಂದ ಹಗ್ಗವನ್ನು ಹೊಸೆಯುವುದು, ಹೈನುಗಾರಿಕೆ ಮುಂತಾದ ಉಪಕಸಬುಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ.

ಸುರಪುರ ತಾಲ್ಲೂಕಿನ ಒಟ್ಟು ೨೦೧ ಗ್ರಾಮಗಳಿವೆ. ೫ ಹೊಬಳಿಗಳನ್ನಾಗಿ ವಿಂಗಡಿಸಲಾಗಿದೆ. ಹುಣಸಗಿ, ಕಕ್ಕೆರಾ, ಕೊಡೇಕಲ್, ಕೆಂಬಾವಿ ಮತ್ತು ಸುರಪುರ. ಈ ಪ್ರದೇಶದಲ್ಲಿ ೬ ಮಳೆ ಮಾಪನ ಕೇಂದ್ರಗಳಿವೆ. ೪೨ ಗ್ರಾಮಪಂಚಾಯತಿಗಳಿವೆ. ಪ್ರತಿಯೊಂದು ಗ್ರಾಮಗಳಲ್ಲಿ ಕನ್ನಡ ಮಾಧ್ಯಮ ಹಾಗೂ ಉರ್ದು ಮಾಧ್ಯಮದ ಹಿರಿಯ, ಕಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿವೆ. ೯ ಕಿರಿಯ ಮಹಾವಿದ್ಯಾಲಯಗಳು ಹಾಗೂ ೩ ಪದವಿ ಮಹಾವಿದ್ಯಾಲಯಗಳು ಇವೆ. ಈ ತಾಲ್ಲೂಕಿನ ಒಟ್ಟು ಸಾಕ್ಷರತೆ ಪ್ರಮಾಣ ಶೇ. ೪೮.೪ ಇದೆ. ಮಹಿಳೆಯರ ಸಾಕ್ಷರತೆ ಶೇ. ೩೫ರಷ್ಟಿದೆ. ೫ ಪೋಲಿಸ್ ಠಾಣೆಗಳು ಹಾಗೂ ಒಂದು ನ್ಯಾಯಾಲಯವನ್ನು ಹೊಂದಿದೆ. (ಆಡಳಿತ ವರದಿ, ೨೦೦೧)

ಸುರಪುರ ತಾಲ್ಲೂಕು ಜನಸಂಖ್ಯೆಯಲ್ಲಿ ಮೂರನೇ ಸ್ಥಾನವನ್ನು ಪಡೆದಿದೆ. ಸುರಪುರ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿಯ ಪ್ರಕಾರ ೩,೩೬,೭೫೫ ಇದೆ. ಈ ಜನಸಂಖ್ಯೆಯಲ್ಲಿ ಪುರುಷನ ಸಂಖ್ಯೆ ೧,೭೦,೯೨, ಸ್ತ್ರೀಯರು ೧,೬೬,೬೬೩ ಇದೆ. ಸುರಪುರ ನಗರ ಪ್ರದೇಶ ಒಟ್ಟು ಜನಸಂಖ್ಯೆ ೪೫೦೦೦ ಇದೆ. ರಂಗಂಪೇಟೆ ಸುರಪುರ ಪುರಸಭೆ ವ್ಯಾಪ್ತಿಗೆ ಒಳಪಡುತ್ತದೆ. ಈ ಪ್ರದೇಶದಲ್ಲಿ ಎಲ್ಲಾ ವರ್ಗದ ಜನರು ಕಂಡುಬರುತ್ತಾರೆ. ಮುಖ್ಯವಾಗಿ ಬ್ರಾಹ್ಮಣರು, ಕುರುಬರು, ಲಿಂಗಾಯತರು, ಉಪ್ಪಾರರು, ವೈಶ್ಯರು, ನಾಯಕ ಜನಾಂಗ ಹೀಗೆ ವಿವಿಧ ಜನಾಂಗದವರಿದ್ದಾರೆ.

ಕ್ರಿ.ಶ. ೧೮೫೭ರಲ್ಲಿ ಸುರಪುರದ ದೊರೆ ನಾಲ್ವಡಿ ವೆಂಕಟಪ್ಪ ನಾಯಕನು ವಿದೇಶಿಯರಾದ ಬ್ರಿಟಿಷ್ ನಿರಂಕುಶಾಧಿಕಾರಿಗಳ ವರ್ತನೆಯಿಂದ ರೋಸಿ ಹೋಗಿ ನೆರೆ-ಹೊರೆಯ ಸಂಸ್ಥಾನಗಳ ಸಹಾಯ ಪಡೆದು ಬ್ರಿಟಿಷ್‌ರ ವಿರುದ್ಧ ದಂಗೆಯದ್ದನು. ಆದರೆ ಬ್ರಿಟಿಷ್‌ರು ದಂಗೆಯೆದ್ದ ವೆಂಕಟಪ್ಪನಾಯಕನನ್ನು ಕುಟೀಲ ನೀತಿಯಿಂದ ಸೋಲಿಸಿ ಸುರಪುರವನ್ನು ಆಕ್ರಮಿಸಿಕೊಂಡರು. ಆಕ್ರಮಿಸಿಕೊಂಡು ಈ ಪ್ರದೇಶವನ್ನು ಅನೇಕ ಯುದ್ಧಗಳಲ್ಲಿ ಸಹಾಯ ಮಾಡಿದ ಹೈದ್ರಾಬಾದಿನ ನಿಜಾಂ ಅವರಿಗೆ ಒಪ್ಪಿಸಿದರು. ಸುರಪುರವು ಆಂಗ್ಲರಿಂದ ನಿಜಾಂನ ವಶಕ್ಕೆ ಹೋದ ನಂತರ 'ಶೋರಾಪುರ'ವಾಗಿ ಮಾರ್ಪಟ್ಟಿತು.

"ನಿಜಾಂ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ 'ಸಾಲಾರಜಂಗ'ನು ಕೈಗೊಂಡ ಆಡಳಿತ ಸುಧಾರಣೆಗಳಲ್ಲಿ 'ಜಿಲ್ಲಾ ಬಂಧಿ'ಯು ಮುಖ್ಯವಾಗಿದೆ. ಈ ಸಂದರ್ಭದಲ್ಲಿ ಗುಲ್ಬರ್ಗಾವು ಸುರಪುರ ಜಿಲ್ಲೆಯ ಒಂದು ಭಾಗವಾಗಿತ್ತು. ಸುರಪುರವು ಪ್ರಾರಂಭದಲ್ಲಿ ಐದು ತಾಲ್ಲೂಕುಗಳನ್ನು ಒಳಗೊಂಡಿತ್ತು. ಆಡಳಿತಕ್ಕನುಗುಣವಾಗಿ ನಂತರ ಸುರಪುರವನ್ನು ೧೮೭೩ರಲ್ಲಿ ಸುರಪುರ ಜಿಲ್ಲೆಯನ್ನು ಗುಲ್ಬರ್ಗಾ ಮತ್ತು ಸುರಪುರ ಜಿಲ್ಲೆಗಳೆಂದು ವಿಭಾಗಿಸಿದರು. ನಂತರ ಸುರಪುರ ೧೯೦೧ರಲ್ಲಿ ಕೇವಲ ತಾಲ್ಲೂಕಾಗಿ ಉಳಿಯಿತು. ಇದನ್ನು ಗುಲ್ಬರ್ಗಾ ಜಿಲ್ಲೆಗೆ ಸೇರಿಸಲಾಯಿತು".[೫] (ಪಾಟೀಲ ೧೯೯೭:೬)

ಸುರಪುರ ತಾಲ್ಲೂಕು ಪುರಾತನ ಸಂಸ್ಕೃತಿಗಳ ನೆಲೆವಿಡಾಗಿದೆ. ರಾಜನಕೋಳುರು, ಹಗರಟಗಿ, ಕೊಡೇಕಲ್, ಬೂದಿಹಾಳ್‌ಗಳಲ್ಲಿರುವ ಅವಶೇಷಗಳು ಪ್ರಾಗೈತಿಹಾಸದಿಂದ ನೂತನ ಶಿಲಾಯುಗದ ವರೆಗಿನ ಇತಿಹಾಸವನ್ನು ವಿವರಿಸುತ್ತವೆ. ಮಲ್ಲಾ, ಮುದನೂರು, ಕೆಂಬಾವಿ, ಮಾಲಗತ್ತಿಗಳಲ್ಲಿ ಶೈವ ಮತ್ತು ಜೈನ ಮಂದಿರಗಳಿವೆ. ತಿಂಥಣಿ, ದೇವರಗೋನಾಲ, ಕೊಡೇಕಲ್ ಈ ಪ್ರದೇಶಗಳು ಧಾರ್ಮಿಕ ಸಾಮರಸ್ಯವನ್ನು ಪ್ರತಿಬಿಂಬಿಸುವ ಪ್ರದೇಶಗಳಾಗಿವೆ. ಗೋಪಾಲಸ್ವಾಮಿ ದೇವಸ್ಥಾನ, ವಾಗಣ ಗೇರಾಕೋಟೆ, ದೇವರಗೋನಾಲ ಮತ್ತು ತಿಂಥಣಿಯ ಮೌನೇಶ್ವರ ದೇವಸ್ಥಾನಗಳು, ಛಾಯಭಗವತಿ ಮತ್ತು ನಾರಾಯಣಪುರ ಇವು ಈ ಭಾಗದ ಪ್ರೇಕ್ಷಣೀಯ ಸ್ಥಳಗಳಾಗಿ ಕಂಡುಬಂದಿವೆ.

ಐತಿಹಾಸಿಕ ಹಿನ್ನೆಲೆ

ಪ್ರಾಚೀನ ಕಾಲದಿಂದಲೂ ಪೌರಾಣಿಕ ಹಿನ್ನೆಲೆ ಹೊಂದಿರುವ ಸುರಪುರ ಪ್ರದೇಶವು ಐತಿಹಾಸಿಕ ದೃಷ್ಟಿಯಿಂದಲೂ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿದ ನಾಡಾಗಿದೆ. ರಾಬರ್ಟ್‌ಬ್ರೂಸ್‌ಪೂಟ್, ಮೆಡೋಸ್ ಟೇಲರ್, ಅ.ಸುಂದರ ಮತ್ತು ಕೆ.ಪದ್ಮಯ್ಯನವರು ಸಂಶೋಧನೆಗಳ ಮೂಲಕ ಈ ಪ್ರದೇಶದಲ್ಲಿ ಉತ್ಖನನ ಮಾಡಿ ಇತಿಹಾಸ ಕಾಲಗರ್ಭದಲ್ಲಿ ಅಡಗಿ ಹೋಗಿರುವ ಅವಶೇಷಗಳನ್ನು ಹೊರತೆಗೆಯಲಾಯಿತು. ಹೀಗೆ ಹೊರತೆಗೆದ ಅವಶೇಷಗಳನ್ನು ಪರೀಕ್ಷಿಸಿ ಆಯಾ ಇತಿಹಾಸದ ಕಾಲಕ್ಕೆ ವರ್ಗೀಕರಿಸಲಾಯಿತು. ಅಂದರೆ ಪ್ರಾಗೈತಿಹಾಸಿಕಯುಗ, ನೂತನ ಶಿಲಾಯುಗ, ತಾಮ್ರ

ಶಿಲಾಯುಗದ ಅವಶೇಷಗಳನ್ನಾಗಿ ವಿಂಗಡಿಸಿದರು. ಈ ಎಲ್ಲಾ ಶೋಧನೆಗಳಿಂದ ಸುರಪುರ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಇತಿಹಾಸದಲ್ಲಿ ದಾಖಲೆಯಾಗಿರುವುದು ತಿಳಿದುಬರುತ್ತದೆ.

ಇತಿಹಾಸ ಪೂರ್ವಕಾಲ : "ಇತಿಹಾಸದ ಪೂರ್ವಕಾಲದ ಸಾಮಾಜಿಕ ಸ್ಥಿತಿ-ಗತಿಗಳನ್ನು ತಿಳಿದುಕೊಳ್ಳಬೇಕಾದರೆ ಭೂ ಶೋಧನೆಗಳ ವರದಿಯನ್ನು, ನಿವೇಶನಗಳಲ್ಲಿ ಸಂಗ್ರಹಿಸಲಾದ ವಿವಿಧ ಬಗೆಯ ಅವಶೇಷಗಳನ್ನು ಅವಲಂಬಿಸಿರುತ್ತದೆ. ಆದಿಶಿಲಾಯುಗ ಸಂಸ್ಕೃತಿಗೆ ಸೇರಿದ ಹಲವಾರು ನಿವೇಶನಗಳಿಂದ ಸಂಗ್ರಹಿಸಲಾಗಿರುವ ನಿವೇಶನಗಳೆಂದರೆ ಶಿಲೋಪಕರಣಗಳು, ಬೇಟೆ ವಿಧಾನ, ಆಹಾರ ಸಂಗ್ರಹಣ ವಿಧಾನ, ಪ್ರಾಣಿಗಳ ಪಳಿಯುಳಿಕೆ ಮತ್ತು ವಾಸದ ನೆಲೆಗಳು ಮೊದಲಾದವು ಗಳಾಗಿವೆ. ಸುರಪುರ ಪ್ರದೇಶಕ್ಕೆ ಸಂಬಂಧಿಸಿದಂತೆ ಭೂ-ವಿಜ್ಞಾನಿ ರಾಬಟ್‌ಬ್ರೂಸ್‌ಪೊಟ್, ಮೆಡೋಸ್ ಟೇಲರ್ ಅ. ಸುಂದರ ಮತ್ತು ಕೆ. ಪದ್ದಯ್ಯನವರು ನಡೆಸಿದ ಸಂಶೋಧನೆಗಳಿಂದ ಸುರಪುರವು ಕೂಡ ಪ್ರಾಗೈತಿಹಾಸಕ್ಕೆ ಒಳಪಟ್ಟಿರುವುದು ಕಂಡುಬರುತ್ತದೆ".[೬] (ಪಾಟೀಲ ೧೯೭೩:೫)

ರಾಬರ್ಟ್‌ಬ್ರೂಸ್‌ಪೂಟ್ ಎಂಬ ಭೂ-ವಿಜ್ಞಾನಿಯು "ಸುರಪುರ ತಾಲ್ಲೂಕಿನ ಕೃಷ್ಣಾನದಿ ದಂಡೆಯ ಮೇಲಿರುವ ಎಡೆಹಳ್ಳಿಯಲ್ಲಿರುವ ಆದಿ ಹಳೇಶಿಲಾಯುಗದ 'ಕೊಡಲಿ'ಗಳನ್ನು ಪತ್ತೆ ಮಾಡಿದ್ದಾರೆ. ೧೯೭೦ರ ಆ ಭಾಗದಲ್ಲಿ ಬ್ರೂಸ್‌ಪೂಟ್‌ರ ಸಂಶೋಧನೆಯನ್ನು ಗಮನಿಸಿ ಮತ್ತೆ ಆ ಪ್ರದೇಶಗಳಲ್ಲಿ ಸಂಶೋಧನೆ ಆರಂಭಿಸಿದರು. ಅವರು "'ಶೋರಾಪುರ' 'ಸಂಗಮ' ಪ್ರದೇಶದ ಪ್ರಾಗ್ ಇತಿಹಾಸ ಮತ್ತು ಪೂರ್ವ ಇತಿಹಾಸ" ಎಂಬ ವಿಷಯವನ್ನು ಕುರಿತಂತೆ ಅಧ್ಯಯನಕ್ಕೆ ಆರಿಸಿಕೊಂಡಿದ್ದರು. ಪದ್ದಯ್ಯನವರು ಉತ್ಖನನಗಳನ್ನು ಮಾಡಿ ಅದರಿಂದ ಬೆಳಕಿಗೆ ಬಂದ ಅವಶೇಷಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ ವಿವರಣೆ ನಿಡಿದ್ದಾರೆ".[೭] (ಪಾಟೀಲ ೧೯೭:೩೫)

ಆದಿಮಾನವನಿಗೆ ಸಂಬಂಧಿಸಿದ ಆಯುಧ ಮತ್ತು ಅವಶೇಷಗಳು ಆಕಾರ ಮತ್ತು ಅವಶೇಷಗಳನ್ನು ತಯಾರಿಸಿರಿದ ತಾಂತ್ರಿಕ ವಿಧಾನಗಳಲ್ಲಿ ಒಂದು ಬಗೆಯ ಹೋಲಿಕೆ ಕಂಡುಬರುತ್ತದೆ. ಅವುಗಳನ್ನು ಅವು ದೊರೆತ ಸ್ಥಳದ ಹೆಸರಿನಿಂದಲೇ ಆಯಾ ಸಂಸ್ಕೃತಿಗೆ ಸೇರಿದವು ಎಂದು ಗುರುತಿಸುತ್ತಾರೆ. ಅದರಂತೆ ಕೆ. ಪದ್ದಯ್ಯನವರು "ಹುಣಸಗಿ ಸುಮಾರು ಹತ್ತುಲಕ್ಷ ವರ್ಷಗಳಿಂದಲೂ ಜನವಸತಿಯಿಂದ ಕೂಡಿತ್ತು ಇದು ಜಗತ್ತಿನಲ್ಲಿ ದೊರೆತ ಅತ್ಯಂತ ಪ್ರಾಚೀನ ಜೀವರಾಶಿಗಳು ನೆಲಸಿದ್ದ ಕುರುಹಾಗಿದೆ" ಎಂದು ಆದಿಮಾನವನಿಗೆ ಸಂಬಂಧಿಸಿದಂತಹ ಪ್ರಾಚ್ಯವಸ್ತುಗಳನ್ನು ಶೋಧಿಸುವಾಗ ತಮ್ಮ ಸಂಶೋಧನೆಯಲ್ಲಿ ಮೇಲಿನಂತೆ ವಿವರಿಸಿದ್ದಾರೆ. ಅಲ್ಲದೆ ಈ ಸ್ಥಳದಲ್ಲಿ ಕಡುಗತ್ತಿ, ಕೈಗೊಡಲಿ, ಕೈಗುದ್ದಲಿ, ಉಳಿ ಮುಂತಾದವುಗಳನ್ನು ಪತ್ತೆ ಹಚ್ಚಿರುವುದು ಅವರ ಸಂಶೋಧನೆಗಳಿಂದ ತಿಳಿದುಬರುತ್ತದೆ. ಹೀಗೆ ಸಂಶೋಧಿಸಿದ ಪ್ರಾಚ್ಯವಸ್ತುಗಳನ್ನು 'ಅಶೋಲಿಯನ್ ಸಂಸ್ಕೃತಿ'ಗೆ ಸೇರಿದೆ ಎಂದಿದ್ದಾರೆ. ಇವು ಆದಿಮಾನವನ ಕುರುಹುಗಳಾಗಿವೆ. ಜಗತ್ತಿನ ಬೇರೆಯಲ್ಲಿಯೂ ಹಳೆಯ ಶಿಲಾಯುಗದ ಆಯುಧಗಳು ಮೃದುವಾದ ಸುಣ್ಣದ ಕಲ್ಲಿನಲ್ಲಿ ಮಾಡಿರುವುದು ಬೆಳಕಿಗೆ ಬಂದಿಲ್ಲ. ಆದರೆ ಇಂತಹ ಸುಣ್ಣ ಕಲ್ಲಿನ ಆಯುಧಗಳು ಪ್ರಪ್ರಥಮಬಾರಿಗೆ

ದೊರಕಿರುವುದು ಹುಣಸಿಗಿಯಲ್ಲಿ ಮಾತ್ರ' ಎಂದು ಪ್ರಾಕ್ತನಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ".[೯] (ಕೃಷ್ಣ ೧೯೯೬:೧೬)

ಕೆ.ಪೆದ್ದಯ್ಯನವರ ಇನ್ನೊಂದು ಮಹತ್ವದ ಸಂಶೋಧನೆಯೆಂದರೆ ಬೂದಿಹಾಳ ಪ್ರದೇಶದಲ್ಲಿ ನಡೆಸಿದ ಉತ್ಖನನವಾಗಿದೆ. ಈ ಊರಿನಲ್ಲಿ ಅತ್ಯಂತ ಹಳೆಯದೆನ್ನಬಹುದಾದ ಮಾನವ ಸಂಸ್ಕೃತಿಯ ಕುರುಹುಗಳು ಕಂಡುಬಂದಿದೆ. ಬೂದಿಹಾಳದಲ್ಲಿ ದೊರೆತಿರುವ ಬೂದಿಗುಡ್ಡಗಳು ಗತಕಾಲದ ಜನರ ಜೀವನದ ಮೇಲೆ ಬೆಲಕು ಚೆಲ್ಲಬಲ್ಲ ಅನೇಕ ಅವಶೇಷಗಳು ದೊರೆತಿವೆ. ಈ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಇವರು ಸಾಕು ಪ್ರಾಣಿಗಳನ್ನು ಸಾಕುವುದರ ಜೊತೆಗೆ ಸಗಣಿಯನ್ನು ಒಂದೆಡೆ ಕೂಡಿ ಹಾಕುತ್ತಿದ್ದರು. ವಸತಿ ನೆಲೆಯನ್ನು ಬಿಟ್ಟು ಹೋಗುವ ಮುನನ ಸಗಣಿರಾಶಿಗೆ ಬೆಂಕಿ ಹಚ್ಚುತ್ತಿದ್ದರು ಇವೆ ಬೂದಿ ಗುಡ್ಡಗಳು ಹೀಗೆ ಪೆದ್ದಯ್ಯನವರು ಸುರಪುರ ಸಂಗಮ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಕೊಡೇಕಲ್ ಮತ್ತು ಕಕ್ಕೆರಾಗಳಲ್ಲಿ ತಾಮ್ರ ಶಿಲಾಯುಗದ ಹಂತದಲ್ಲಿಯ ನೂತನ ಶಿಲಾಯುಗ ಹಂತದ ಸಂಸ್ಕೃತಿಯನ್ನು ಪತ್ತೆ ಮಾಡಿದ್ದಾರೆ.

"ಅ. ಸುಂದರ ಅವರು ಶಿಲಾ ತಾಮ್ರಯುಗದ ಹಂತದಲ್ಲಿಯ ನೂತನ ಶಿಲಾಯುಗದ ಜನರು ವಾಸಮಾಡಿದ ನೆಲೆಗಳನ್ನು ಶೋಧಿಸಿದರು ಹಾಗೂ ಬೂದಿಹಾಳದಲ್ಲಿ ಎರಡು ಬೃಹತ್ ಬೂದಿ ಗುಡ್ಡಗಳು ಇರುವುದನ್ನು ೧೯೬೪ರಲ್ಲಿ ವರದಿ ಮಾಡಿದ್ದರು. ೧೯ನೇ ಶತಮಾನದ ಮಧ್ಯ ಯುಗದಲ್ಲಿ ಕರ್ನಲ್ ಮೆಡೋಸ್ ಟೇಲರ್ ಅವರು ಕಬ್ಬಿಣಯುಗದ ಬೃಹತ್ ಶಿಲಾಯುಗದ ಸಂಸ್ಕೃತಿಗಳೆಂದು ಗುರುತಿಸಲಾದ ಕೆಲವು ಕಲ್ಲು ವೃತ್ತ ಕಲ್ಮನೆಗಳ ನಿವೇಶನವನ್ನು ಪತ್ತೆ ಮಾಡಿದರು. ಈ ನಿವೇಶನಗಳನ್ನು ರಾಜನ ಕೊಳ್ಳುರು ಮತ್ತು ಹಗರಟಿಗಿಯಲ್ಲಿ ಪತ್ತೆ ಮಾಡಿ ಅಧ್ಯಯನ ಮಾಡಿದ್ದಾರೆ. ಈ ಕಲ್ಗೋರಿಗಳು ಆಯಾ ಪ್ರದೇಶಗಳಲ್ಲಿ ಭಿನ್ನ ಭಿನ್ನ ಪ್ರಕಾರಗಳಲ್ಲಿ ಕಂಡುಬರುತ್ತವೆ. ರಾಜನ ಕೋಳುರಿನಲ್ಲಿ ದೊಡ್ಡ ದೊಡ್ಡ ನಾಲ್ಕು ಚಪುಡಿ ಕಲ್ಲುಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಇಟ್ಟು ಕೋಣೆಯನ್ನು ನಿರ್ಮಿಸಿ ಅದರಲ್ಲಿ ಮಾನವ ಅಸ್ಥಿ ಅವಶೇಷಗಳನ್ನು ಮಣ್ಣಿನ ಪಾತ್ರೆಗಳನ್ನು ಹಾಗೂ ಕಬ್ಬಿಣದ ವಸ್ತುಗಳನ್ನು ಇಟ್ಟಿರುವ ಕಲ್ಗೋರಿಯನ್ನು ಪತ್ತೆ ಮಾಡಿದ್ದಾರೆ".[೧೦] (ಪಾಟೀಲ ೧೯೯೭:೩೯)

ಹೀಗೆ ಸುರಪುರ ತಾಲ್ಲೂಕಿನ ಪ್ರದೇಶಗಳಲ್ಲಿ ಇತಿಹಾಸ ಪೂರ್ವದ ಕುರುಹುಗಳು ಕಂಡುಬಂದಿವೆ. ಈ ಪ್ರದೇಶಗಳಲ್ಲಿ ಆದಿ ಶಿಲಾಯುಗದಿಂದ ಹಿಡಿದು ನೂತನ ಶಿಲಾಯುಗದವರೆಗಿನ ಸಂಸ್ಕೃತಿ ಕಂಡುಬರುತ್ತದೆ. ನಾಗರೀಕತೆಯ ಬೆಳವಣಿಗೆಯಾದಂತೆ ಈ ಪ್ರದೇಶವು ಕೂಡ ಬೆಳವಣಿಗೆ ಯಾಗ ತೊಡಗಿತು. ಹೀಗೆ ಬೆಳವಣಿಗೆ ಹೊಂದಿ ಈ ಭಾಗವು ವಿವಿಧ ರಾಜಮನೆತನಗಳ ಆಳ್ವಿಕೆಯಲ್ಲಿ ಮತ್ತಷ್ಟು ಐತಿಹಾಸಿಕ ಮಹತ್ವ ಪಡೆಯಿತು.

ರಾಜಕೀಯ ಹಿನ್ನೆಲೆ

ಒಂದು ಕಾಲದ ಚರಿತ್ರೆಯನ್ನು ಅಧ್ಯಯನ ಮಾಡಲು ಆಯಾ ಕಾಲಘಟ್ಟದ ಘಟನೆಗಳು ಪ್ರಮುಖ ಆಕರಗಳಾಗಿವೆ. ಅದರಂತೆ ಈ ಪ್ರದೇಶದಲ್ಲಿ ಅಳಿದುಳಿದ ಸಂಗತಿಗಳೆಲ್ಲವು ಇತಿಹಾಸಕ್ಕೆ ಪೂರಕ ಅಂಶಗಳಾಗಿ ಕಾರ್ಯನಿರ್ವಹಿಸುತ್ತವೆ. ಕನ್ನಡ ನಾಡಿನ ಅನೇಕ ಅರಸು ಮನೆತನಗಳು ಈ ಪ್ರದೇಶದಲ್ಲಿ ಆಡಳಿತ ನಡೆಸಿ ಸಾಂಸ್ಕೃತಿಕ ಕ್ಷೇತ್ರದ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿವೆ ಎಂಬುದನ್ನು ಈ ಪ್ರದೆಶದಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಡಾ. ಹನುಮಾಕ್ಷಿಗೋಗಿಯವರು "ಸುರಪುರ ತಾಲ್ಲೂಕಿನ ಶಾಸನಗಳು" ಎಂಬ ವಿಷಯದ ಮೇಲೆ ಸಂಶೋಧನೆ ಕೈಗೊಂಡಿದ್ದು ಅವರು ಸುರಪುರ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳ ಬಗೆಗೆ ಅಧ್ಯಯನ ಮಾಡಿದ್ದಾರೆ. ಏಕೆಂದರೆ ಸುರಪುರ ತಾಲ್ಲೂಕಿನ ಇತಿಹಾಸ ಕಾಲಗರ್ಭದಲ್ಲಿ ಅಡಗಿ ಹೋಗುವ ಮೊದಲೆ ಅವುಗಳನ್ನು ಸಂರಕ್ಷಿಸಬೇಕಾದ ಮತ್ತು ಪರಿಕ್ಷಿಸಬೇಕಾದ ಪ್ರಮೇಯವಾದದ್ದರಿಂದ ಈ ಅಧ್ಯಯನವನ್ನು ಕೈಗೊಂಡು ತಾಲ್ಲೂಕಿನ ಶಾಸನಗಳಲ್ಲಿನ ಐತಿಹಾಸಿಕ ಮಾಹಿತಿಯನ್ನೇ ಹೊರಗೆಡವಿದ್ದಾರೆ. ಹೀಗಾಗಿ ಅಧ್ಯಯನದಿಂದ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ರಾಜಮನೆತನ ಗಳನ್ನು ಅಲ್ಲದೆ ಅವರ ಆಡಳಿತ ವೈಖರಿಯನ್ನು ತಿಳಿದುಕೊಳ್ಳಲು ಈ ಕೃತಿ ತುಂಬಾ ಸಹಾಯಕ ವಾಗಿದೆ.

ಒಟ್ಟು ಈ ತಾಲ್ಲೂಕು ೨೦೧ ಹಳ್ಳಿಗಳನ್ನು ಹೊಂದಿದ್ದು. ಈ ಹಳ್ಳಿಗಳಲ್ಲಿ ಹಲವಾರು ಶಾಸನಗಳು ದೊರೆತಿವೆ. ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಕಲಚೂರಿಗಳು ಹಾಗೂ ದೇವಗಿರಿಯ ಯಾದವ ದೊರೆಗಳು ತಮ್ಮ ಆಡಳಿತ ಅವಧಿಯಲ್ಲಿ ಮಾಡಿದ ಸಾಧನೆಗಳು ಹಾಗೂ ದಾನ ದತ್ತಿ ಜೀರ್ಣೋದ್ಧಾರಕ್ಕೆ ಸಂಬಂಧಿಸಿಂದತೆ ಹಣವನ್ನು ಕೊಡುಗೆಯಾಗಿ ನೀಡಿದುದರ ಬಗೆಗೆ ವಿಫುಲವಾದ ಮಾಹಿತಿಯನ್ನು ಈ ಶಾಸನಗಳು ಒದಗಿಸುತ್ತವೆ.

ಕಲ್ಯಾಣಿ ಚಾಲುಕ್ಯರು

ಸುರಪುರದ ರಾಜಕೀಯ ಇತಿಹಾಸ ಕಲ್ಯಾಣಿ ಚಾಲುಕ್ಯರ ಕಾಲದಿಂದ ಆರಂಭವಾಗುತ್ತದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಅನೇಕ ಶಾಸನಗಳು ಇದರ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದ ೪೬ ಶಾಸನಗಳು ಈ ಪ್ರದೇಶದಲ್ಲಿ ದೊರೆತಿರುವ ಬಗ್ಗೆ ಡಾ. ಹನುಮಾಕ್ಷಿ ಗೋಗಿಯವರ ಗ್ರಂಥದಲ್ಲಿ ಮಾಹಿತಿಯಿದೆ. ಸಗರ- ೫೦೦, ಕೆಂಬಾವಿ- ೨೪, ಪ್ರಮುಖ ಆಡಳಿತ ಕೇಂದ್ರಗಳು. ಮುದನೂರು, ಸಗರ ಪ್ರಸಿದ್ಧಪಟ್ಟಣ ಹಾಗೂ ಅಗ್ರಹಾರಗಳಾಗಿದ್ದವು. ಮುದುನೂರಿನಲ್ಲಿ ೬ನೇ ವಿಕ್ರಮಾದಿತ್ಯನ ೫ ಶಾಸನಗಳು ದೊರಕಿವೆ. ಹುಣಸಗಿ, ರಾಜನಕೋಳುರು, ಬೊಮ್ಮನಹಳ್ಳಿ ಹಾಗೂ ದೇವರ ಗೋನಾಲ ಶಾಸನಗಳಲ್ಲಿ ಕಲ್ಯಾಣಿ ಚಾಲುಕ್ಯರ ರಾಣಿಯರ ಉಲ್ಲೇಖವಿದೆ.

ಕಲ್ಯಾಣದ ಕಲಚೂರಿಗಳು

ಕಲ್ಯಾಣ ಚಾಲುಕ್ಯರ ನಂತರ ಅವರ ಮಾಂಡಲಿಕರಾದ ಕಲಚೂರಿಗಳು ಕ್ರಿ.ಶ. ೧೧೬೨ರಲ್ಲಿ ಅಧಿಕಾರಕ್ಕೆ ಬಂದರು. ಇವರ ೮ ಶಾಸನಗಳು ಈ ಭಾಗದಲ್ಲಿ ಸಿಕ್ಕಿವೆ. ದೇವಸ್ಥಾನಗಳಿಗೆ ದಾನ ನೀಡಿರುವುದು ಈ ಶಾಸನಗಳಲ್ಲಿ ತಿಳಿದುಬರುತ್ತದೆ. ಹಗರಟಗಿ (೧೧೬೬) 'ಚಿಕ್ಕಮುದನೂರು (೧೧೬೭) ಹೆಮ್ಮಡಿಗಿ (೧೧೮೨), ಪ್ರಮುಖವಾಗಿವೆ. ಹಗರಟಗಿ ಶಾಸನದಲ್ಲಿ 'ಹಗರಟಗಿ' ಎಂಬ ಅಗ್ರಹಾರದ ಬಗ್ಗೆ ತ್ರಿಕೊಟೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖ, ಚಿಕ್ಕಮುದನೂರು ಶಾಸನದಲ್ಲಿ ಲಕ್ಷ್ಮಣೇಶ್ವರ ದೇವಸ್ಥಾನಕ್ಕೆ ದತ್ತಿ ಬಿಟ್ಟಿರುವುದು ತಿಳಿಯುತ್ತದೆ.

ದೇವಗಿರಿಯ ಯಾದವರು

"ಕಲಚೂರಿಗಳ ನಂತರ ಸುರಪುರ ದೇವಗಿರಿಯ ಯಾದವರ ಆಳ್ವಿಕೆಗೆ ಒಳಪಟ್ಟಿತು. ಇವರ ೧೧ ಶಾಸನಗಳು ದೊರೆತಿವೆ. ಆಡಳಿತ ಘಟಕಗಳ ಬಗ್ಗೆ ದಾನ, ದತ್ತಿಗಳು ನೀಡಿದ ಮಾಹಿತಿ ನೀಡುತ್ತವೆ. ಹಗರಟಿಗಿಯ ಕ್ರಿ.ಶ. ೧೨೩೧ರ ಶಾಸನ 'ಹಗರಟಿಗೆ - ೨೦೦' ಎಂಬ ಆಡಳಿತ ಘಟಕವಿತ್ತು. ಜೊತೆಗೆ 'ವೀರಬಣಂಜುಶೆಟ್ಟಿ' ವ್ಯಾಪಾರಿಗಳಿಗೆ ಸಂಬಂಧಿಸಿದ್ದು ಸಗರ - ೫೦೦ ಕಲ್ಯಾಣ ಚಾಲುಕ್ಯರ ಕಾಲದಿಂದ ಯಾದವರ ಕಾಲದವರೆಗೆ ಅಸ್ತಿತ್ವದಲ್ಲಿರುವುದಾಗಿ ತಿಳಿಯುತ್ತದೆ. ಈ ಮನೆತನ ಬಹು-ಉದ್-ದಿನ್ ಗುರುಷ್ಪಾನ ದಾಳಿಗೆ ತುತ್ತಾಯಿತು".[೧೦] (ಪಾಟೀಲ ೧೯೯೭:೫೮)

ನಂತರ ಈ ಬಾಗ ಮಹಮದ್ ಬಿನ್ ತುಘಲಕ್‌ನ ಸಂಬಂಧಿಕನಾದ ಬಹು-ಉದ್ ದೀನ್ ಎಂಬುವವನು ಸುರಪುರ ತಾಲ್ಲೂಕಿನ 'ಸಗರ ನಾಡಿನ' ರಾಜ್ಯಪಾಲನಾಗಿ ಆಳ್ವಿಕೆ ನಡೆಸಿದ. ಮುಂದೆ ಕ್ರಿ.ಶ. ೧೩೧೩ರಲ್ಲಿ ಮುಮ್ಮಡಿ ಸಿಂಘಮನ 'ಕಂಪಲಿ ಸಾಮ್ರಾಜ್ಯ' ಕುಮಾರ ರಾಮನ ಕಾಲದಲ್ಲಿ ಸ್ವಲ್ಪ ವಿಸ್ತರಣೆಯಾಯಿತು. ಗುಲ್ಬರ್ಗಾ ಜಿಲ್ಲೆಯ ಕೆಲವು ಪ್ರಾಂತಗಳು ಸುರಪುರ ಶಹಾಪುರ ಮತ್ತೆ ಸಗರನಾಡು ಮುಂತಾದ ಪ್ರದೇಶಗಳು ವಿಜಯನಗರದ ಮಾಂಡಲಿಕರಾಗಿ ನಂತರ ಸುರಪುರ ನಾಯಕರ ಆಳ್ವಿಕೆಗೆ ಒಳಗಾಗಿತ್ತು. ಸುರಪುರದ ನಾಯಕರು ಗೋಸಲ ವಂಶದವರಾಗಿದ್ದರು. ಈ ವಂಶದ ಮೂಲ ಪುರುಷ 'ನರಸಿಂಹನಾಯಕ' ಇತನ ವಂಶಜರೆ ಗುಡಗುಂಟಿ ಮತ್ತು ಸುರಪುರದ ಸಂಸ್ಥಾನಗಳ ಮೂಲ ಪುರುಷರಾಗಿದ್ದಾರೆ".[೧೧] (ಕೃಷ್ಣಾಮಾಚಾರ್ಯ ೨೦೦೩:೬)

"ಕ್ರಿ.ಶ. ೧೬೩೬ರಲ್ಲಿ ಗುಡಗುಂಟಿ ಸಂಸ್ಥಾನವು ಗಡ್ಡಿ ಪಿಡ್ಡನಾಯಕನಿಂದ ಆರಂಭವಾಯಿತು. ಇವರ ವಂಶದ ವಿಷಯವನ್ನು ಮಡೋಸ್ ಟೇಲರ್ ಈ ಮನೆತನದವರು ಮೊದಲು ಮೈಸೂರು ದೇಶದ ರತ್ನಗಿರಿಯಿಂದ ಬಂದಿದ್ದಾರೆ. ಇವರು ಅಲ್ಲಿ ದೊಡ್ಡ ಪಾಳೆಗಾರರಾಗಿದ್ದರು. ವಿಜಯನಗರ ಅರಸರ ಕಾಲದಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿ ಇವರನ್ನು ತಮ್ಮ ಸೀಮೆಯ ರಕ್ಷಣೆಗಾಗಿ ನೇಮಿಸಿಕೊಂಡಿದ್ದರೆಂದು ಹೇಳಲಾಗಿದೆ. ವಾಗಣಗೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಡ್ಡಿ ಪಿಡ್ಡನಾಯಕ ಆಳ್ವಿಕೆ ಮಾಡತೊಡಗಿದನು. ಔರಂಗಜೇಬನ ದಾಳಿಗಳಿಂದ ವಾಗನಗೇರಾ ಮೊಗಲರ ವಶವಾಯಿತು. ನಂತರ ಅರಸ ಪಿಡ್ಡನಾಯಕನ ಕಾಲದಲ್ಲಿ

೧೭೦೭ರಲ್ಲಿ 'ವಾಗನಗಿರಿಯ ಸಂಸ್ಥಾನ'ವನ್ನು ಸುರಪುರಕ್ಕೆ ವರ್ಗಾಯಿಸಲಾಯಿತು. ಮುಂದೆ ಪಿಡ್ಡ ನಾಯಕನು ಸುರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದನು".[೨] (ಕಪಟರಾಳ ಕೃಷ್ಣರಾವ್ ೧೯೯೭: ೭೪)

ಸುರಪುರದ ದೊರೆಗಳ ಆಳ್ವಿಕೆಯ ಕಾಲದಲ್ಲಿ ಔರಂಗಜೇಬ ಆದಿಲ್‌ಶಾಹಿಗಳ ಮತ್ತು ಮರಾಠರ ದಾಳಿಯನ್ನು ಎದುರಿಸಬೇಕಾಯಿತು. ಈ ಎಲ್ಲಾ ದಾಳಿಗಳನ್ನು 'ಸುರಪುರ ಸಂಸ್ಥಾನ' ಸಮರ್ಥವಾಗಿ ಎದುರಿಸಿತು. ಔರಂಗಜೇಬನ ಮರಣದ ನಂತರ ಬಂದ ಉತ್ತರಧಿಕಾರಿಗಳು ದುರ್ಬಲರಾಗಿದ್ದರಿಂದ ದಕ್ಷಿಣದಲ್ಲಿ ಹೈದ್ರಾಬಾದ್ ನಿಜಾಂ ಅವರು ಮತ್ತು ಮರಾಠರು ಪ್ರಬಲರಾದರು. ಸುರಪುರದ ಅರಸರು ನಿಜಾಂ ಅವರ ಪರವಾಗಿ ಯುದ್ಧಕಾರ್ಯಗಳಲ್ಲಿ ಭಾಗವಹಿಸಿ ಅವರ ಗೌರವಕ್ಕೆ ಪಾತ್ರರಾದರು. ನಿಜಾಂ ಮತ್ತು ಮರಾಠರ ನಡುವೆ ಮೊದಲೇ ವೈಷಮ್ಯವಿತ್ತು. ಪೇಶ್ವೆ ಮತ್ತು ನಿಜಾಂ ಅವರ ನಡುವೆ ಸಂಬಂಧಿಸಿದ ಯುದ್ಧದಲ್ಲಿ ದೊರೆ ಇಮ್ಮಡಿ ವೆಂಕಟಪ್ಪನಾಯಕನು ನಿಜಾಂ ಅವರಿಗೆ ಸಹಾಯ ಮಾಡಿದನು. ಈ ಸಮಯದಲ್ಲಿ ಬ್ರಿಟಿಷ್‌ರು ಹಸ್ತಕ್ಷೇಪ ಭಾರತದಲ್ಲಿ ಭದ್ರವಾಗಿ ಬೇರೂರಿತು. ನಿಜಾಂ ಅವರು ಬ್ರಿಟಿಷರ ಅಧೀನತೆಗೆ ಒಳಗಾದ ನಂತರ ಸುರಪುರ ಸಂಸ್ಥಾನವು, ಪರೋಕ್ಷವಾಗಿ ನಿಜಾಂ ಅವರ ಅಂಕೆಯಲ್ಲಿದ್ದರಿಂದ ಈ ಸಂಸ್ಥಾನದಲ್ಲೂ ಬ್ರಿಟಿಷ್‌ರು ನೆಲೆಯೂರಿದರು. (ಪಾಟೀಲ ೧೯೯೭:೮೦)

"ನಿಜಾಂ ಅವರು ಸುರಪುರ ಸಂಸ್ಥಾನದಿಂದ ೧೫ ಲಕ್ಷ ರೂಪಾಯಿಯನ್ನು ವರ್ಷಕ್ಕೆ 'ಪರಗಣೆ'ಯನ್ನು ತೆಗೆದುಕೊಳ್ಳುತ್ತಿದ್ದರು. ಕ್ರಿ.ಶ. ೧೮೪೧ರಲ್ಲಿ ಸುರಪುರ ರಾಜ ಕೃಷ್ಣಪ್ಪನಾಯಕನು ಮರಣಹೊಂದಿದನು. ಈತನ ಮಗ ನಾಲ್ವಡಿ ವೆಂಕಟಪ್ಪನಾಯಕ ಅಪ್ರಾಪ್ತವಯಸ್ಕನಾಗಿದ್ದನು. ಬ್ರಿಟಿಷರು ಮತ್ತು ನಿಜಾಂ ಅವರ ಕುತಂತ್ರಗಳ ಪರಿಣಾಮವಾಗಿ ರಾಜಕೀಯ ರಾಯಭಾರಿಯಾಗಿ ಬ್ರಿಟಿಷ್ ಸರ್ಕಾರವು ಮಡೋಸ್ ಟೇಲರ್‌ನನ್ನು ೧೮೪೩ರಲ್ಲಿ ನೇಮಿಸಿತು. ಈತನು ಬಾಲಕ ವೆಂಕಪಟ್ಟ ನಾಯಕನ ಮೇಲ್ವಿಚಾರಣೆಯ ಜೊತೆಗೆ ಸಂಸ್ಥಾನದ ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿದನು. ಅಲ್ಲದೆ ರಾಜಕೀಯ ಪರಿಸ್ಥಿತಿಯನ್ನು ಉತ್ತಮಪಡಿಸಿ ಬೇಡ ಸಮುದಾಯದ ವಿಶ್ವಾಸಕ್ಕೆ ಪಾತ್ರನಾದನು. ಕ್ರಿ.ಶ. ೧೮೫೩ರಲ್ಲಿ ವೆಂಕಟಪ್ಪನಾಯಕನು ಪ್ರಬುದ್ಧವಯಸ್ಸಿಗೆ ಬಂದ ನಂತರ ಮೆಡೋಸ್ ಟೇಲರ್‌ನು ಸುರಪುರದ ಅಧಿಕಾರವನ್ನು ವೆಂಕಟಪ್ಪನಾಯಕನಿಗೆ ವಹಿಸಿ ಕೊಟ್ಟನು".[೩] (ಕೃಷ್ಣರಾವ್ ಮತ್ತು ಕೆಶವಭಟ್ಟ ೧೯೭೦:೬೨೭)

"ಕ್ರಿ.ಶ. ೧೮೫೩ರಲ್ಲಿ ರಾಜ್ಯ ಸೂತ್ರಗಳನ್ನು ವಹಿಸಿಕೊಂಡ ವೆಂಕಟಪ್ಪನಾಯಕನು ವಿದೇಶಿಯರಾದ ಬ್ರಿಟಿಷರ ನಿರಂಕುಶ ವರ್ತನೆ ವಿರುದ್ಧ ಜನರ ಅಸಮಾಧಾನವನ್ನು ಕಂಡು ಈತನು ಹುಟ್ಟು ನಾಡಿನ ವಿಮೋಚನೆಗಾಗಿ ಹೋರಾಡಲು ಕಟಿಬದ್ಧನಾದನು. ಈ ಉದ್ದೇಶ ಸಾಧನೆಗಾಗಿ 'ರೋಹಿಲರ್'ನ್ನು 'ಅರಬ್ಬರನ್ನು' ತನ್ನ ಸೈನ್ಯದಲ್ಲಿ ಸೇರಿಸಿಕೊಂಡನು. ನೆರೆಹೊರೆಯ ಸಂಸ್ಥಾನಗಳ ಅರಸರು ರಾಜ ನಾಲ್ವಡಿ ವೆಂಕಟಪ್ಪನಾಯಕನಿಗೆ ಸಹಾಯ ನೀಡಲು ಕಾತುರರಾಗಿದ್ದರು. ಈ ಎಲ್ಲಾ

ನಾಯಕರು ದಕ್ಷಿಣ ಭಾರತದ ಹೋರಾಟದ ನೇತೃತ್ವವನ್ನು ವೆಂಕಟಪ್ಪನಾಯಕರು ವಹಿಸಿಕೊಳ್ಳಬೇಕೆಂದು ನಿರ್ಧರಿಸಿದರು".[೧೯] (ಕೃಷ್ಣಮಾಚಾರ್ಯ ೨೦೦೩:೨೨೦)

ಇದರಿಂದ ಸುರಪುರವು 'ಸ್ವಾತಂತ್ರ್ಯ ಸಂಗ್ರಾಮ'ದ ಕೇಂದ್ರವಾಗಿ ಪರಿಣಮಿಸಿತು. ಬ್ರಿಟಿಷ್ ಸಾಮ್ರಾಜ್ಯವನ್ನು ಉರುಳಿಸುವ ನಾನಾ ಯೋಜನೆಗಳಿಗೆ ರಹಸ್ಯ ಸ್ಥಾನ ಸುರಪುರವಾಯಿತು. ಈ ಕ್ರಾಂತಿಯ ಕಿಡಿಯನ್ನು ಹಚ್ಚಿ ಸೈನ್ಯದಲ್ಲಿ ದಂಗೆ ಎಬ್ಬಿಸಲು ಸುರಪುರದ ರಾಜನು 'ಮಹಿಪಾಲ ಸಿಂಗ್' ಎಂಬ ಗುಢಾಚಾರನನ್ನು ಕಳುಹಿಸಿದಾಗ ಈತನು ಬ್ರಿಟಿಷ್‌ರಿಂದ ಬಂದಿಯಾದನು. ಈತನಿಂದ ಈ ಎಲ್ಲಾ ದಂಗೆಗೆ ವೆಂಕಟಪ್ಪನಾಯಕನೆ ಕಾರಣ ಎಂದು ಬ್ರಿಟಿಷರಿಗೆ ಗೊತ್ತಾಯಿತು. ಆದ್ದರಿಂದ ಈ ಪ್ರದೇಶದಲ್ಲಿ ಪ್ರಬಲವಾದ ದಂಗೆಯಾಗಬಹುದೆಂದು ತಿಳಿದ ಬ್ರಿಟಿಷ್ ಕ್ಯಾಪ್ಟನ್ ಬ್ಯಾರಿ ನೇತೃತ್ವದಲ್ಲಿ ಸೈನಿಕ ತುಕಡಿಯನ್ನು ಸುರಪುರಸಕ್ಕೆ ಕಳುಹಿಸಿದನು.

"ನಾಲ್ವಡಿ ವೆಂಕಟಪ್ಪನಾಯಕನು ಸುರಪುರವನ್ನು 'ಶೂರರಪುರ'ವನ್ನಾಗಿ ಮಾಡಿ ಕೊನೆಗೂ ಬ್ರಿಟಿಷ್‌ರ ವಿರುದ್ಧ ಸಮರಕ್ಕೆ ಸಿದ್ಧನಾದನು. ೧೮೫೭ ಫೆಬ್ರವರಿ ೭ರಂದು ಬ್ರಿಟಿಷ್ ಸೈನ್ಯ ಕ್ಯಾಪ್ಟನ್ ವಿಂಡ್‌ಹ್ಯಾಮ ನೇತೃತ್ವದಲ್ಲಿ ಸುರಪುರದಿಂದ ೫ ಕಿ.ಮೀ. ದೂರದ 'ರುಕ್ಮಾಪುರ'ದಲ್ಲಿ ಬೀಡುಬಿಟ್ಟಿತು. ಬ್ರಿಟಿಷರ ಇನ್ನೊಂದು ತುಕಡಿ ಮೇಜರ್ ಹ್ಯಾಗ್ ನೇತೃತ್ವದಲ್ಲಿ ಬಂದಿತು. ಈ ಎರಡು ಸೈನ್ಯಗಳ ಮಧ್ಯ 'ರುಕ್ಮಾಪುರ'ದ ಪ್ರದೇಶದಲ್ಲಿ ಬೀಕರ ಕದನ ನಡೆಯಿತು. ಈ ಕದನದಲ್ಲಿ ಬ್ರಿಟಿಷ್ ಕುದುರೆ ದಳದ ಸೇನಾಪತಿ 'ಜಾರ್ಜ್‌ನ್ಯೂಬರಿ' ಮರಣ ಹೊಂದಿದನು. ಆತನ ಸಹಾಯಕ ಲೆಫ್ಟಿನೆಂಟ್ 'ಸ್ಟೂವರ್ಟ್'ನಿಗೆ ಮಾರಣಾಂತಿಕ ಗಾಯಗಳಾದವು. ಬ್ರಿಟಿಷ್ ಸೈನ್ಯ ಇದರಿಂದ ಕಕ್ಕಾಬಿಕ್ಕಿಯಾಯಿತು. ಇಂದಿಗೂ 'ಕ್ಯಾಪ್ಟನ್ ನ್ಯೂಬೇರಿ' ಸಮಾದಿ 'ರುಕ್ಮಾಪುರ'ದಲ್ಲಿದೆ".[೨೦] (ಭಾಸ್ಕರ್ ರಾವ್:೨೦೦೧:೫೧)

ನಂತರ ಬ್ರಿಟಿಷ್‌ರ ಭಾರಿ ಸೈನ್ಯವು ಕೋಟೆಯ ಮೇಲೆ ಆಕ್ರಮಣ ಮಾಡಿತಲ್ಲದೆ 'ಭೀಮರಾಯ'ನೆಂಬ ವಂಚಕನ ಮೂಲಕ ಕೋಟೆಯ ಗುಪ್ತ ಮಾಹಿತಿ ತಿಳಿದುಕೊಂಡು ಬ್ರಿಟಿಷ್‌ರು ಕೋಟೆಯನ್ನು ವಶಪಡಿಸಿಕೊಂಡರು. ಭಿಮರಾಯ ಕೈಗೊಂಡು ಈ ಘೋರ ವಂಚನೆಯ ಕಥೆ ಸುರಪುರದಲ್ಲಿ ಇನ್ನು ಪ್ರಚಲಿತದಲ್ಲಿದೆ. ಇಷ್ಟಾದರೂ ಧೃತಿಗೆಡದ ವೆಂಕಟಪ್ಪನಾಯಕನು ನಿಜಾಂ ಅವರ ಮಂತ್ರಿಯಾದ 'ಸಾಲಾರಜಂಗ'ನ ಮೂಲಕ ವೆಂಕಟಪ್ಪನಾಯಕನನ್ನು ಬಂಧಿಸಿ ಬ್ರಿಟಿಷ್‌ರಿಗೆ ಒಪ್ಪಿಸಲಾಯಿತು. ಈ ವೀರಯೋಧನ ಅಂತ್ಯದ ಬಗ್ಗೆ ಭಿನ್ನಾಭಿಪ್ರಾಯಗಳು ಕಂಡುಬಂದಿವೆ. ಈತನನ್ನು ಬಂಧಿಸಿ ಸಿಂಕದರ್‌ಬಾದ್ ಜೈಲಿನಲ್ಲಿಡಲಾಯಿತು. ಆಗ "ವೆಂಕಟಪ್ಪನಾಯಕರು ನನ್ನನ್ನು ಒಬ್ಬ ಕಳ್ಳನ ಹಾಗೆ ಗಲ್ಲಿಗೆ ಹಾಕಬೇಡಿ ಅದರ ಬದಲು ತೋಪಿನ ಬಾಯಿಗೆ ಕಟ್ಟಿ ಹಾರಿಸಿ" ಎಂದು ಹೇಳಿದ್ದನ್ನು ಸ್ವತಃ ಮೆಡೋಸ್ ಟೇಲರ್ ತಮ್ಮ ಗ್ರಂಥದಲ್ಲಿ ಬರೆದಿದ್ದಾರೆ. (ಭಾಸ್ಕರ್ ೨೦೦೧:೫೨)

ವಿಚಾರಣೆಗಾಗಿ ಇತನನ್ನು ಕರೆದುಕೊಂಡು ಹೋಗುತ್ತಿರುವಾಗ 'ಅಂಬರಪೇಟ'ದಲ್ಲಿ ಗುಂಡು

ಹೊಡೆದು ಸಾಯಿಸಲಾಯಿತು. ಆದರೆ ವೆಂಕಟಪ್ಪ ನಾಯಕನ ಮರಣದ ಬಗ್ಗೆ ಭಿನ್ನಾಭಿಪ್ರಾಯಗಳು ಕಂಡುಬಂದಿವೆ. ಅವು ಗೊಂದಲದಲ್ಲಿಯೇ ಉಳಿದಿವೆ. ಬ್ರಿಟಿಷರ ಅನ್ಯಾಯ ದಬ್ಬಾಳಿಕೆ ವಿರುದ್ಧ ಹೋರಾಡಿದ ವೆಂಕಟಪ್ಪನಾಯಕನು ಹೇಡಿಯಂತೆ ಗುಂಡಿಟ್ಟುಕೊಳ್ಳಲು ಸಾಧ್ಯವಿಲ್ಲ. ಇವರ ಮರಣದ ಬಗ್ಗೆ ಎಲ್ಲವನ್ನು ತಿಳಿದುಕೊಂಡಿರುವ ಅಂದಿನ ಬ್ರಿಟಿಷ್ ಅಧಿಕಾರಿ ಮೆಡೋಸ್ ಟೇಲರ್ ರಾಜನ ಅಂತ್ಯದ ಬಗ್ಗೆ ಮೌನವಹಿಸಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ರಾಜ ನಾಲ್ವಡಿ ವೆಂಕಟಪ್ಪನಾಯಕನ ಮರಣದ ನಂತರ ಸುರಪುರವನ್ನು ೧೮೫೭ರಲ್ಲಿ ನಡೆದ ದಂಗೆಗಳಲ್ಲಿ ಬ್ರಿಟಿಷರಿಗೆ ಸಹಾಯ ಮಾಡಿದ ಹೈದ್ರಾಬಾದ್ ನಿಜಾಂ ಅವರಿಗೆ ಸುರಪುರ ಪ್ರದೇಶವನ್ನು ದಿನಾಂಕ ೦೪.೦೩.೧೮೬೧ರಲ್ಲಿ ಕೊಡಲಾಯಿತು. ಸುರಪುರ ಆಂಗ್ಲರಿಂದ ನಿಜಾಂ ಅವರ ವಶಕ್ಕೆ ಹೋದ ನಂತರ 'ಶೋರಾಪುರ' ಎಂಬ ಹೆಸರು ಬಂದಿತು. ನಿಜಾಂ ಅದರ ಆಳ್ವಿಕೆಗೆ ಒಳಗಾದ ಪ್ರದೇಶಗಳಿಗೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದವು. ೧೫ನೇ ಅಗಸ್ಟ್ ೧೯೪೭ರಂದು ಭಾರತ ಸ್ವತಂತ್ರವಾದಾಗ ಬ್ರಿಟಿಷರು ಭಾರತದಿಂದ ಹೋಗುವ ಸಮಯದಲ್ಲಿ ನಿಜಾಂ ಸಂಸ್ಥಾನಕ್ಕೆ ಸ್ವತಂತ್ರ್ಯವಾಗಿರಬಹುದು, ಇಲ್ಲವೆ ಭಾರತರೊಂದಿಗೆ, ಪಾಕಿಸ್ತಾನದೊಂದಿಗೆ ಸೇರಲು ಅವಕಾಶ ನೀಡಲಾಯಿತು. ೧೮ನೇ ಸೆಪ್ಟೆಂಬರ್ ೧೯೪೮ರಂದು ನಿಜಾಂ ಅರಸರು ತನ್ನ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಿಗೆ ಸ್ವತಂತ್ರ್ಯ ಘೋಷಿಸಿದರು.

ಧಾರ್ಮಿಕ ಆಚರಣೆಗಳು

ಸುರಪುರ ತಾಲ್ಲೂಕು ಕರ್ನಾಟಕ ಚರಿತ್ರೆಯಲ್ಲಿ ತನ್ನದೆ ಆದ ಮಹತ್ವದ ಸ್ಥಾನವನ್ನು ಪಡೆದಿದೆ. ಐತಿಹಾಸಿಕವಾಗಿ, ಭೌಗೋಳಿಕವಾಗಿ ಹಾಗೂ ಧಾರ್ಮಿಕವಾಗಿಯೂ ಕೂಡ ಸರ್ವಧರ್ಮ ಸಮನ್ವಯತಾ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಅಂತೆಯೇ ಅಚ್ಚರಿಯೆನಿಸುವ ಸಾಂಸ್ಕೃತಿಕ ಧಾರ್ಮಿಕ ಆಚರಣೆಗಳು ಉತ್ಸವಗಳು ಸುರಪುರ ತಾಲ್ಲೂಕಿನಲ್ಲಿ ಇಂದಿಗೂ ಜೀವಂತವಾಗಿವೆ.

ಇತಿಹಾಸದುದ್ದಕ್ಕೂ ರಾಜ್ಯಭಾರ ಮಾಡಿದ ಇಲ್ಲಿನ ಅರಸರು ಎಲ್ಲಾ ಧರ್ಮದವರನ್ನು ಎಲ್ಲಾ ಕೋಮಿನವರನ್ನು ಒಂದೇ ಸಮಾನ ದೃಷ್ಟಿಕೋನದಿಂದ ನೋಡಿರುವುದು ಕಂಡುಬರುತ್ತದೆ. ಈ ಭಾಗದ ಅರಸರು ಸರ್ವಧರ್ಮ ಸಮಾನತೆಯ ಗುಣಗಳನ್ನೊಂದಿದ್ದರು. ಅನೇಕ ರಾಜರ ಆಡಳಿತದಲ್ಲಿ ಸರ್ವಧರ್ಮಗಳಿಗೆ ಆಶ್ರಯ ನೀಡಿರುವುದನ್ನು ನಾವು ಕಾಣುತ್ತೇವೆ. ಈ ತಾಲ್ಲೂಕಿನಲ್ಲಿ ಹಿಂದೂ ಮುಸ್ಲಿಂ ಸಾಂಸ್ಕೃತಿಕ ಸಮನ್ವಯ ಕೇಂದ್ರಗಳಾದ ದೇವರ ಗೋನಾಲ, ತಿಂಥಣಿ ಕೊಡೇಕಲ್ ಸುರಪುರಗಳಲ್ಲಿ ಜಾತ್ರೆ, ಹಬ್ಬ ಹರಿದಿನ ಹಾಗೂ ಉತ್ಸವಗಳಲ್ಲಿ ಹಿಂದೂ-ಮುಸ್ಲಿಂರು ಸೇರಿಕೊಂಡು ಆಚರಿಸುವುದನ್ನು ಕಾಣುತ್ತೇವೆ. ಅಂತಹ ಪ್ರಮುಖ ಜಾತ್ರೆ, ಆಚರಣೆ, ಹಬ್ಬಗಳನ್ನು ಈ ಕೆಳಗಿನಂತೆ ನೋಡಬಹುದು.

ತಿಂಥಣಿಯ ಮೌನೇಶ್ವರ : ಸುರಪುರ ತಾಲ್ಲೂಕಿನ ದೇವರಗೋನಾಲದಲ್ಲಿ ವಿಶ್ವಕರ್ಮ

ಮನೆತನದ ಹಾವಪ್ಪ ಹಾವಮ್ಮ ದಂಪತಿಗಳಿಗೆ ಕಾರಣ ಪುರುಷನಾಗಿ ಹುಟ್ಟಿದರು. ಈತನನ್ನು ಅವತಾರಾ ಪುರುಷನೆಂದು ಹೇಳಲಾಗುತ್ತದೆ. ಖ್ವಾಜಾ ಅಮೀನುದ್ದೀನರು ಶ್ರೀ ಫಕೀರೇಶ್ವರ ಗುರುಗಳಾಗಿದ್ದರು. ಅವರು ಲಿಂಗೈಕ್ಯರಾದ ಮೇಲೆ ಮೌನೇಶ್ವರರು (ಕ್ರಿ.ಶ. ೧೫೭೦) ಅವತರಿಸಿದರು. ಈ ದೇಶದ ಬೇರೆ ಪ್ರದೇಶಗಳಲ್ಲಿ ಹಿಂದುಗಳಿಗೆ ಹಿಂದೂವಾಗಿ, ಮುಸ್ಲಿಂರಿಗೆ ಮೌನೇಶ್ವರ ಅವತಾರ ಪುರುಷರಾಗಿದ್ದಾರೆ. ಆದರೆ ದೇವರಗೋನಾಲದ ಮೌನೇಶ್ವರರು ಮುಸ್ಲಿಂರಾಗಿದ್ದ ಖ್ವಾಜಾ ಅಮೀನುದ್ದಿನರ ಅವತಾರವೆಂದು ಜನ ನಂಬಿಕೆಯಿರುವುದು ನಿಜವಾದ ಬಾವೈಕ್ಯತೆಗೆ ಸಾಕ್ಷಿಯಾಗಿದೆ. ಮೌನೇಶ್ವರರ ಕಾಲ ೧೬ನೇ ಶತಮಾನದ ಉತ್ತರಾರ್ಧವೆಂದು ಹೇಳಲಾಗುತ್ತಿದೆ. ದೇವರಗೋನಾಲ ಹಾಗೂ ತಿಂಥಣಿಯ ದೇವಸ್ಥಾನಗಳು ಇಂಡೋ-ಸಾರ್ಸನಿಕ್ ಶೈಲಿಯಲ್ಲಿ ನಿರ್ಮಾಣವಾಗಿದೆ. ಇವು ಹೊರಗಡೆಯಿಂದ ನೋಡುವವರಿಗೆ ಮಸೀದಿಯಂತೆ ಕಾಣುತ್ತದೆ. ಒಳಗಡೆ ಗೋರಿಯ ಆಕಾರದ ಗದ್ದುಗೆಯಿದೆ. ಮೌನುದ್ದಿನ್ ಎಂದು ಮುಸ್ಲಿಂರು ಕರೆದರೆ ಹಿಂದೂಗಳು ಮೌನೇಶ್ವರ ಎಂದು ಕರೆಯುತ್ತಾರೆ. ಇಂದಿಗೂ ಕೂಡ ದೇವಾಲಯದ ಆವರಣದಲ್ಲಿ ಮುಸ್ಲಿಂರು 'ನಮಾಜ್' ಮಾಡಿದರೆ ಹಿಂದೂಗಳು ಪೂಜೆಗೈಯುವ ಅಪರೂಪದ ಕ್ಷಣಗಳನ್ನು ನೋಡ ಬಯಸುವವರು ದೇವರಗೋನಾಲ, ತಿಂಥಣಿ ಹಾಗೂ ಕೊಡೇಕಲ್ಲ ಕ್ಷೇತ್ರಗಳಿಗೆ ಭೇಟಿ ನೀಡಬಹುದು. ತಿಂಥಣಿಯ ದರ್ಗಾವನ್ನು ಸುರಪುರದ ಅರಸರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಕಟ್ಟಿಸಿದ್ದಾರೆ. ಅಲ್ಲದೆ ಈ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅರಸರು ಧನಕನಕಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ತಿಂಥಣಿಯಲ್ಲಿ ಫೆಬ್ರವರಿ ತಿಂಗಳಲ್ಲಿ ಜಾತ್ರೆ ನಡೆದರೆ ದೇವರಗೋನಾಲದಲ್ಲಿ ಏಪ್ರಿಲ್ ತಿಂಗಳ 'ದವನದ' ಹುಣ್ಣಿಮೆ ದಿನ ಜಾತ್ರೆ ಜರುಗುತ್ತದೆ. ಈ ಜಾತ್ರೆಗಳಿಗೆ ಲಿಂಗಾಯತರು, ವಿಶ್ವಕರ್ಮರು, ಮುಸ್ಲಿಂರು ಹಾಗೆ ವಿವಿಧ ಜನಾಂಗದ ಭಕ್ತರು - ಬಂಧುಗಳು ಇಲ್ಲಿ ಸೇರುತ್ತಾರೆ. 'ದಕ್ಷಿಣದ ಕಾಶಿ'ಯೆಂದು ಕರೆಯುವ ಈ ಕ್ಷೇತ್ರಗಳಲ್ಲಿ ಸೇರುವ ಭಕ್ತರೆಲ್ಲರು ಒಂದೇ ಸಂಸ್ಕೃತಿಯವರಂತೆ ಕಾಣುತ್ತಾರೆ. "ಓಂ ಏಕ ಲಾಕ ಐಂಸಿಹಜಾರ್ ಪಾಚೋಫೀರ್ ಪೈಗಂಬರ್ ಮೌನದ್ದೀನ್ ಕಾಶಿಪತಿ ಗಂಗಾಧರ ಹರಹರ ಮಹಾದೇವ" ಎಂದು ಕೂಡಿದ ಭಕ್ತ ಸಮೂಹ ಒಕ್ಕೊರಲಿನಿಂದ ಪಠಿಸುತ್ತಾರೆ. ಈ ಜಾತ್ರೆಗಳಿಗೆ ಹೋಗುವವರಿಗೆ ಇದೊಂದು ವಿಚಿತ್ರ ಅನುಭವ, ಜ್ಯಾತ್ಯಾತೀತ, ಭಾಷಾತೀತ ಮನೋಭಾವನೆಯನ್ನು ಇಲ್ಲಿ ಕಾಣಬಹುದು".[೧]

ಕೊಡೇಕಲ್ ಬಸವಣ್ಣ : ಕೊಡೇಕಲ್ ಸಾಂಸ್ಕೃತಿಕ ಸಮನ್ವಯ ಕೇಂದ್ರವಾಗಿದೆ. ಸುರಪುರ ತಾಲ್ಲೂಕಿನ ಈ ಕೇಂದ್ರವು ಕೊಡೇಕಲ್ ಬಸವಣ್ಣನ 'ಕಾಲಜ್ಞಾನ' 'ವಚನ'ಗಳಿಗೆ ಪ್ರಸಿದ್ಧಿ ಪಡೆದಂತೆ. ಅಲ್ಲಿಯ ದೇವಾಲಯದಲ್ಲಿ ನಡೆಯುವ ಸಾಂಸ್ಕೃತಿಕ ಆಚರಣೆಗಳಿಗೂ ಕೂಡ ಚಾರಿತ್ರಿಕ ಮಹತ್ವ ಪಡೆದಿದೆ. ಕೊಡೇಕಲ್ ಬಸವಣ್ಣನ ಉತ್ಸವಗಳು ದವನದ ಹುಣ್ಣಿಮೆ, ಗೌರಿ ಹುಣ್ಣಿಮೆಯೆಂದು ನಡೆಯುತ್ತವೆ. ಆಗ ಹಿಂದೂ-ಮುಸ್ಲಿಂ ಭಕ್ತರು ಸೇರಿ ಈ ಜಾತ್ರೆಯನ್ನು ಮಾಡುತ್ತಾರೆ. ಕೊಡೇಕಲ್ ಬಸವಣ್ಣನ ದೇವಸ್ಥಾನ ಹೊರಗೆ ಮಸೀದಿಯಂತೆ ಒಳಗೆ ಗೋರಿಯ ಆಕಾರದ ಗದ್ದುಗೆಯಿದೆ.

ಇಲ್ಲಿನ 'ಸ್ವಾಮಿಗಳಿಗೆ ಲಿಂಗವಿಲ್ಲ' ಇಲ್ಲಿ ನಡೆಯುವ ಉತ್ಸವ ಜಾತ್ರೆಗಳಲ್ಲಿ ಹಿಂದೂ-ಮುಸ್ಲಿಂರೆನ್ನದೆ ಹಲವಾರು ಜಾತಿ ಜನಾಂಗದ ಭಕ್ತರು ಸೇರಿ ಧರ್ಮ ಭಾವೈಕ್ಯತೆಯನ್ನು ಮೆರೆಯುತ್ತಾರೆ.

ಸುರಪುರದ ಗೋಕುಳ ಅಷ್ಟಮಿ ಉತ್ಸವ : "ಸುರಪುರ ನಾಡಿನಲ್ಲಿ ಸಾಮಾನ್ಯವಾಗಿ 'ಹಾಲೋಕುಳಿ'ಯ ಜಾತ್ರೆ ಎಂದೇ ಜನರು ಕರೆಯುತ್ತಾರೆ. ಗೋಕುಳ ಅಷ್ಟಮಿಯ ದಿನ ಎಲ್ಲ ಬೇಡರು ಬಣ್ಣ ಬಣ್ಣದ ಉಡುಗೆಗಳನ್ನು ಹುಟ್ಟು ಗುಡ್ಡದ ಮೇಲೆ ನೆರೆಯುವರು. ಕೊಂಬು, ಹಲಗೆ, ಮುಂತಾದ ರಣ ವಾದ್ಯಗಳೊಡನೆ ರಾಜನನ್ನು ಅರಮನೆಯಿಂದ ಗೋಪಾಲಸ್ವಾಮಿ ದೇವಸ್ಥಾನಕ್ಕೆ ವೈಭವದೊಂದಿಗೆ ಕರೆದೊಯ್ಯಲಾಗುತ್ತದೆ. ದೇವಾಲಯದ ಬೈಲು ಜಾಗದಲ್ಲಿ ದೊಡ್ಡದೊಡ್ಡ ೨೫-೩೦ ಕೈಮೊಳ ಉದ್ದಗಾತ್ರದ ಕಂಬಗಳನ್ನು ನೆಡಲಾಗಿರುತ್ತದೆ. ಕಂಬಗಳಿಗೆ ಜಾರುವಂತೆ ಬೆಣ್ಣೆ ಬಾಳ ಅರದಾಳ ಮುಂತಾದ ವಸ್ತುಗಳನ್ನು ಸವರಿ ನುಣಪಾಗಿ ಮಾಡುವರು. ಮೆಲೆ ಮಂಟಪಮಾಡಿ ಇಬ್ಬರು ಅಥವಾ ೩ ಜನ ಕುಳಿತುಕೊಳ್ಳವ ಹಾಗೆ ಮಾಡಿರುತ್ತಾರೆ. ಮಂಟಪಕ್ಕೆ ಬಾಳೆಹಣ್ಣು, ಕುಂಬಳಕಾಯಿ ಹೋಳುಗಳನ್ನು ಕಟ್ಟಲಾಗುತ್ತದೆ. ಒಂದೊಂದು ಕಂಬಕ್ಕೆ ಏಳೆಂಟು ಜನ ಏರಲು ಪ್ರಯತ್ನಿಸುತ್ತಾರೆ. ಆ ಕ್ಷಣಗಳಂತೂ ತುಂಬ ಮನೋರಂಜನಿಯವಾಗಿರುತ್ತದೆ. ಮೇಲಿನಿಂದ ನೀರಿನ ಧಾರೆಗಳನ್ನು ಇಳಿಬಿಡುತ್ತಾರೆ. ಒಂದೊಂದು ಸಲ ಕೈಜಾರಿ ಗುಂಪಿಯಾಗಿ ಬೀಳುತ್ತಾರೆ. ಕಂಬಹತ್ತಿ ಮೇಲೆ ತೂಗು ಹಾಕಿದ ಬಾಳೆಹಣ್ಣನ್ನು ಹರಿಯಬೇಕು. ಆಗ ಲಕ್ಷಾವದಿ ಜನರು ಚಪ್ಪಾಳೆಯ ಮೂಲಕ ವಿಜಯವನ್ನು ಘೋಷಿಸುತ್ತಾರೆ. ಅವನಿಗೆ ರಾಜನಿಂದ ಇನಾಮು ಕೊಡಲಾಗುತ್ತದೆ. ಇಂತಹ ಉತ್ಸವ ಈ ಭಾಗದ ಅಪರೂಪದ ಉತ್ಸವಗಳಲ್ಲಿ ಒಂದಾಗಿದೆ."

ಛಾಯಾಭಗವತಿ ಉತ್ಸವ : ಛಾಯಾಭಗವತಿಯು ಕೃಷ್ಣಾ ನದಿಯ ದಂಡೆಯ ಮೇಲೆ ನಾರಾಯಣಪುರದ ಬಳಿ ಇದೆ. ಇಲ್ಲಿಯೇ 'ಜಲದುರ್ಗ' ಜಲಪಾತ ಎಂದು ಹೆಸರಾದ ಕೃಷ್ಣಾನದಿಯ ಜಲಪಾತ ಇರುವುದು. ಇಲ್ಲಿ ನದಿಯ ಒಂದು ಬಾಗವು ಗುಹೆಯೊಂದನ್ನು ಹೊಳಹೊಕ್ಕು ಬರುತ್ತದೆ. ವೈಶಾಖ ಶುದ್ಧ ತದಿಗೆಯೆಂದು ಇಲ್ಲಿ ಸಹಸ್ರಾರು ಭಕ್ತರು ಈ ಸಾಂಸ್ಕೃತಿಕ ಉತ್ಸವವನ್ನು ಆಚರಿಸಲು ಒಂದೆಡೆ ಸೇರಿ ಸೂರ್ಯದೇವನ ಪತ್ನಿ ಛಾಯಾಭಗವತಿಯನ್ನು ಪೂಜಿಸಿ ಹಬ್ಬ ಆಚರಿಸುತ್ತಾರೆ. ಇದು ಈಗಲೂ ತನ್ನ ಸಾಂಸ್ಕೃತಿಕ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಇದೆ ಛಾಯಾ ಭಗವತಿಯೇ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಪ್ರಸ್ತಾಪವಾಗಿರುವುದು ಐತಿಹಾಸಿಕ ಹಾಗೂ ಪೌರಾಣಿಕತೆಗೆ ಸಾಕ್ಷಿಯಾಗಿದೆ. (ಕಪಟರಾಳ ಕೃಷ್ಣರಾಯರು; ಸುರಪುರ ಸಂಸಥಾನದ ಇತಿಹಾಸ: ೨೦೦೫: ೨೭೨)

ಸಾಹಿತ್ಯಕ ಹಿನ್ನೆಲೆ

ಸುರಪುರ ತಾಲ್ಲೂಕಿನ ನೆಲ ಸಾಹಿತ್ಯ ಸಂಗೀತ, ಕಲೆ ಸಂಸ್ಕೃತಿ ಹೀಗೆ ಹಲವಾರು ಮುಖಗಳಿಂದ ಸಾಂಸ್ಕೃತಿಕ ಪರಿಸರವನ್ನು ಅವಲೋಕಿಸಿದಾಗ ಸುರಪುರದ ಶಿವಶರಣರು ಮತ್ತು ದಾಸರ ಕೊಡುಗೆ ಗಮನಾರ್ಹವಾದದ್ದು. ಜೊತೆಗೆ ಕನ್ನಡದ ಸಾಹಿತಿಗಳು, ಕವಿಗಳು, ವಚನಕಾರರು, ಸಾಹಿತ್ಯ ಕ್ಷೇತ್ರಕ್ಕೆ

ಸಲ್ಲಿಸಿದ ಸೇವೆ ಸ್ಮರಣಾರ್ಹವಾದದ್ದು.

ಜೇಡರ ದಾಸಿಮಯ್ಯ (೧೧೪೦) : ೧೨ನೇ ಶತಮಾನದ ಪೂರ್ವದಲ್ಲಿದ್ದ ಆದ್ಯ ವಚನಕಾರ ಜೇಡರ ದಾಸಿಮಯ್ಯ ಸುರಪುರ ತಾಲ್ಲೂಕಿನ ಮುದನೂರಿನವನು 'ರಾಮನಾಥ' ಈತನ ಆರಾಧ್ಯದೈವ. ಇತನು ಬಟ್ಟೆನೇಯುವ ಕಾಯಕವನ್ನು ಮಾಡಿಕೊಂಡಿದ್ದನು. ಈತನ ಸುಮಾರು ೧೫೦ ವಚನಗಳು ಲಭ್ಯವಾಗಿವೆ. ಅವುಗಳಲ್ಲಿ ತೀವ್ರವಾದ ವೀರಶೈವ ನಿಷ್ಠೆ, ನಿಷ್ಠುರವಾದ ಸ್ಪಷ್ಟವಾಕ್ಯತೆ ಮಾರ್ಮಿಕವಾದ ಸಂಕ್ಷಿಪ್ತ ಶೈಲಿ ಕುಲದಲ್ಲಿ, ಜಾತಿಯಲ್ಲಿ ಮೇಲು-ಕೀಳು ಎಂಬ ಕಲ್ಪನೆಯಾಗಲಿ, ಹೆಣ್ಣು ಗಂಡೆಂಬ ಬೇದಭಾವವಾಗಲಿ ಈತನಲಿಲ್ಲ. ಸರ್ವ ಸಮಾನತೆಯ ಸಮಾಜ ಸೃಷ್ಟಿಯ ಹೆಬ್ಬಯಕೆ ಈತನದಾಗಿದೆ. ದಾಸಿಮಯ್ಯನು ತನ್ನ ಅನುಭವವು ಸಹೃದಯಾಸಕ್ತರಿಗೆ ಜನ್ಯವಾಗಿಸಲು ಉಪಮೇ ರೂಪಕಗಳಿಂದ ಹೇಳುವ ರೀತಿ ಸೋಪೋಜ್ಞವಾಗಿದೆ.

ಇಂತಹ ಮಹಾನ ವಚನ ಸಾಹಿತ್ಯದ ಗಂಗೋತ್ರಿಯ ನಾಡು ದಾಸಿಮಯ್ಯನ ಜನನದಿಂದ ಪಾವನವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ದೇವಪುರದ ಲಕ್ಷ್ಮೀಶ (೧೫೫೦) : ೧೬ನೇ ಶತಮಾನದ ಈ ನಾಡಿನ ಸಂಸ್ಕೃತಿ, ಸಾಹಿತ್ಯ ಚರಿತ್ರೆಯ ಪುಟಗಳನ್ನು ತೆರೆದು ನೋಡಿದಾಗ ಸಾಹಿತ್ಯ ಕ್ಷೇತ್ರದಲ್ಲಿ ಸಂಪದ್ಭರಿತ ಕಾವ್ಯ ಸಂಪತ್ತನ್ನು ಈ ನಾಡು ಹೊಂದಿದೆ.

ನಾದಲೋಲ, ಕಥನಕುಶಲ, ಕವಿಚೂತವನ ಚೈತ್ರ, ಅಣ್ಣಮಾಂಕನ ಮಗ, ಭಾರಧ್ವಾಜ ಗೋತ್ರದ ಭಾಗವತ ಸಾಂಪ್ರಾದಾಯದ ಲಕ್ಷ್ಮೀಶನನ್ನು ಆತನ ಕಾವ್ಯದಲ್ಲಿ ಅವನ ಪರಿಶುದ್ಧವಾದ ಚರಿತ್ರೆ, ಆತನ ಪರಿಸರ ಎಲ್ಲವನ್ನು ನಾವು ತಿಳಿದುಕೊಳ್ಳಲು ಸಾಕು ಇಂತಹ ಮಹಾಕವಿಯನ್ನು ಪಡೆದ ಸುರಪುರ ನಾಡಿನ ಜನರೇ ಧನ್ಯರು.

"ಆದರೆ ಈತನ ಜನ್ಮ ಸ್ಥಳವನ್ನೇ ಚಿಕ್ಕಮಗಳೂರು ಜಿಲ್ಲೆ ಕಡೂರ ತಾಲ್ಲೂಕಿನ 'ದೇವನೂರು' ಎಂದು ಹೇಳಿಕೊಂಡು ಮಹಾಪ್ರಶಸ್ತಿಗಳನ್ನು ಗಳಿಸಿಕೊಂಡಿದ್ದು, ಗಳಿಸಿಕೊಳ್ಳುತ್ತಿರುವುದು ಅಸಮಂಜಸ. ಕವಿಯೇ ತನ್ನ ಕಾವ್ಯದಲ್ಲಿ ೨೮ ಸಲ ದೇವಪುರ ಮತ್ತು ಹಲವುಬಾರಿ ಸುರಪುರ ಎಂದು ಉಚ್ಚರಿಸಿದ ಕವಿಯ ಮಾತನ್ನೇ ಸುಳ್ಳನ್ನಾಗಿಸುವ ಸಂತೆ ನಡೆದಿತ್ತು. ಈತನು ಜನ್ಮಸ್ಥಳದ ಬಗ್ಗೆ ಅಭಿಮಾನ ಶೂನ್ಯನೇ? ಸ್ವತಃ ನನ್ನ ಊರು ದೇವಾಪುರ ಎಂದು ಹೇಳಿಕೊಳ್ಳುವಾಗ ನಾವು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಬೇಕು".[೮]

ಸುರಪುರದಿಂದ ೧೭ ಮೈಲು ದೂರದಲ್ಲಿರುವ 'ಏವೂರು' ಅಂದು ಘಟಿಕಸ್ಥಾನವಾಗಿತ್ತು. ಆದರೆ ಇಂದು ಹಾಳು ಹಳ್ಳಿಯಾಗಿದೆ. 'ನಿರೇರುಹಾಕರ' ಅಥವಾ 'ಅಂಬುರಾಶಿ' ಒಡೆಯನಾದ ಲಕ್ಷ್ಮೀಶನು 'ಅಣ್ಣಮಗೆರೆಗೆ' ಸಂಬಂಧಪಟ್ಟು ಅದನ್ನು ಆತನು ದತ್ತಿ ಪಡೆದಿದ್ದನೆಂಬುದನ್ನು ಏವೂರ

ಶಾಸನದಲ್ಲಿದೆ. ಕನ್ನಡ ಜೈಮಿನಿ ಭಾರತದಲ್ಲಿ ಆದಿಯಿಂದ ಅಂತ್ಯದವರೆಗೂ ಆ ಗ್ರಂಥದಲ್ಲಿ ಕಾಣುವುದು ಕವಿಯ ಊರು 'ದೇವಪುರ'ವೇ ಹೊರತು 'ದೇವನೂರು' ಅಲ್ಲ.

ಸಂಧಿ-೧ ನಾಂದೀ ಪದ್ಯ

ಶ್ರೀ ವಧುವಿನಂಬಕ ಚಕೋರಕಂ ಪೊರೆಯ ಭ
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯ ಜಗ
ತೀ ವಲಯದಮಲ ಸೌಭಾಗ್ಯರತ್ನಾಕರಂ ಪೆರ್ಚಿನಿಂ ಮೇರೆವರಿಯ
ಆವಗಂ ಸರಸ ಕರುಣಾಮೃತದ ಕಲೆಗಳಿಂ
ತೀ ವಿವೆಳನೆಯ ಬೆಳ್ದಿಂಗಳಂ ಪಸರಿಸುವ
'ದೇವಪುರ' ನಿಲಯ ಲಕ್ಷ್ಮೀರಮಣ ನ್ಯಾಸಚಂದ್ರಾನಂದ ಮೆಮಗೀಯಲಿ ||

ಹೀಗೆ "ಜೈಮಿನಿ ಭಾರತದಲ್ಲಿ ಸುರಪುರ ತಾಲ್ಲೂಕಿನ ಪ್ರಸಿದ್ಧ 'ಛಾಯಾಭಗವತಿ'ಯ ಹೆಸರು ಅಲ್ಲದೆ ಸುರಪುರದ ಕೆಲವು ಓಣಿಗಳ ಹೆಸರು ಕೂಡ ಪ್ರಸ್ತಾಪವಾಗಿವೆ. ಹೀಗಾಗಿ ಸಿತಾರಾಮ ಜಾಗಿರದಾರರು ಅನೇಕ ಪುರಾವೆಗಳು ದಾಖಲೆಗಳನ್ನು ನೀಡಿ ಲಕ್ಷ್ಮೀಶ ದೇವಪುರದವನೇ ಎಂದು ಹೇಳಿದ್ದಾರೆ".[೧೯] (ವಜ್ರದಿಪ್ತಿ ೨೦೦೪:೪)

ಮಧ್ಯಕಾಲಿನ ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಅನೇಕ ದೃಷ್ಟಿಕೋನಗಳಿಂದ ಮಹತ್ವ ಪೂರ್ಣವೂ ಕುತುಹಲಕಾರಿಯು ಆದರೂ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನದ ಏರಿಳಿತಗಳ ಪರಿಣಾಮ ಸಾಮಾಜಿಕ ಜೀವನದ ಮೇಲೂ ಪ್ರಭಾವ ಬೀರಿ ಸಾಹಿತ್ಯದಲ್ಲಿ ಅದರ ಪ್ರತಿಬಿಂಬ ಗೋಚರಿಸಿದೆ. ಈ ಸಮಯದಲ್ಲಿ ಒಂದು ಶಿವಶರಣರ ಕ್ರಾಂತಿಕಾರಕ ಆಂದೋಲನ, ೧೨ನೇ ಶತಮಾದಲ್ಲಿ ಘಟಿಸಿದರೆ ಇನ್ನೊಂದು ಹರಿದಾಸ ಭಕ್ತಿ ಚಳುವಳಿ ೧೫-೧೬ನೇ ಶತಮಾನದಲ್ಲಿ ಎದ್ದು ಕಾಣುವಂತಹದ್ದು.

ಭಕ್ತಿಯ ಮೂಲಕ ಮುಕ್ತಿಯನ್ನು ಸೂರೆಗೊಳ್ಳಬೇಕೆಂದು ಬಯಸಿದ ಹರಿದಾಸರು ತಮ್ಮನ್ನು ಮತ್ತು ತಮ್ಮ ಸುತ್ತಮುತ್ತಲಿನ ಸಮಾಜವನ್ನು ಅರಿತುಕೊಳ್ಳಲು ಮತ್ತು ಸುಧಾರಿಸಲು ಮಾಡಿದ ಪ್ರಯತ್ನಗಳು ಹರಿದಾಸ ಸಾಹಿತ್ಯದಲ್ಲಿ ಕಾಣುತ್ತೇವೆ. ಹೀಗೆ ನಡೆದ ಹರಿದಾಸ ಸಾಹಿತ್ಯವನ್ನು ಸುರಪುರ ತಾಲ್ಲೂಕಿನ ಹಿನ್ನೆಲೆಯಿಟ್ಟುಕೊಂಡು ಅವಲೋಕಿಸಿದಾಗ ಸುರಪುರದ ಅನೇಕ ದಾಸರು ಕಾಣಸಿಗುತ್ತಾರೆ.

ಸುರಪುರದ ಆನಂದದಾಸರು : 'ಸುರಪುರದ ಆನಂದದಾಸರು' ಎಂದೇ ಪ್ರಸಿದ್ಧರಾದ 'ಕಮಲೇಶ ವಿಠಲ' ಮುದ್ರಿಕೆ ಹೊಂದಿದ ಕುಲಕರ್ಣಿ ರಾಮರಾಯರು ಮೂಲತಃ ಲಿಂಗಸೂಗುರಿನವರು. ಆದರೆ ತಮ್ಮ ಬಾಲ್ಯ, ವಿದ್ಯಾಭ್ಯಾಸ ಸಾಧನೆ ಎಲ್ಲವುಗಳನ್ನು ಸುರಪುರದಲ್ಲಿದ್ದುಕೊಂಡು ಪೂರೈಸಿ ಮುಂದೆ

ಮೈಸೂರು ಸಂಸ್ಥಾನದ ಅರಸರಿಂದ ಕನಕಾಭಿಷೇಕವನ್ನು ಮಾಡಿಸಿಕೊಂಡು ಸುರಪುರಕ್ಕೆ ದವಳ ಕೀರ್ತಿಯನ್ನು ತಂದುಕೊಟ್ಟ ಹರಿದಾಸರೆಂದರೆ ಸುರಪುರದ ದಾಸ ಚರಿತ್ರೆಯ ಬಗ್ಗೆ ನಮಗೆ ಹೆಮ್ಮೆಯನಿಸದೆಯಿರದು.

ಮುದುನೂರಿನ ಹೆನ್ನರಂಗದಾಸರು : (೧೮ನೇ ಶತಮಾನ ಪೂರ್ವಾರ್ಧ) ಇತನು ಮುದನೂರಿನ ಗೋಪಾಲಸ್ವಾಮಿ ಗುಡಿಯ ಅರ್ಚಕರ ಮನೆಯಲ್ಲಿ ಜನಿಸಿದರು. 'ಹೆನ್ನರಂಗ ವಿಠಲ' ಎಂಬ ಮುದ್ರಿಕೆಯಿಂದ ತಮ್ಮ ಕೀರ್ತನೆಗಳನ್ನು ರಚಿಸಿದರು. ಮುದನೂರಿನ ಶ್ರೀ ವೇಣುಗೋಪಾಲಸ್ವಾಮಿಯ ಗುಡಿಯಲ್ಲಿ ಹೆನ್ನರಂಗದಾಸರ ಹಸ್ತಪ್ರತಿಗಳು ದೊರೆತಿವೆ. ಇದುವರೆಗೂ ಇವರ ೧೨೫ ಕೀರ್ತನೆಗಳು ದೊರಕಿವೆ. ಇವರು ಸುರಪುರ ಸಂಸ್ಥಾನದ 'ವಾಸುದೇವನಾಯಕ'ರ ಸಮಕಾಲಿನರೆಂದು ತಿಳಿದುಬರುತ್ತದೆ.

ಇವರ ಮನೆತನದಲ್ಲಿ ಮೊದಲ ಮಗು ಗಂಡಾಗಲಿ ಹೆಣ್ಣಾಗಲಿ ಜನಿಸಿದರೆ ಆ ಮಗುವಿಗೆ ಧಾರ್ಮಿಕ ಸಂಸ್ಕಾರ ಕೊಟ್ಟು ಮುಂದೆ ಜೀವನ ಪೂರ್ತಿ ಬ್ರಹ್ಮಚಾರ್ಯ ವ್ರತಪಾಲಿಸುತ್ತಾ ಜ್ಞಾನ, ಭಕ್ತಿ, ವೈರಾಗ್ಯ ಜೀವನದಿಂದ ತಾನು ಉದ್ಧಾರವಾಗಿ ಸಮಾಜ ಸೇವೆ ಮಾಡಬೇಕಾಗುತ್ತಿತ್ತು. ಅಂಥವರ ಈ ನಮ್ಮ ಹರಿದಾಸ ಹೆನ್ನರಂಗದಾಸರು. ಇತನ ಮುಖ್ಯ ವೃತ್ತಿ 'ಗೋಪಾಳವೃತ್ತಿ' ಈ ವೃತ್ತಿಯಿಂದಲೇ ಜೀವನ ಸಾಗಿಸುತ್ತಿದ್ದರು.

ಶ್ರೀನಿವಾಸದಾಸರು (೧೯೯೨) : 'ಶ್ರೀನಿವಾಸ ವಿಠಲ' ಅಂಕಿತದ ಶ್ರೀನಿವಾಸದಾಸರ ಹೆಸರು 'ತಿರುಮಲವ್ವಯ್ಯದೇವರು' ಸುರಪುರ ತಾಲ್ಲೂಕಿನ ತಿಂಥಣಿ ಗ್ರಾಮದ ಕುಲ್ಕರ್ಣಿ ಮನೆತನದವರು. ಇವರ ವಂಶಸ್ಥರು ಇನ್ನು ಶ್ರೀ ಕಣ್ವಮಠ ವೀರಘಟ್ಟ ಸಂಸ್ಥಾನದ ಪೀಠಾದಿಕಾರಿಗಳಾಗಿದ್ದಾರೆ. ಇದರ ಪ್ರಧಾನ ಕೇಂದ್ರ ತಾಲ್ಲೂಕಿನ 'ಹುಣಸಿಹೊಳಿ'ಯಲ್ಲಿದೆ.

ಶ್ರೀನಿವಾಸದಾಸರು ಸಾವಿರಾರು ಹಾಡುಗಳನ್ನು ಸುಳಾದಿ ಉಗಾಬೋಗಗಳನ್ನು ರಚಿಸಿದ್ದಾರೆ. ದಾಸರು ತಮ್ಮ ೭೦-೭೫ನೇ ವಯಸ್ಸಿನಲ್ಲಿ ದೇಹ ತ್ಯಾಗ ಮಾಡಿದರೆಂದು ತಿಳಿದುಬರುತ್ತದೆ. ಶ್ರೀನಿವಾಸ ದಾಸರಿಗೆ ಕರ್ನಾಟಕ, ಆಂಧ್ರದ ಅನೇಕ ಭಕ್ತರು ವಿಶೇಷವಾಗಿ ಭೂಮಿಗಳನ್ನು ದಾನವಾಗಿ ಕೊಟ್ಟರೆಂದು ತಿಳಿದುಬರುತ್ತದೆ.

ಶ್ರೀ ಗೋಪತಿ ಕೃಷ್ಣದಾಸರು : (೧೯ನೇ ಶತಮಾನ) ಸುರಪುರ ಸಂಸ್ಥಾನ ಆಸ್ಥಾನ ಪಂಡಿತರಾದ ಶ್ರೀ ಸುಬ್ಬಣ್ಣಚಾರ್ಯ ಅವರೇ 'ಗೋಪತಿ ಕೃಷ್ಣವಿಠಲ' ಅಂಕಿತದಾಸರು. ಇವರು ಅನೇಕ ಕೀರ್ತನೆಗಳನ್ನು ರಚಿಸಿರುವರು. ತುಂಗ-ಭದ್ರಾ ನದಿಗಳ ಸಂಗಮದ ಹತ್ತಿರವಿರುವ ಮದೇನೂರಿನ ಶ್ರೀ ಸಂಗಮೇಶ್ವರ ದೇವಸ್ಥಾನದಲ್ಲಿ ಗೋಪತಿ ಕೃಷ್ಣದಾಸರು ತಪಸ್ಸು ಮಾಡಿದರು. ಅಂದಿನಿಂದ 'ಮುದೆನೂರು ದಾಸರು' ಎಂದೂ ಕೂಡ ಕರೆಯುತ್ತಿದ್ದರು. ಧಾರವಾಡ ಜಿಲ್ಲೆಯ 'ಹಾವನೂರ' ಗ್ರಾಮದಲ್ಲಿ ೧೮೭೫ರಂದು ದೇಹತ್ಯಾಗ ಮಾಡಿದರೆಂದು ಶಿಷ್ಯರಾದ ಕನಕಪ್ಪನಾಯಕನಿಂದ ತಿಳಿದು

ಬಂದಿದೆ. ಈ ದಾಸರು ಅನೇಕ ಕೀರ್ತನೆಗಳು ರಚನೆಮಾಡಿದರೂ ಈಗ ಕೇವಲ ಒಂದು ಕೀರ್ತನೆ ದೊರಕಿದೆ.

ಶ್ರೀ ಟೋಕದಾಸರು : (೨೦ನೇ ಶತಮಾನ) ಟೋಕದಾಸರ ಹೆಸರು ಲಿಂಗೋಚಂದ್ರಶೇಖರ ಕಲ್ಬುರ್ಗಿ. 'ದ್ರೋಣತೀರವಿಠಲ' ಎಂಬ ಅಂಕಿತದಿಂದ ಅನೇಕ ಕೀರ್ತನೆಗಳು ಸುಳಾದಿ ಉಗಾಬೋಗಗಳನ್ನು ರಚಿಸಿದ್ದಾರೆ. ಇವರ ವಂಶದವರ ಮನೆಗಳು ಇನ್ನೂ ಸುರಪುರದಲ್ಲಿವೆ. ಈ ಮನೆತನದವರು ಇಂದಿಗೂ ಭಕ್ತಿ, ಜ್ಞಾನ ಪ್ರಸಾರ ಕಾರ್ಯಕ್ರಮಗಳಲ್ಲಿ ಇವರ ಕೀರ್ತನೆಗಳಲ್ಲಿ ಪರಮಾತ್ಮನ ಅಚಲವಾದ ಭಕ್ತಿ ದೃಡ ಚಿತ್ತ, ಆತ್ಮ ಬೋಧೆ ಕಾಣಬಹುದಾಗಿದೆ.

ಗಿರಿಧರದಾಸರು (೧೯೫೨) : ಇವರು ತಾಲ್ಲೂಕಿನ ಹುಣಸಿಹೇಳ ಗ್ರಾಮದವರಾಗಿದ್ದಾರೆ. ಸಂಗೀತ-ಸಾಹಿತ್ಯ, ಆಧ್ಯಾತ್ಮ ಚಿಂತನೆಗಳಲ್ಲಿ ತೊಡಗಿದ್ದಾರೆ. ಗಿರಿಧರದಾಸರ ಅಂಕಿತನಾಮ 'ಗಿರಿಧರ ವಿಠಲ' ಸುಮಾರು ಐದನೂರು ಕೀರ್ತನೆಗಳನ್ನು ತಮ್ಮ ಅಂಕಿತದಲ್ಲಿ ದಾಸರ, ಯತಿಗಳ, ದೇವತೆಗಳ ಸ್ತೋತ್ರಗಳನ್ನು ಕಾಣಬಹುದು.

ಸುರಪುರದ ದಾಸಾಚಾರ್ಯರು : (೨೦ನೇ ಶತಮಾನ) (೧೯೫೦) ಇವರು ಮೂಲತಃ ಗದಗದ ತಂಗೋಡ ಗ್ರಾಮದವರು. ಚಿಕ್ಕಂದಿನಿಂದಲೇ ಕೀರ್ತನೆ ಹೇಳುವುದು ಇವರ ಹವ್ಯಾಸವಾಗಿತ್ತು. ತಂಗೋಡ ಧಾರವಾಡ, ಸುರಪುರ, ಹೈದ್ರಾಬಾದ್‌ಗಳಲ್ಲಿ ಕೀರ್ತನೆಗಳನ್ನು ಹೇಳಿದ್ದಾರೆ. ಸುರಪುರದಲ್ಲಿ ನೆಲೆಯೂರಿ ಬದುಕಿದರು. ೧೯೫೦ರಿಂದ ಸುರಪುರದಲ್ಲಿ ವಾಸವಾಗಿದ್ದರು. 'ಮೌನೇಶ್ವರ ಚರಿತಾಮೃತ'ವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ಸಂಗೀತ, ಸಾಹಿತ್ಯ ಕ್ಷೇತ್ರದಲ್ಲಿನ ಇವರ ಸೇವೆ ಅಪಾರವಾದದ್ದು.

ಹೀಗೆ ಸುರಪುರದ ಅನೇಕ ಹರಿದಾಸರು ದಾಸಸಾಹಿತ್ಯಕ್ಕೆ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದು ಕಾಣುತ್ತೇವೆ. ಸುರಪುರ ತಾಲ್ಲೂಕಿನ ಶಿವಶರಣರನ್ನು, ಸಂತರನ್ನು ಈ ಕೆಳಗಿನಂತೆ ನೋಡಬಹುದು.

ಅಗ್ನಿಯ ಹೊನ್ನಯ್ಯ (೧೨ನೇ ಶತಮಾನ) : ಸುರಪುರದಿಂದ ಸುಮಾರು ೩೦ ಕಿ.ಮೀ. ದೂರದಲ್ಲಿ ಪಶ್ಚಿಮದಿಕ್ಕಿನಲ್ಲಿರುವ 'ಅಗ್ನಿ' ಎಂಬ ಗ್ರಾಮದವನು. ತಂದೆ-ತಾಯಿಹೆಸರು ನಿಶ್ಚಿತವಾಗಿ ತಿಳಿದಿಲ್ಲ. ಹೊನ್ನಯನು ಶುದ್ಧ ಕಾಯಕದಲ್ಲಿ ನಿಷ್ಠೆಯುಳ್ಳವಗಿದ್ದನು. ಅವನ ಕಾಯಕ ಭೀಮಾನದಿಯ ಉದಕವನ್ನು ಹೊತ್ತುತಂದು ಕಲ್ಯಾಣದಲ್ಲಿರುವ ಬಸವೇಶ್ವರರಿಗೆ ಮುಟ್ಟಿಸುವುದು. ಹೀಗೆ ಉದಕವನ್ನು ಹೊತ್ತು ಕಲ್ಯಾಣಕ್ಕೆ ಬರುವಾಗ ಮಾರ್ಗದಲ್ಲಿ ಮುಗ್ಗರಿಸಿ ಬಿದ್ದನು. ನೆಲಕ್ಕೆ ಬಿದ್ದರೂ ಹೊನ್ನಯ್ಯನು ಕಾವಡಿ (ಕಂಬಿ)ಯನ್ನು ನೆಲಕ್ಕೆ ಹತ್ತದಂತೆ ಹಿಡಿದಿದ್ದನು. ಆಗ ಶಿವನ ದರ್ಶನ ಮಾಡಿಸಿಕೊಂಡ ಮಹಾಶಿವಶರಣ.

ಕಕ್ಕೇರಿಯ ಕಕ್ಕಯ್ಯ (೧೨ನೇ ಶತಮಾನ) : ಸುರಪುರದ ದಕ್ಷಿಣಕ್ಕೆ ೨೦ ಕೀ.ಮಿ. ದೂರ

ಇರುವ ಕಕ್ಕೇರಿ ಈತನ ಕಾರ್ಯಕ್ಷೇತ್ರವಾಗಿತ್ತು. ಕಲ್ಯಾಣದಲ್ಲಿ ಬಸವಾದಿ ಶರಣರು ಬಂದು ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತಿರುವದನ್ನು ಕೇಳಿ ಅವನು ಅಲ್ಲಿಗೆ ಬಂದು ವೀರ ಶೈವ ದೀಕ್ಷೆಯನ್ನು ಹೊಂದಿದನು. "ಬಸವೇಶ್ವರನು ಕಕ್ಕಯ್ಯನನ್ನು ತನ್ನ ವಚನಗಳಲ್ಲಿ ಆಗಿಂದ್ದಾಗ್ಗೆ ಸ್ತುತಿಸುತ್ತಾನೆ. ಕಕ್ಕಯ್ಯನು ವಚನಕಾರನೂ ಆಗಿದ್ದಾನೆ. ಕಲ್ಯಾಣದಲ್ಲಿ ಕ್ರಾಂತಿಯಾದಾಗ ಶಿವಶರಣರು ಕಲ್ಯಾಣವನ್ನು ಬಿಟ್ಟು 'ಉಳುವಿ'ಗೆ ಹೊರಡಲು ಕಕ್ಕಯ್ಯನು ಅವರಲ್ಲಿ ಸೇರಿಕೊಂಡು ಪ್ರತಿಯೊಂದು ಕಾಳಗದಲ್ಲಿ ಬಿಜ್ಜಳನ ಸೈನ್ಯದೊಂದಿಗೆ ಹೋರಾಡುತ್ತಾ ಶಿವಶರಣರಿಗೆ ಧೈರ್ಯಕೊಡುತ್ತಾ, ನಡೆದನು 'ಕಾತರವಳ್ಳಿ'ಯ ಕಾಳಗವಾದ ಬಳಿಕ ಅವನು ಅರಣ್ಯ ಪ್ರವೇಶಿಸಿ ಅವನು ಕಕ್ಕೇರಿ ಗ್ರಾಮದಲ್ಲಿ ತನ್ನ ಸೈನ್ಯದೊಂದಿಗೆ ಬಿಡಾರಹೂಡಿದನು. ಅಲ್ಲಿಯೇ ಅವನು ಶಿವೈಕ್ಯನಾದನೆಂದು ತೋರುತ್ತದೆ. ಕಕ್ಕೇರಿಯಲ್ಲಿ ಇಂದಿಗೂ ಪುರಾತನವಾದ ಕಕ್ಕಯ್ಯನ ದೇವಾಲಯವಿದೆ. ಅದರ ಪಕ್ಕದಲ್ಲಿ ಕಕ್ಕಯ್ಯನ ಕೆರೆ ಕಕ್ಕಯ್ಯನ ಭಾವಿ ಎಂಬ ಜಲಾಶಯವಿತ್ತೆಂದು ತಿಳಿದುಬರುತ್ತದೆ"[೨]. ಕಕ್ಕಯ್ಯನ ಸಮಾಧಿ ಕೂಡ ಇಲ್ಲಿಯೆ ಇದೆ. ಕಕ್ಕಯ್ಯನು ಶಿವಶರಣರಲ್ಲಿ ಆಗ್ರಗಣ್ಯನಾಗಿ, ಧರ್ಮಪರಿಪಾಲನೆಗಾಗಿ ಹೋರಾಡುತ್ತಾ ಕರ್ತವ್ಯ ದಕ್ಷತೆ, ಕಲಿತನಕ್ಕೆ ಸ್ಫೂರ್ತಿದಾಯಕ ಶರಣನಾಗಿದ್ದನೆಂದೇ ಸುರಪುರ ತಾಲ್ಲೂಕು ಸರ್ವರಂಗದಲ್ಲಿ ಪವಿತ್ರತೆಯನ್ನು ಕಾಯ್ದುಕೊಂಡಿದೆ.

ಹಾವಿನಾಳ ಕಲ್ಲಪ್ಪಯ್ಯ (೧೨ನೇ ಶತಮಾನ) : ಸುರಪುರ ಪಟ್ಟಣದಿಂದ ದಕ್ಷಿಣಕ್ಕೆ ೧೦ ಕಿ.ಮಿ. ದೂರವಿರುವ 'ಹಾವಿನಾಳ' ಎಂಬ ಗ್ರಾಮದವನು. ಇಲ್ಲಿ ಪುರಾತನ ಕಲ್ಲಯ್ಯನ ಗುಡಿ ಇದೆ. ಈತನ ಐತಿಹಾಸಿಕ ಹಿನ್ನಲೆಯ ಬಗ್ಗೆ ಹಳೆತಲೆಮಾರಿನವರು ಇನ್ನೂ ಅನೇಕ ಪವಾಡ ಕತೆಗಳನ್ನು ಹೇಳುತ್ತಾರೆ. ಗುಡಿಯಲ್ಲಿ ನಿಧಿ ಇದೆಯೆಂದು ಗುಮಾನಿಯಿಂದ ಯಾರೋ ಗರ್ಭಗುಡಿಯಲ್ಲಿ ಕಲ್ಲುಗಳು ಕಿತ್ತಾಡಿದ್ದಾರೆ. ಯಾವುದೋ ಲಿಪಿಯಲ್ಲಿರುವ ಬಂಡೆಗಲ್ಲು ಇತ್ತೆಂದು ಆದರೆ ಲಿಪಿಯನ್ನು ದನಕಾಯುವ ಹುಡುಗರ ಕಾಟದಿಂದ ಓದಲು ಬಾರದಂತಾಗಿತ್ತು. ಇದರ ಸಂಶೋಧನೆಗಾಗಿಯೇ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ಮುಖ್ಯಸ್ಥ ಪ್ರೊ. ಕೆ. ಪೆದ್ದಯ್ಯನವರು ಸಂಶೋಧನೆ ಕೈಗೊಂಡಿದ್ದಾರೆ.

ಕಲ್ಲಿಯ್ಯ ಅಕ್ಕಸಾಲಿಗ ವೃತ್ತಿಯವನಾಗಿದ್ದನು. ಇವನ ಆರಾಧ್ಯ ಧೈವ ಕಲ್ಲಿನಾಥ. ಮಂಗಳ ವಾಡವನ್ನು ಆಳುತ್ತಿದ್ದ ಬಿಜ್ಜಳನು ಕಲ್ಲಯ್ಯನ ತಂದೆಗೆ ಬಂಗಾರದಿಂದ ಕೆಲವೊಂದು ಆಭರಣಗಳನ್ನು ಮಾಡಿಕೊಡಲು ಹೇಳಿಕಳುಸಿದನು. ತಂದೆ ಆ ಕೆಲಸವನ್ನು ಕಲ್ಲಯ್ಯನಿಗೆ ಒಪ್ಪಿಸಿದ. ಕೆಲಸ ಮಾಡಲು ತಡವಾಗಿ ತಂದೆ ಅವನಿಗೆ ಹೊಡೆಯಲು ದೇವಾಲಯಕ್ಕೆ ಬಂದು ಆತ್ಮಹತ್ಯೆ ಮಾಡಿಕೊಳ್ಳುವಾಗ ಪರಮಾತ್ಮ ಪ್ರತ್ಯೇಕ್ಷನಾದನು. ಶಿವಾನುಭವ ಶಾಸ್ತ್ರವನ್ನು ಅನುಸರಿಸಿ ಪ್ರಸಿದ್ದ ವಚನಕಾರನಾದನು. ಕಲ್ಲಯ್ಯನು ಬ್ರಾಹ್ಮಣರೊಂದಿಗೆ ವಾದ-ವಿವಾದ ಬೀಳಲು ತಾನು ಸಾಕೀದ ನಾಯಿಯಿಂದಲೇ ವೇದವನ್ನು ಸುಸ್ವರವಾಗಿ ನುಡಿಸಿದನು. ಕಲ್ಲಯ್ಯನು ಅನೇಕ ಪವಾಡಗಳನ್ನು ತೋರಿಸಿದ ಶಿವಶರಣನಾಗಿದ್ದನು. ಇವನು ಮುಂದೆ ಸೋಲಾಪುರಕ್ಕೆ ಹೋಗಿ ಅಲ್ಲಿಯೇ ಸಮಾಧಿಸ್ತನಾದನೆಂದು

ಹೇಳುವರು.

ಎಮ್ಮಡಿಗೆಯ (ಹೆಮ್ಮಡಿಗೆ) ಪ್ರಭುದೇವ (೧೯ನೇ ಶತಮಾನ) : ಸುರಪುರದಿಂದ ೧೫ ಕಿ.ಮೀ. ದೂರದ ಪುರಾತನ ಪ್ರಸಿದ್ಧ ಎಮ್ಮಡಿಗೆಯಲ್ಲಿ ಪ್ರಭುದೇವರ ಗುಡಿಯಿದೆ. ಇದೇ ಊರಿನ ಪ್ರಭುದೇವನೆಂಬ ಶರಣನು, ಕವಿಯೂ ಆಗಿದ್ದನು. ಅವನ ಅಂಕಿತ "ಎಮ್ಮಡಿಗೆಯ ಪ್ರಬುದೇಲಿಂಗ" ಸಾವೀರಾರು ಹಾಡುಗಳನ್ನು ಬರೆದನು. ಯಾದಗೀಕ ಬಳಿಯ 'ಭಂಡೇಶನು' ಈತನ ಗುರುವಾಗಿದ್ದನು. ಈತನ ಪದಗಳಲ್ಲಿ ಸಹಜಪ್ರಾಸ, ಬಾವದ ಬೆಡಗು ತತ್ವದ ತಿರುಳುಗಳು ಮತ್ತು ಗುರು ಮಹತ್ವ ಇರುವುದರಿಂದ ಇವರ ಪದಗಳನ್ನು ಮತ್ತೆ ಮತ್ತೆ ಕೇಳಬೇಕೆನಿಸುತ್ತಿದೆ.

ಉದಾ. ಅಡಿಗಡಿಗೆ ಮಾಡೋ ಗುರಸಂಗ
ತಡೆಯದಲೇ ಒಲಿವನೋ ಪ್ರಭುಲಿಂಗ.
ಕೂಗತದಣ್ಣ ಕೋಳಿ ಕೂಗುತದಣ್ಣ
ಕೂಗುತದ ಕೋಳಿ ತಾನು ಯೋಗಮಾರ್ಗದ ಬೀದಿಯಲ್ಲಿ
ಆಗ ಈಗ ನಾದ ಹೇಮ ಭಾಗದಲ್ಲಿ ಪ್ರವಣದಿಂದ
ಅಗ್ನಿಯಂಬೊ ಗುಡ್ಡದೊಳಗೆ ದಿಗ್ಗನೆ ಉರಿ ಬೆಳಗು ಕಂಡು
ಸ್ವಗ ಸೂತ್ರದ ದಾರಿಯೊಳಗೆ, ಜಗ್ಗಿ ಝೀಂಕಾರ ನಾದದಿಂದ
ಕೂಗುತದಣ್ಣ ಕೋಳಿ ಕೂಗುತದಣ್ಣ

ಯೋಗ ಸಕೀಲವನ್ನು ತಿಳಿದ ಸುಜ್ಞಾನ ಬೆತ್ತವೇ. ಇಲ್ಲಿ 'ಕೋಳಿ' 'ಅಗ್ನಿ' ಎಂದರೆ 'ಬೆದಗ್ನಿ' ಇದು ಪ್ರಭುದೇವನ ಪರಮಹಂಸ ತತ್ವದ ವರ್ಣನೆ ಇಲ್ಲಿನ ರೂಪಕ ರಮ್ಯತೆ ಕಾವ್ಯದ ಕಮನೀಯತೆ ಮೇಲು ಮಟ್ಟದ್ದು.

ಏಕೋರಾಮಾರಾಧ್ಯ (೧೨ನೇ ಶತಮಾನ) : ಇವನು ಸುರಪುರದ ಮುದ್ರಾಪುರದವನು. ಅಂದರೆ ಸುರಪುರದಿಂದ ೨೦ ಕಿ.ಮಿ. ದೂರದ ಮುದನೂರು ಗ್ರಾಮದವನು. ರಾಮರುದ್ರ ಶಿವಾಚಾರ್ಯನ ಮಗನಾಗಿ 'ರಾಮನಾಥ' ದೇವರನ್ನು ಬೇಡಿಕೊಳ್ಳಲು ಮಗ ರಾಮರಾಧ್ಯ ಜನಿಸಿದನು. ಮೊದಲು ಶೈವನಾಗಿದ್ದ 'ಶಂಕುಕರ್ಣಗಣಾಧೀಶ್ವರ'ನಿಂದ ವಿರಶೈವನಾದನು. ಈತನು ಮುದ್ರಾಪುರದ ಅರಸ ವೀರಬಾಸ್ಕರನೊಂದಿಗೆ ಶಿವ ಮತವೇ ಶ್ರೇಷ್ಠ ಎಂದು ವಾದಿಸಿದನು. 'ಹೊಲೆಯನಾದರು ಶಿವಭಕ್ತರೆ ಕುಲಜರೆಂದು' ಸಿದ್ದಿಮಾಡಿದನು. ಅಯೋದ್ಯಯ 'ವ್ಯಾಸದೀಕ್ಷಿತ'ನು ರಾಮರಾದ್ಯನ ಕೀರ್ತಿಯನ್ನು ತಿಳಿದು ಮುದ್ರಾಪುರಕ್ಕೆ ಬಂದನು. ಆತನೊಡನೆ ವೀರಶೈವ ಮತ ತತ್ವಗಳ ಚರ್ಚೆಯಾಗಿ ಅದರಲ್ಲಿ 'ವ್ಯಾಸದೀಕ್ಷಿತ'ನನ್ನು ಸೋಲಿಸುತ್ತಾನೆ. ಅನೇಕ ಪವಾಡಗಳಿಂದ ಪ್ರಸಿದ್ಧಿ ಪಡೆದ ರಾಮಾರಾದ್ಯ ಒಂದು ದಿನ ರಾಮನಾಥ ದೇವಾಲಯಕ್ಕೆ ಹೋಗಿರಲು ಪರಮಾತ್ಮದರ್ಶನ ಕೊಟ್ಟು ಆತನನ್ನು ಕೈಲಾಸಕ್ಕೆ ಕರೆದೊಯ್ದು ವಾಡಿಕೆಯಿದೆ.

ಕೆಂಬಾವಿ ಬೋಗಣ್ಣ: (ಕ್ರಿ.ಶ. ೧೭೮೦-೧೮೬೫) ಸುರಪುರದಿಂದ ಸುಮಾರು ೩೦ ಕಿ.ಮಿ.

ದೂರದಲ್ಲಿರುವ ಕೆಂಬಾವಿ ಗ್ರಾಮದವನು. ಅವನು ಶಿವಾನುಭವದ ವಿಚಾರಗಳಿಗೆ ಒಲಿದವನಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿದನು. ಅಂದಿನಿಂದ ಅವನು ಜಾತಿಬೇದವನ್ನು ಎಣಿಸದೇ ಹೊಲೆಯರೊಡನೆ ಸಹ ಬೋಜನಾದಿಗಳನ್ನು ನಡೆಸುವನು. ಊರಲ್ಲಿದ್ದ ಬ್ರಾಹ್ಮಣರು ಬೋಗಣ್ಣನ ಈ ರೀತಿ ನೋಡಿ ಕುಪಿತರಾಗಿ ಅರಸನಿಗೆ ಚಾಡಿ ಹೇಳಿದರು. ಅರಸನು ಊರು ಬಿಟ್ಟು ಹೋಗಲು ಹೇಳಲಾಗಿ ಊರಿನಿಂದ ಹೊರ ಹೋದನು. ದೇವಾಲಯಗಳಲ್ಲಿಯ ದೇವರು ಲಿಂಗಗಳೆಲ್ಲವು ಬೋಗಣ್ಣನ ಬೆನ್ನ ಹಿಂದೆ ಹೋದವು. ದೇವಾಲಯಗಳಲ್ಲಿ ದೇವರ ಉಳಿಯಲಿಲ್ಲ. ಪಟ್ಟಹಾರ ಜನ ಹೌಹಾರಿ ಬೋಗಣ್ಣನ ಮಹಾಮಹಿಮನೆಯ ಅವನನ್ನು ಪಟ್ಟಣಕ್ಕೆ ಬರಮಾಡಿಕೊಂಡರು.

ಕೊಡೇಕಲ್ ಬಸವಣ್ಣ (೧೫ನೇ ಶತಮಾನ) : (೧೪೮೯) ಸುರಪುರದಿಂದ ೪೫ ಕಿ.ಮಿ. ದೂರದಲ್ಲಿ ಕೃಷ್ಣಾ ನದಿಯ ಸಮೀಪದಲ್ಲಿದೆ. ಕಲ್ಯಾಣದ ಬಸವಣ್ಣನವರು ಕಲ್ಯಾಣದಿಂದ ಕೂಡಲ ಸಂಗಮಕ್ಕೆ ಹೋಗುವಾಗ ಇಲ್ಲಿ ತಂಗಿ ಲಿಂಗಾರ್ಚನೆ ಮಾಡಿಕೊಂಡರೆಂದು ಮುಂದೆ ಇದೇ ಕೊಡೇಕಲ್ ಆಯಿತು. ಬಸವಣ್ಣನವರು ತಾವು ಅಲ್ಲಿಂದ ಹೋಗುವಾಗ ಮುಂದಾಗುವ ಭವಿಷ್ಯವನ್ನು ಅಲ್ಲಿನ ಭಕ್ತರಿಗೆ ಹೇಳಿದರೆಂದು ಅದುವೆ ಮುಂದೆ ಕಾಲಜ್ಞಾನವಾಗಿ ಹೊರಹೊಮ್ಮಿತೆಂದು ತಿಳಿದುಬರುತ್ತದೆ.

"ಕೊಡೇಕಲ್ ಬಸವಣ್ಣನು ದೇಶ ಸಂಚಾರ ಮಾಡುತ್ತಾ ಕಲ್ಯಾಣಕ್ಕೆ ಬಂದು ಅಲ್ಲಿ ಗುಪ್ತವಾದ ಮಂತ್ರದ ಸುರಳಿಯನ್ನು ತೆಗೆದುಕೊಂಡು ಕಡೆಯ ಕಲ್ಯಾಣವೆಂಬ ಕೊಡೇಕಲ್‌ಗೆ ಬಂದು ನೆಲಸಿದನು. ಮಂತ್ರದ ಸುರಳಿ ಕಲ್ಯಾಣದ ಕಾಲದ ಶರಣರ ಸಾಹಿತ್ಯವಿರಬೇಕು ಎಂದಿದ್ದಾನೆ"[೨]. ಇವರ ವಚನಗಳಲ್ಲಿ ಹೀಗೆ ಕೊಡೇಕಲ್ ಬಸವ 'ದೇಶ ಸುತ್ತಾಡಬೇಕು-ಕೋಶ ಓದಬೇಕು' ಎಂಬಂತೆ ಜೀವನದ ಸಮಗ್ರ ಚಿತ್ರವನ್ನು ಕಂಡು ತನ್ನ ವಚನಗಳಲ್ಲಿ ಕಂಡಂತೆ ಕಟುವಾಗಿ ಹೇಳಿದ. ಅವರ ಅರ್ಥಗರ್ಬಿತ ವಚನಗಳು ಇಂದು ಸಾಕ್ಷಿಯಾಗಿ ನಿಂತಿವೆ. ಅವರ ವಚನಗಲ್ಲಿ ಕಲ್ಯಾಣ ಶರಣರ ಪ್ರಸ್ತಾಪ, ವಿಜಯನಗರ ಹಾಳಾದ ಸಂಗತಿ. ತುರಕವಲ್ಲೀಖಾನನೆಂಬವನ ದಾಳಿಯಿಂದ ಕಾಳಹತ್ತಿ, ಹಂಪಿ, ಕಂಚಿ, ತಿರುಪತಿ ಬಂಕಾಪುರಗಳಲ್ಲಿ ಹಿಂದೂ ದೇವಾಲಯಗಳು ನಾಶವಾದ ಸೂಚನಗಳಿವೆ. ಕೊಡೇಕಲ್ ಬಸವಣ್ಣನ ಕಾಲಜ್ಞಾನ ವಚನಗಳ ಕೆಲವು ಉದಾಹರಣೆಗಳನ್ನು ಈ ಕೆಳಕಂಡಂತೆ ಕಾಣಬಹುದು.

'ಪಡುವಣ ಸಮುದ್ರ ಕಡಲುಕ್ಕಿ ಹರಿದೀತು'- ಪಾಶ್ಚಾತ್ಯರು ನಮ್ಮ ದೇಶವನ್ನು ಕಬಳಿಸುವ ವಿಚಾರವಿದೆ.

'ರಾಮರಾಯರು ಎಲ್ಲ ಬಾಯ ಬಾಯಿ ಬಿಡುತ್ತಾರೆ' ಸಂಸ್ಥಾನಗಳ ನಿರ್ನಾಮವಾದ ಅರ್ಥವಿದೆ.

'ಉತ್ತರ ದಿಕ್ಕಿನಿಂದ ಉರಿಯದ್ದು ಬಂದೀತು'- ಚೀನಾ ದುರಾಕ್ರಮಣದ ಹಿನ್ನೆಲೆಯಿದೆ.

'ಹುಲಿಯ ಗದ್ದುಗೆ ಮೇಲೆ ನರಿ ಬಂದು ಕುಳಿತಾವು' ಜಾಲೆ ಜಾತಿಗಳಲ್ಲಿ ಏಕವಾದ

ವಿಷಯವಿದೆ.

ಹೀಗೆ ಆಗಿನ ರಾಜಕೀಯ, ಸಾಮಾಜಿಕ ಜೀವನದ ಅನ್ಯಾಯ ಅನಾಚಾರಗಳ ಸೂಕ್ಷ್ಮ ವಿಡಂಬನೆ ಅವರ ವಚನಗಳಲ್ಲಿ ಕಾಣಬಹುದು. ಶರಣರಿಗೆ ಉಳಿಗಾಲವಿಲ್ಲವೆಂದು ಹೇಳುತ್ತಾ, 'ತೇರು ಎಳೆದಾ ಮೇಲೆ ದವನ ಮಾರುವುದುಂಟೆ ಕೇರು ಹಣ್ಣಿನಂತೆ ಶರಣರು ಉಳಿದಾರು' ಎಂದು ಕೊಡೇಕಲ್ ಬಸವಣ್ಣ ವರ್ಣಿಸುತ್ತಾನೆ. ಆದರೂ ಬಸವಯ್ಯ ಬರುತ್ತಾನೆ ಕರ್ಮಕ್ಕೆ ಕಡೆಗಾಲ, ಧರ್ಮಕ್ಕೆ ಉಳಿಗಾಲ ಶ್ರೇಷ್ಠ ಸದ್ಗುರು ಕೊಡೇಕಲ್ ಬಸವಸಾರಿ ಹೇಳಿದ ಕೇಳಿರಣ್ಣ ಎಂದು ಭವಿಷ್ಯ ನುಡಿಯುತ್ತಾನೆ. ಹೀಗೆ ಭಾರತದ ಕಾಲಜ್ಞಾನ ಸಾಹಿತ್ಯದಲ್ಲಿ ಸುರಪುರ ತಾಲ್ಲೂಕಿನ ಕೊಡೇಕಲ್ ಬಸವಣ್ಣನ ವಚನಗಳು ಬಹಳ ಪ್ರಸಿದ್ಧವಾಗಿದ್ದು ತಾಲ್ಲೂಕಿನ ಸಾಹಿತ್ಯದ ಶ್ರೀಮಂತಿಕೆಯ ಸಂಕೇತವೆಂದು ಹೇಳಿದರೆ ತಪ್ಪಾಗದು.

ತಿಂಥಣಿಯ ಮೌನೇಶ್ವರ: (೧೬ನೇ ಶತಮಾನ) ಮೌನೇಶ್ವರರು ಸುರಪುರದಿಂದ ಪಶ್ಚಿಮಕ್ಕೆ ಸುಮಾರು ೬ ಕಿ.ಮಿ. ದೂರದಲ್ಲಿರುವ ಗೋವಿನಹಾಳ. (ಗೋನಾಲ) ಈಗಿನ ಹೆಸರು ದೇವರಗೋನಾಲ. ವಿಶ್ವಕರ್ಮ ಮನೆತನದ ಹಾವಪ್ಪ ಹಾವಮ್ಮ ದಂಪತಿಗಳಿಗೆ 'ಕಾರಣಪುರುಷ'ನಾಗಿ ಹುಟ್ಟಿದನು. ಈತನು ಅವತಾರ ಪುರುಷನೆಂದು 'ಶಿರಹಟ್ಟಿ'ಯ ಫಕೀರೇಶ್ವರ ಪುರಾಣದಲ್ಲಿ ಮೌನೇಶ್ವರನನ್ನು ಖ್ವಾಜಾ ಅಮೀನುದ್ದೀನನ ಅವತಾರವೆಂದು ವರ್ಣಿಸಲಾಗಿದೆ. ವಿಜಾಪುರದ ಸುಲ್ತಾನ ಒಂದನೇ ಆದಿಲ್‌ಶಾಹಿ ಇವನ ಪವಾಡವನ್ನು ಪರೀಕ್ಷಿಸಿ ಇವನು ಸಾಮಾನ್ಯನಲ್ಲ ಸಾಕ್ಷಾತ ಪೈಗಂಬರ ಅವತಾರ (ಇವನು ಕುರಾನ್ ತತ್ವಗಳನ್ನು ಆಳವಾಗಿ ಅಭ್ಯಾಸಿಸಿದವನು) ಎಂದು ಇವನಿಗೆ 'ಮೌನ ಪಾಶ್ಯಾ' ಎಂಬ ಅಭಿಮಾನದಿಂದ ಕರೆದರು. ಅಂದಿನಿಂದ "ಓಂ ಏಕಲಾಕ್ ಐಂಸಿ ಹಜಾರ್, ಪಾಚೋ ಫೀರ್ ಪೈಗಂಬರ್ ಮೌನುದ್ದೀನ್ ಜಿತಾಫೀರ್ ಪೈಗಂಬರ್ ಮೌನುದ್ದೀನ್ ಕಾಶಿಪತಿ ಗಂಗಾಧರ ಹರಹರ ಮಹಾದೇವ" ಉಕ್ತಿಗಳು ಹೆಸರುವಾಸಿಯಾದವು.

"ಮೌನೇಶ್ವರರು ಅನೇಕ ಪವಾಡಗಳ ಮೂಲಕ ಧರ್ಮ, ದೇವರು ಸತ್ಯ ಸದಾಚಾರ ವಿಷಯಗಳನ್ನು ಬೋಧಿಸುತ್ತಾ ಸಂಚರಿಸಿದ್ದಾರೆ. ಈತನ ವಚನಗಳ ಅಂಕಿತ 'ಬಸವಣ್ಣ' ಇದು ಕೊಡೇಕಲ್ ಬಸವಣ್ಣನ ಕುರಿತದ್ದಾಗಿದೆ. ಎಂದು ಕಪಟರಾಗಳ ಕೃಷ್ಣರ ಊಹೆ. ಮೌನೇಶ್ವರರು ತಮ್ಮ ವಚನಗಳಲ್ಲಿ ಅಲ್ಲಮಪ್ರಭು, ಕೂಗಿನ ಮಾರಯ್ಯ, ಘಟ್ಟಿವಾಳಯ್ಯ, ಚೆನ್ನಬಸವಯ್ಯ, ಕಕ್ಕಯ್ಯ, ಚೊಕ್ಕಯ್ಯ ಮುಂತಾದವರನ್ನು ಸ್ತುತಿಸಿದ್ದಾನೆ"[೨೨].

ಮೌನೇಶ್ವರರು ದೂರ ದೃಷ್ಟಿಯುಳ್ಳವರು. ಸಾಮಾಜಿಕ ಮೌಢ್ಯಗಳನ್ನು ಹೊಂದಿದ ಜನತೆಗೆ ಅನೇಕ ತತ್ವಗಳನ್ನೊಳಗೊಂಡ ಸರ್ವಜ್ಞರಂತೆ ನಿರ್ಭೀತಿಯಿಂದ ತ್ರಿಪದಿಯಲ್ಲಿಯೂ ಚೌಪದಿಗಳಲ್ಲಿ ವಚನಗಳನ್ನು ಕಾಣಬಹುದು. ಇವರು ಮುಖ್ಯವಾಗಿ ಸಮಾಜದ ವಿಡಂಬನೆ, ಜ್ಯಾತ್ಯಾತೀತತೆ, ಶಾಸ್ತ್ರಗಳು, ಮಾಯ, ಸಮಾಜ ಸುಧಾರಣೆ, ಧಾನದ ಕುರಿತು ಆಧ್ಯಾತ್ಮದರ್ಶನಗಳನ್ನು ಕಾಣುವುದರ

ಜೊತೆಗೆ 'ದಲಿತ' ಚಿಂತನೆಗಳನ್ನು ಕಾಣಬಹುದಾಗಿದೆ.

ಜ್ಯಾತ್ಯಾಂಧತೆ

"ಸತ್ತ ಪಶುವಿನ ತೊಗಲ ಜತ್ತಿಗೆ ಮಿಣೆ ಮಾಡಿ
ಹೊತ್ತೊಯ್ಯಾಗ ನಿಮ್ಮ ಹೊಲಕೆ
ದಾರಿಯಲ್ಲಿ ಉತ್ತರೀ ಮಳೆ ಬಂದು
ಸುತ್ತಿ ಸುತ್ತಿ ಬಡಿದಾಗ
ನೆತ್ತಿಯ ಮೇಲಿನ ನೀರು ಬಾಯಲ್ಲಿಳಿದ ಮೇಲೆ
ಸುಟ್ಟ ಹೋಯಿತಯ್ಯ ನಿಮ್ಮ ಕುಲಾಚಾರ ಬಸವಣ್ಣ"

ಸಮಾಜ ಸುಧಾರಣೆ

"ಒಕ್ಕಲು ಮಗ ನೆಂಬುವಾತನು
ಲೋಕವನ್ನು ರಕ್ಷಿಪನು
ರಕ್ಷಿಸುವಾತನ ಬಿಕ್ಷುಕನಾದರೆ
ದಿಕ್ಕುದಿಕ್ಕಿಗೆ ಉಳಿಯುವ ದೇನಯ್ಯ
ಒಕ್ಕಲು ಮಗನಿಗೆ ತೊತ್ತಿನವನಾಗಿರಬೇಕು ಬಸವಣ್ಣ"

ಹೀಗೆ ಸುರಪುರದ ಶರಣರ-ಸಂತರ-ಸೂಫಿಗಳ ಪವಿತ್ರನಾಡಿನಲ್ಲಿ ಇಂದಿಗೂ ಸಾಹಿತ್ಯದ ಗಂಗೆ ತುಂಬಿ ಹರಿಯುತ್ತಿದ್ದಾಳೆ. ಇಂದಿಗೂ ಈ ತಾಲ್ಲೂಕಿನಲ್ಲಿ ಕವಿಗಳು, ಸಾಹಿತಿಗಳು, ವಿಮರ್ಶಕರು ಚಿಂತಕರನ್ನು ಕಾಣಬಹುದಾಗಿದೆ. ಎ. ಕೃಷ್ಣ ಸುರಪುರ, ಸೀತಾರಾಮ ಜಾಗೀರದಾರ್, ಗುರುಬಸವಯ್ಯ ಅಮ್ಮಾಪುರ, ಹೀಗೆ ಅನೇಕ ಯುವ ಬರಹಗಾರರು ಕೂಡ ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಪಾಟೀಲ ಎಂ.ಬಿ., 'ಗುಲ್ಬರ್ಗಾಜಿಲ್ಲಾ ಗ್ಯಾಸಟೇಯೆರ್ಸ್' ೧೯೯೭ ಪು. ೪
೨. ರೆವಣ್ಣಸಿದ್ಧಯ್ಯ ಆರ್., 'ಶೂರಾಪುರ ತಾಲೂಕಿನ ದರ್ಶನ' ೧೯೮೬ ಪು. ೪
೩. ಬಾಸ್ಕರ್‌ರಾವ ಮುಡಬೂಳ., 'ಮರೆತುಹೋದ ಸುರಪುರ ಇತಿಹಾಸ' ೨೦೦೧ ಪು. ೧೫
೪. ಕಪಟರಾಳ ಕೃಷ್ಣರಾಯ., 'ಸುರಪುರ ಸಂಸ್ಥಾನದ ಇತಿಹಾಸ' ೧೯೭೭ ಪು. ೭೪
೫. ಪಾಟೀಲ ಎಂ.ಬಿ., 'ಗುಲ್ಬರ್ಗಾ ಗ್ಯಾಸಟೇಯರ್ಸ್' ೧೯೯೭ ಪು. ೬
೬. ಪಾಟೀಲ ಎಂ.ಬಿ., 'ಗುಲ್ಬರ್ಗಾ ಜಿಲ್ಲಾ ಗ್ಯಾಸಟೇಯರ್ಸ್' ೧೯೯೭ ಪು. ೩೫
೭. ಪಾಟೀಲ ಎಂ.ಬಿ., 'ಗುಲ್ಬರ್ಗಾ ಜಿಲ್ಲಾ ಗ್ಯಾಸಟೇಯರ್ಸ್' ೧೯೯೭ ಪು. ೩೫
೮. ಕೃಷ್ಣ ಎ., 'ಸಗರನಾಡುದರ್ಶನ' ೧೯೮೫ ಪು. ೧೬
೯. ಪಾಟೀಲ ಎಂ.ಬಿ., ಗುಲ್ಬರ್ಗಾ ಜಿಲ್ಲಾ ಗ್ಯಾಸಟಿಯರ್ಸ್, ಪು. ೩೯

೧೦. ಪಾಟೀಲ ಎಂ.ಬಿ., 'ಗುಲ್ಬರ್ಗಾ ಜಿಲ್ಲಾ ಗ್ಯಾಸಟೇಯರ್ಸ್' ೧೯೯೭ ಪು. ೩೫

೧೧. ಪಾಟೀಲ ಎಂ.ಬಿ., 'ಗುಲ್ಬರ್ಗಾ ಗ್ಯಾಸಟೇಯರ್ಸ್' ೧೯೯೭ ಪು. ೫೮

೧೨. ಕೃಷ್ಣಮಾಚಾರಿ., 'ಮರೆಯಲಾಗದ ಸುರಪುರ ರಾಜರಚರಿತ್ರೆ' ೨೦೦೩ ಪು. ೬

೧೩ ಕಪಟರಾಳ ಕೃಷ್ಣರಾವ್., 'ಸುರಪುರ ಸಂಸ್ಥಾನದ ಇತಿಹಾಸ' ೧೯೭೭ ಪು. ೭೪

೧೪. ಕೃಷ್ಣರಾವ್ ಮತ್ತು ಕೇಶವಭಟ್ಟ., 'ಕರ್ನಾಟಕ ಇತಿಹಾಸದರ್ಶನ' ೧೯೭೦ ಪು. ೬೨೭.

೧೫. ಕೃಷ್ಣಮಾಚಾರಿ., 'ಮರೆಯಲಾಗದ ಸುರಪುರ ರಾಜರ ಚರಿತ್ರೆ' ೨೦೦೩ ಪು. ೨೨೦

೧೬. ಬಾಸ್ಕರರಾವ್., 'ಮರೆತುಹೋದ ಸುರಪುರ ಇತಿಹಾಸ' ೨೦೦೧ ಪು. ೫೧

೧೭. ಕನ್ನಡ ಸಾಹಿತ್ಯ ಪರಿಷತ್ 'ಸುರಪುರ ತವನಿಧಿ' ೧೯೯೬ ಪು. ೮೦

೧೮. ಕಪಟರಾಳ ಕೃಷ್ಣಾರಾಯರು., 'ಸುರಪುರ ಸಂಸ್ಥಾನದ ಇತಿಹಾಸ' ೧೯೭೭ ಪು. ೨೭೨

೧೯. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೪

೨೦. ಕನ್ನಡ ಸಾಹಿತ್ಯ ಪರಿಷತ್ 'ಸುರಪುರ ತವನಿಧಿ' ೧೯೯೬ ಪು. ೫೭

೨೧ ಕನ್ನಡ ಸಾಹಿತ್ಯ ಪರಿಷತ್ 'ಸುರಪುರ ತವನಿಧಿ' ೧೯೯೬ ಪು. ೭೮

೨೨. ಅಮರೇಶ ನುಗಡೋಣಿ., 'ಹೈದ್ರಾಬಾದ್ ಕರ್ನಾಟಕ ಹಾಡು ಪಾಡು' ೨೦೦೩ ಪು. ೨೮

೨೩. ಅಮರೇಶ ನುಗಡೋಣಿ., 'ಹೈದ್ರಾಬಾದ್ ಕರ್ನಾಟಕ ಹಾಡು ಪಾಡು' ೨೦೦೩ ಪು. ೩೧

ಅಧ್ಯಾಯ ೩

ಸಾಂಸ್ಕೃತಿಕ ಕೇಂದ್ರವಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ

೧. ಸಾಹಿತ್ಯ ಸಂಘ ಹುಟ್ಟಿನ ಪರಿಸರ

೨. ಬೆಳವಣಿಗೆಯ ವಿವಿಧ ಹಂತಗಳು

ಸಾಂಸ್ಕೃತಿಕ ಕೇಂದ್ರವಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ

ಕನ್ನಡ ಸಂಘ ಹುಟ್ಟಿನ ಸಂದರ್ಭ

'ರಾಜ ಪ್ರತ್ಯೇಕ್ಷ ದೇವತಾ' ಎನ್ನುವ ಮಾತು ೧೯೪೨-೪೩ಲ್ಲಿ ಸುರಪುರ ತಾಲೂಕಿನ ರಾಜಕೀಯ ಇತಿಹಾಸವನ್ನು ಅವಲೋಕಿಸಿದಾಗ ಸುಳ್ಳಾಗುತ್ತದೆ. ರಾಜನಾದವನು ಸರ್ವಧರ್ಮ, ಸರ್ವ ಭಾಷಿಕರನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಇದಕ್ಕೆ ವ್ಯತಿರಿಕ್ತವಾಗಿ ಹೈದ್ರಾಬಾದ್ ಸಂಸ್ಥಾನದ ನಿಜಾಂನ ಆಳ್ವಿಕೆ ಸಂದರ್ಭದಲ್ಲಿ ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯು ಸಂಪೂರ್ಣವಾಗಿ ನಿರ್ಲಕ್ಷ್ಯ ಕಣ್ಮಳಗಾಗಿತ್ತು. ಕನ್ನಡ ಜನರ ಕನ್ನಡ ಭಾಷೆಯ ಬೆಳವಣಿಗೆ ಅದೊಂದು ಅಗ್ನಿ ಪರೀಕ್ಷೆಯ ಕಾಲವಾಗಿತ್ತು. ಕೇವಲ ಉರ್ದು ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿ 'ದೇಶಿ' ಭಾಷೆಗಳಿಂದ ಕನ್ನಡ ಮರಾಠಿ ಮತ್ತು ತೆಲುಗು ಭಾಷೆಗಳ ಬೆಳವಣಿಗೆಗೆ ಕಡಿವಾಣ ಹಾಕಿದ್ದರು. ಶಿಕ್ಷಣ ಮಾಧ್ಯಮವೂ ಕೂಡ 'ಉರ್ದು'ವೆಂದು ರಾಜಾಜ್ಞೆಯನ್ನು ಮಾಡಲಾಗಿತ್ತು. ನಿಜಾಂರ ಭಾಷಾ ದಬ್ಬಾಳಿಕೆಯ ಧೋರಣೆಯಿಂದ ಕನ್ನಡ ಭಾಷೆಯ ಬೆಳವಣಿಗೆ ಕುಂಠತವಾಗಿತ್ತು. ಆಳುವ ವರ್ಗದ ಭಾಷೆಯಾದ ಉರ್ದುವನ್ನು ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಪದವಿಯವರೆಗೂ ಕಲಿಯಬೇಕಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಭುತ್ವವನ್ನು ಎದುರುಹಾಕಿಕೊಂಡು ಕನ್ನಡ ಭಾಷೆ, ಸಂಸ್ಕೃತಿಯನ್ನು ಕಟ್ಟಿ ಬೆಳೆಸಲು ಸಂಘ-ಸಂಸ್ಥೆಗಳ ಅವಶ್ಯಕತೆಯಿತ್ತು. ಪ್ರಭುತ್ವದ ವಿರುದ್ಧ ಬಂಡಾಯ ಏಳುವುದು ಮುಳ್ಳಿನ ಹಾಸಿಗೆಯ ಮೇಲೆ ನಡೆದ ಕಠಿಣ ಸಾಹಸವೇ ಸರಿ. ಇಂಥ ಪಣತೊಟ್ಟು ಸ್ಥಾಪನೆಯಾದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಯಾದಾಗಿನ ಸಂದರ್ಭವನ್ನು ಈ ಕೆಳಗಿನ ಅಂಶಗಳನ್ನು ಅವಲೋಕಿಸುವದರ ಮೂಲಕ ತಿಳಿಯಬಹುದಾಗಿದೆ.

ಗಡಿಭಾಗಗಳಲ್ಲಿ ಅನ್ಯಭಾಷೆಗಳ ಪ್ರಾಬಲ್ಯ

ಹೈದ್ರಾಬಾದ್ ನಿಜಾಂನ ಆಳ್ವಿಕೆಗೆ ತೆಲಂಗಾಣದ 'ಎಂಟು' ಮರಾಠವಾಡದ 'ಐದು' ಹಾಗೂ ಕರ್ನಾಟಕದ 'ಮೂರು' ಜಿಲ್ಲೆಗಳು ಸೇರಿ ಒಟ್ಟು 'ಹದಿನಾರು' ಜಿಲ್ಲೆಗಳು ಸೇರಿದ್ದವು. ತೆಲಂಗಾಣ

ದಲ್ಲಿ ೮೦ ಲಕ್ಷ, ಮರಾಠವಾಡದಲ್ಲಿ ೪೦ ಲಕ್ಷ ಹಾಗೂ ಕರ್ನಾಟಕದಲ್ಲಿ ೨೦ಲಕ್ಷ. ಹೀಗೆ ಒಂದುವರೆ ಕೋಟಿ ಜನಸಂಖ್ಯೆ ಸಂಸ್ಥಾನದಲ್ಲಿತ್ತು. ೧೯೩೧ರ ಜನಗಣತಿಯ ಪ್ರಕಾರ ಮರಾಠಿ ೩೭,೮೬,೩೩೬ ತೆಲುಗು ೧೬,೭೨,೦೯೪ ಹಾಗೂ ಉರ್ದು ೧೫,೦೨,೨೮೨ ಜನ ಮಾತನಾಡು ತ್ತಿದ್ದರು. ಇನ್ನುಳಿದ ಸುತ್ತಮುತ್ತಲಿನ ಸಂಸ್ಥಾನಗಳಲ್ಲಿ ಬಹುಸಂಖ್ಯಾತ ಕನ್ನಡಿಗರೂ ಇದ್ದರೂ ಈ ಸಂಸ್ಥಾನಗಳ ಅಧಿಪತಿಗಳು ಮರಾಠರಾಗಿದ್ದರು. ಇಲ್ಲಿ ಕರ್ನಾಟಕದ ಆಂಧ್ರಗಡಿಭಾಗಗಳಲ್ಲಿ ಉಸ್ಮಾನಬಾದ್, ನಾಂದೇವಾಡ್, ಮೆಹಬೂಬನಗರಗಳಲ್ಲಿ ಹೆಚ್ಚಿನ ಜನರು ಕನ್ನಡ ಮಾತೃಭಾಷೆ ಯವರು ಎಲ್ಲಾರಂಗಗಳಲ್ಲೂ ತುಂಬಿತ್ತು.

ಕಪಟರಾಳ ಕೃಷ್ಣರಾವ್ ಹೇಳುವಂತೆ "ಕನ್ನಡ ಭಾಷೆಯ ಅವಸ್ಥೆ ಕನ್ನಡಿಗರ ರಾಜ್ಯವು ಹೋದೊಡನೆ ರಾಜಕೀಯ ಸಂಸ್ಥೆಗೆ ಸಂಬಂಧಪಟ್ಟ ಪಾರಿಭಾಷಿಕ ಶಬ್ದಗಳನ್ನು ಜನರು ಮರೆತು ಬಿಟ್ಟರು" ಪೇಶ್ವೆ ರಾಜ್ಯದ ಉದಯದಿಂದ ಮರಾಠಿಯೇ ಸಾರ್ವತ್ರಿಕವಾಗಿ ಬರಹದ ಭಾಷೆಯಾಗಿತ್ತು. ಕನ್ನಡವು ಬರೀ ಮಾತನಾಡುವ ಭಾಷೆಯಾಗಿ ಸಂತೆ, ಪೇಟೆ, ಹಳ್ಳಿಮನೆ- ಮಾರುಗಳಲ್ಲಿ ಮಾತ್ರ ಉಳಿಯುತು. ಬಾಲಕರ ಅಕ್ಷರಭ್ಯಾಸವೂ 'ಮೋಡಿ' ಭಾಷೆಯಲ್ಲಿ ಮೊದಲಾಯಿತು. ಇದರಿಂದ ಜನರಿಗೆ ಕನ್ನಡ ಇಲ್ಲದಂತಾಯಿತು. ಈ ಭಾಗದಲ್ಲಿ ಇಂದಿಗೂ ಕೂಡ 'ಮೋಡಿ' ಭಾಷೆ ವ್ಯಾಪಾರಿ ಗಳಲ್ಲಿ ಬಳಕೆಯಾಗುತ್ತಿದೆ. ಬಡತನದ ಕಾರಣದಿಂದ ಕೆಳವರ್ಗದವರು ಕಲಿಯಲು ಆಸಕ್ತಿ ತೋರಿಸು ತ್ತಿರಲಿಲ್ಲ. ತೋರಿಸಿದರೂ ಅವಕಾಶಗಳೆ ಇರುತ್ತಿರಲಿಲ್ಲ. ಅಸ್ಪೃಶ್ಯರು ಅಕ್ಷರ ಕಲಿಯಲು ಮಠಮಾನ್ಯ ಗಳಲ್ಲಿ ಅವಕಾಶಗಳೆ ಇರಲಿಲ್ಲ. ಕನ್ನಡ ಮಾತನಾಡುವ ಗಡಿ ಪ್ರದೇಶಗಳಲ್ಲಿ ಕನ್ನಡಿಗರು ಹೆಚ್ಚಿನ ತೊಂದರೆಗಳಿಗೆ ಒಳಗಾಗಿದ್ದರು. ಬೇರೆಲ್ಲರಂತೆ ಅವರು ಶೋಷಣೆಗೆ ಒಳಗಾಗುವುದರ ಜೊತೆಗೆ ಅವರು ತೀವ್ರತರ ಸಾಂಸ್ಕೃತಿಕ ದಾಳಿಗೆ ತುತ್ತಾದರು. ಧಾರ್ಮಿಕ ಮತ್ತು ಸಾಮಾಜಿಕ ಸಮಾವೇಶಗಳನ್ನು ಅವರು ಮುಕ್ತವಾಗಿ ಸಂಘಟಿಸುವಂತಿರಲಿಲ್ಲ. ಹೀಗಾಗಿ ಇಂತಹ ಅನೇಕ ಸನ್ನಿವೇಶಗಳು ಸಂದರ್ಭಗಳು ಈ ಭಾಗದಲ್ಲಿ ಕನ್ನಡ ಸಾಹಿತ್ಯ ಸಂಘಗಳ ಸ್ಥಾಪನೆಗೆ ಕಾರಣವಾದವು.

ಸುರಪುರದಲ್ಲಿ 'ನಿಜಾಂ ಕರ್ನಾಟಕ ಪರಿಷತ್ತಿನ' ಮೂರನೆಯ ಅಧಿವೇಶನ

ನಿಜಾಂ ಕರ್ನಾಟಕ ಪರಿಷತ್‌ನ ಮೂರನೇ ಅಧಿವೇಶನವು ಸುರಪುರದಲ್ಲಿಯೇ ಮರೆಯಲಾರದ ಘಟನೆಯಾಗಿದೆ. ೧೯೪೨ರ ಮಾರ್ಚ್‌ನಲ್ಲಿ ನಡೆಸಲಾದ ಅಧಿವೇಶನ ಈ ಭಾಗದ ಚಾರಿತ್ರಿಕ ಸಂಘಟನೆಗೆ ಮಾದರಿಯಾಯಿತು. ಇದರ ಘನ ಅಧ್ಯಕ್ಷತೆಯನ್ನು 'ಅಣ್ಣರಾವ್ ಗಣಮುಖಿ'ಯವರು ವಹಿಸಿಕೊಂಡಿದ್ದರು. ಈ ಅಧಿವೇಶನಕ್ಕೆ ಸುರಪುರದ ನಾಯಕರು ಮೊದಲು ಸಮ್ಮೇಳನಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು. ನಂತರ ಅರಮನೆ ಮುಂಭಾಗದ ಮೈದಾನದಲ್ಲಿ ಸಭಾಂಗಣ ನಿರ್ಮಿಸುವುದಕ್ಕೆ ಒಪ್ಪಲಿಲ್ಲ. ಏಕೆಂದರೆ ಆ ಸಮಯದಲ್ಲಿ ನಾಯಕರ ಮೇಲೆ ನಿಜಾಂ ಸರ್ಕಾರದ ರಾಜಕೀಯ ಒತ್ತಡ ಬಲವಾಗಿತ್ತು. ನಂತರ 'ನಾನಪ್ಪ ದೇಸಾಯಿಯವರ ನೇತೃತ್ವದಲ್ಲಿ ಸುರಪುರದ' 'ಆನಂದ ವಿದ್ಯಾಲಯ'ದ ಆವರಣದಲ್ಲಿ ಅಧಿವೇಶನವನ್ನು ಏರ್ಪಡಿಸಲಾಯಿತು.

ಈ ಅಧಿವೇಶನವು ಜಿಲ್ಲೆಯ ಯುವ ಹೋರಾಟಗಾರರ ಗಮನ ಸೆಳೆದು ಮೊದಲಬಾರಿಗೆ ಈ ಪ್ರಾಂತ್ಯದ ಹೋರಾಟಗಾರರು ಒಂದೇ ವೇದಿಕೆಯಲ್ಲಿ ಸೇರಲು ಅನುಕೂಲವಾಯಿತು. ಈ ಅಧಿವೇಶನವನ್ನು ವಿಫಲಗೊಳಿಸಲು "ರಜಾಕಾರರ ಗುಂಪಿನ 'ರಾಜಸಾಬ' ಎಂಬುವವನ ನಾಯಕತ್ವದಲ್ಲಿ ಮುಸ್ಲಿಂ ಗುಂಡಾಗಳು ಒಡ್ಡಿದ ಕೋಮು ಆತಂಕಗಳು ಸಫಲವಾಗಲಿಲ್ಲ. ಭಾರತದಾದ್ಯಂತ ಹರಡುತ್ತಿದ್ದ 'ಭಾರತ ಬಿಟ್ಟು ತೊಲಗಿ ಚಳವಳಿ'ಯ ಹಿನವಲೆಯಲ್ಲಿ ರಾಷ್ಟ್ರೀಯತೆ ಭಾವನೆ ಜಾಗೃತವಾಗುತ್ತಿದ್ದ ಕಾಲದಲ್ಲಿ ನಡೆದ ಈ ಅಧಿವೇಶನವು ನಿಜಕ್ಕೂ ಪ್ರಾತಿನಿಧಿಕವಾಗಿತ್ತು. ಇಂತಹ ಉತ್ಸಾಹದ ವಾತಾವರಣದಲ್ಲಿ ಪರೀಷತ್ ಕನ್ನಡ ಶಾಲೆಗಳನ್ನು ತೆರೆಯಬೇಕು. ಜವಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಹಾಯಕವಾಗುವ ಸಂವಿಧಾನಾತ್ಮಕ ಸುಧಾರಣೆಯನ್ನು ಜಾರಿಗೊಳಿಸಲು ನಿಜಾಂನನ್ನು ಈ ಸಮಾರಂಭದಲ್ಲಿ ಒತ್ತಾಯಿಸಲಾಯಿತು". ಹಿಂದೂ ಸಂಸ್ಕೃತಿ ಮತ್ತು ಪರಂಪರೆಗಳ ರಕ್ಷಣೆ, ಕನ್ನಡ ನಾಡು, ನುಡಿ ಸಂಸ್ಕೃತಿಯ ರಕ್ಷಣೆಗಾಗಿ ರಾಜಾಕಾರರ ದಬ್ಬಾಳಿಕೆಯನ್ನು ಹತ್ತಿಕ್ಕುವಂತೆ ಪರಿಷತ್‌ನ ಅಧ್ಯಕ್ಷರು ಹಿಂದುಗಳಿಗೆ ಕರೆ ನೀಡಿದರು. ಸುರುಪುರದಲ್ಲಿನ ಅಧಿವೇಶನದ ಕಾರ್ಯಕಲಾಪಗಳಲ್ಲಿ ೧೧೦೦ ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು"[೧].

'ವಂದೇ ಮಾತರಂ ಚಳವಳಿ'

೧೯೩೮ರ ನಂತರ 'ವಂದೇ ಮಾತರಂ' ಗೀತೆಯು ಬ್ರೀಟಿಷರ ವಿರುದ್ಧ ಮತ್ತು ನಿಜಾಂ ಸರ್ಕಾರದ ವಿರುದ್ಧ ನಡೆದ ಹೋರಾಟವನ್ನು ರಾಷ್ಟ್ರವ್ಯಾಪಿಯನ್ನಾಗಿಸಿತು. ಹೈದ್ರಾಬಾದ್ ನಿಜಾಂ ಸರ್ಕಾರದ ದುರಾಡಳಿತ ವಿರುದ್ಧ ಜನರು ಬಳಸಿರುವ ಪ್ರಬಲ ಅಸ್ತ್ರಗಳಲ್ಲಿ 'ವಂದೇ ಮಾತರಂ' ಗೀತೆಯ ಒಂದಾಗಿದೆ. "ನಿಜಾಂನ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆಯಾಗಿ 'ನಿಜಾಂ ಅವರು ಚಿರಕಾಲ ಬಾಳಲಿ. ಆತನ ಸಾಮ್ರಾಜ್ಯ ಸೂರ್ಯ, ಚಂದ್ರರಿರುವವರೆಗೂ ಮುಂದುವರೆಯಲಿ' ಎಂಬ ಭಾವೈಕ್ಯತೆಯ ಹಾಡನ್ನೂ ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಹಾಡಬೇಕಾಗಿತ್ತು"[೨]. ಶಾಲಾ-ಕಾಲೇಜುಗಳಲ್ಲಿ, ನೌಕರಿಗಳಲ್ಲಿ ಹಿಂದೂ ಮುಸ್ಲಿಂರ ನಡುವೆ ಭೇದಭಾವವಿತ್ತು. ಶಾಲೆಯಲ್ಲಿ ಹಿಂದೂ-ಮುಸ್ಲಿಂ ವಿದ್ಯಾರ್ಥಿಗಳು ಕೂಡಿಯೆ ಕಲಿಯಬೇಕಾಗಿತ್ತು. ಪ್ರತಿಯೊಂದು ಸಣ್ಣ ಸಣ್ಣ ವಿಷಯಕ್ಕೂ ಹಿಂದೂ ವಿದ್ಯಾರ್ಥಿಗಳಿಗೆ ಮುಸ್ಲಿಂ ವಿದ್ಯಾರ್ಥಿಗಳು ಅವಮಾನ ಮಾಡುತ್ತಿದ್ದರು. ಪ್ರತಿ ಶುಕ್ರವಾರಕೊಮ್ಮೆ ಶಾಲೆಗೆ ರಜೆಯನ್ನು ಕೊಡುತ್ತಿದ್ದರು. (ಸಂದರ್ಶನ: ಬುದ್ಧಿವಂತ ಶೆಟ್ಟಿ. ೨೨.೦೪.೦೮). ಇದು ಕೂಡ ವಿದ್ಯಾಥಿಗಳ ಅಸಂತೋಷಕ್ಕೆ ಕಾರಣವಾಯಿತು. "ಮೀರ್ ಉಸ್ಮಾನ್ ಅಲಿಖಾನ್ ಅವರು ಸಿಂಹಾಸನಕ್ಕೆ ಬಂದ ೨೫ನೇ ವರ್ಷಗಳ ಪ್ರಯುಕ್ತ 'ರಜತ ಮಹೋತ್ಸವ'ವನ್ನು ಆಚರಿಸಿದಾಗ 'ವಂದೇ ಮಾತರಂ' ಚಳವಳಿ ಇಡೀ ನಿಜಾಂನ ಸರ್ಕಾರವನ್ನು ದಂಗು ಬಡಿಸಿತು. ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರಜ್ಞೆ ನಾಡಿನ, ಸಂಸ್ಕೃತಿ ಪ್ರಜ್ಞೆ ಜಾಗೃತವಾಗಿ ಅವರು ನಿಜಾಂನ ನಿರಂಕುಶ ಆಡಳಿತ ವಿರುದ್ಧ ಹೋರಾಡುವ ಮನೋಭಾವ ಬೆಳೆಯತೊಡಗಿತು"[೩].

ಸುರಪುರದಲ್ಲಿ 'ವಂದೇ ಮಾತರಂ' ಚಳವಳಿಯ ಪ್ರಭಾವವನ್ನು ಲಭ್ಯವಿರುವ ಮಾಹಿತಿಗಳ ಮೂಲಕ ಕಲೆಹಾಕಲಾಗಿದೆ. ಸ್ವಾತಂತ್ರ್ಯ ಹೋರಾಟ ಸಂಕೇತವಾದ 'ವಂದೆ ಮಾತರಂ' ಚಳವಳಿಯು ಕೆಲವೇ ದಿನಗಳಲ್ಲಿ ಇಡೀ ಹೈದ್ರಾಬಾದ್ ಸಂಸ್ಥಾನದಾದ್ಯಂತ ಪಸರಿಸಿತು ಪ್ರತಿಯೊಬ್ಬರ ಬಾಯಲ್ಲೂ 'ವಂದೇ ಮಾತರಂ' ಗೀತೆ ಜಪವಾಗಿ ಪರಿಣಮಿಸಿತು. ಈ ಚಳವಳಿಯ ಕಾಡ್ಗಿಚ್ಚು ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿಗೂ ಹರಡಲು ಬಹಳ ದಿನ ಬೇಕಾಗಿಲಿಲ್ಲ. ಗುಲ್ಬರ್ಗಾದ ಕಾಂಗ್ರೆಸ ಮುಖಂಡರು ಸುರಪುರಕ್ಕೆ ಬಂದು ಹೋಗುತ್ತಿದ್ದರು. ಅನೇಕ ಸಭೆ ಸಮಾರಂಭಗಳನ್ನು ನಡೆಸುವ ಮೊದಲು 'ವಂದೇ ಮಾತರಂ' ಗೀತೆಯನ್ನು ಹೇಳುತ್ತಿದ್ದರು.

೪. ಸುರಪುರದಲ್ಲಿ ರಜಾಕಾರರ ಹಾವಳಿ

"ಮುಸ್ಲಿಂ ಜನಸಂಖ್ಯೆಯನ್ನು ಹೆಚ್ಚಿಸಲು 'ಮತಾಂತರ'ವನ್ನು ಹೈದ್ರಾಬಾದ್ ನಿಜಾಂ ಜಾರಿ ಗೊಳಿಸಿದನು. ಈ ಸಂದರ್ಭದಲ್ಲಿ ಹಿಂದೂಗಳ ಹೋರಾಟವನ್ನು ಬಗ್ಗು ಬಡಿಯಲು 'ರಜಾಕಾರರು' ಎಂಬ ಖಾಸಗಿ ಸೈನ್ಯವನ್ನು ಇಟ್ಟುಕೊಂಡಿದ್ದನು. 'ರಜಾಕಾರ' ಎಂದರೆ ಸ್ವಯಂ ಸೇವಕರು ಎಂದರ್ಥ. ಸುರಪುರ 'ರಜಾಕಾರರ' ಚಟುವಟಿಕೆಗಳ ಕೇಂದ್ರವಾಗಿತ್ತು. ರಜಾಕರರ ಪಡೆಯ ನಾಯಕತ್ವವನ್ನು "ಕಾಶಿಂರಜ್ವಿ" ಅವರಿಗೆ ನೀಡಲಾಗಿತ್ತು. ೧೯೧೧ರಿಂದ ೧೯೪೮ರ ವರೆಗೆ ಆಳ್ವಿಕೆ ನಡೆಸಿದ ಏಳನೆಯ ನಿಜಾಂ "ಮೀರ್ ಉಸ್ಮಾನ್ ಅಲೀಖಾನ್" ರಜಾಕಾರರ ಖಾಸಗಿ ಸೈನ್ಯವನ್ನು ಇಟ್ಟುಕೊಂಡು ಕೆಳವರ್ಗದ ಜನರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರಗೊಳಿಸುತ್ತಿದ್ದನು. ಹೈದ್ರಾಬಾದ್ ನಿಜಾಂನ ಸೈನ್ಯ ೪೨,೦೦೦ ಇದ್ದರೆ ರಜಾಕಾರರು ೨ ಲಕ್ಷ ಇದ್ದರೆಂದು ದಾಖಲೆಗಳು ಹೇಳುತ್ತವೆ. ಗ್ರಾಮಗಳ ಮೇಲೆ ದಾಳಿ, ಹಿಂದೂಗಳ ಮೇಲೆ ದೌರ್ಜನ್ಯ, ಮಹಿಳೆಯರ ಮೇಲೆ ಅತ್ಯಾಚಾರ, ಬಲತ್ಕಾರ, ಧರ್ಮಾಂತರ, ಲೂಟಿ, ಕೊಲೆ, ಸುಲಿಗೆ ಮತ್ತು ಹೋರಾಟಗಾರರ ಮೇಲೆ ಆಕ್ರಮಣ, ಇಂತಹ ಭಯಾನಕ ಚಟುವಟಿಕೆಗಳ ಮೂಲಕ ಭಯಭೀತಿಯನ್ನು ಉಂಟುಮಾಡುವ ಕಾರ್ಯಗಳು ರಜಾಕಾರರಿಂದ ನಿರಂತರವಾಗಿ ನಡೆಯುತ್ತಿದ್ದವು"[೪].

"ಬಕ್ರಿದ್, ರಂಜಾನ್ ಹಬ್ಬಗಳಲ್ಲಿ ಮುಸಲ್ಮಾನರ ಜೊತೆಗೆ ಹಿಂದುಗಳು ನಮಾಜ ಮಾಡಲು ಹೋಗಿ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಬೇಕಾಗುತ್ತಿತ್ತು. ಮಹಮ್ಮದ್ ಅಲೀಗುತ್ತೇದಾರ ಎಂಬ ದಡೂತಿ ಆಸಾಮಿ ಸುರಪುರದಲ್ಲಿ ರಜಾಕಾರರ ಮುಖಂಡನಾಗಿದ್ದನು. ಆತ ಹಿಂದೂಗಳನ್ನು ಎದುರಿಸಲು ಜೋಡು ಕೊಳುವೆಗಳ ಬಂದೂಕನ್ನಿಟ್ಟುಕೊಂಡು ತನ್ನ ಶಕ್ತಿ ಪ್ರದರ್ಶನ ಮಾಡುತ್ತಿದ್ದನು. ಒಮ್ಮೊಮ್ಮೆ ಮಹಮ್ಮದ ಅಲೀ ಹಳ್ಳಿಗಳಿಗೆ ಹೋಗಿ ಶ್ರೀಮಂತ ಹಿಂದೂಗಳ ಮನೆಗಳನ್ನು ಲೂಟಿಮಾಡುತ್ತಿದ್ದನು"[೫]. ಹೀಗೆ ರಜಾಕಾರರ ಎಲ್ಲಾ ಚಟುವಟಿಕೆಗಳಿಂದ ರೋಸಿಹೋದ ಜನರು ಕನ್ನಡನಾಡು, ಸಂಸ್ಕೃತಿಯನ್ನು ಸಂರಂಕ್ಷಿಸುವ ಸಲುವಾಗಿ ಗಡಿಭಾಗಗಳಲ್ಲಿ ರಜಾಕಾರರ ವಿರುದ್ಧ ಹೋರಾಟಗಳನ್ನು, ಆರಂಭಿಸಿದರು. ಜೊತೆಗೆ ಸಾಹಿತ್ಯ ಸಂಘಗಳು ಆರಂಭವಾದವು. ಸಮಾಜದಲ್ಲಿ

ನಡೆಯುತ್ತಿರುವ ಅನ್ಯಾಯ ಆಕ್ರಮ ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಶೋಷಣೆಯ ವಿರುದ್ಧ ಪ್ರತಿಭಟಿಸಲು ಪತ್ರಿಕೆಗಳು, ಸಂಘ-ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸಿದವು.

೫. ೧೯೪೭-೪೮ಕ್ಕಿಂತ ಮುಂಚೆಯ ಕನ್ನಡ ಸಂಘ ಸಂಸ್ಥೆಗಳು

ಯಾವುದೇ ಒಂದು ನಾಡಿನ ಅಭಿವೃದ್ಧಿಯಲ್ಲಿ ಸಂಘ-ಸಂಸ್ಥೆಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಜನರಲ್ಲಿ ಸಾತಹಿತ್ಯ, ಸಂಸ್ಕೃತಿ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸುತ್ತವೆ. ಇಂತಹ ಕೆಲವು ಉದ್ದೇಶಗಳಿಂದ ಈ ಭಾಗದಲ್ಲಿ ಕೆಲವು ಕನ್ನಡ ಸಂಘ-ಸಂಸ್ಥೆಗಳು ಸ್ಥಾಪನೆಯಾದವು.

ನಿಜಾಂನ ಆಳ್ವಿಕೆಗೆ ಒಳಗಾಗಿದ್ದ ಈ ಪ್ರಾಂತ್ಯಗಳಲ್ಲಿ ಮರಾಠಿ ಮತ್ತು ತೆಲಗು ಮಾತನಾಡುವ ಜನರು ಬಹುಸಂಖ್ಯಾತರಾಗಿದ್ದರು. ಕನ್ನಡ ಮಾತನಾಡುವವರು ಅಲ್ಪಸಂಖ್ಯಾತರಾಗಿದ್ದರು. ನಿಜಾಂ ಆಳ್ವಿಕೆಯಲ್ಲಿ ಹಿಂದಿನಿಂದ ಬಂದಿದ್ದ ಉರ್ದು ಭಾಷೆಯನ್ನು ಆಡಳಿತದ ಭಾಷೆಯಾನ್ನಾಗಿ ಮಾಡಿದ್ದ ರಿಂದ ಕನ್ನಡ ಭಾಷೆ ಅಳಿವಿನ ಅಂಚಿನಲ್ಲಿತ್ತು. ೧೯೩೮ರ ಸಮಯದಲ್ಲಿ ನಿಜಾಂನ ಸರ್ಕಾರ ರಾಜ್ಯ ಕಾಂಗ್ರೆಸ್ಸಿನ ಮೇಲೆ ನಿಷೇಧ ಹಾಕಿತ್ತು. ರಮಾನಂದ ತೀರ್ಥ, ಜನಾರ್ಧನರಾವ್ ದೇಶಪಾಂಡೆ, ರಾಮಾಚಾರಿ ಜೋಷಿ ಮತ್ತು ಜಿ.ಕೆ. ಪ್ರಾಣೇಶಚಾರ್ಯರು ರಾಜ್ಯ ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ನಿಜಾಂ ಕರ್ನಾಟಕ ಪರಿಷತ್ತಿನ ಮೂಲಕ ಆರಂಭಿಸಿದರು.

ಅನೇಕ ಅಡೆ-ತಡೆಗಳ ಮಧ್ಯದಲ್ಲಿಯೂ ಕನ್ನಡ ಸಾಹಿತ್ಯ ಸಂಘಗಳು ಕನ್ನಡದ ಕಾರ್ಯ ಚಟುವಟಿಕೆಗಳನ್ನು ನಡೆಸಿವೆ. ಗುಲ್ಬರ್ಗಾದಲ್ಲಿ ೧೯೪೧ರಲ್ಲಿ ತವಗ ಭೀಮಸೇನರಾಯರು, ಅಶ್ವನಾಥ ರಾವ್ ವಕೀಲ, ಮಾಜೇಂದ್ರರಾವ್ ಮತ್ತು ದತ್ತಾತ್ರೇಯ ಅವರಾದಿ ಮುಂತಾದವರು ಸೇರಿಕೊಂಡು "ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಿದರು. ಈ ಸಂಘಗಳು ನಾಡಹಬ್ಬ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ, ಸರ್ಧೆಗಳನ್ನು ಉಪನ್ಯಾಸಗಳನ್ನು ಹಮ್ಮಿಕೊಳ್ಳುತ್ತಿದ್ದರು. ಕನ್ನಡ ನಾಡಿನ ಅನೇಕ ಸಾಹಿತಿಗಳು ಈ ಸಂಘಗಳಿಗೆ ಬೇಟಿ ನೀಡಿ ತಮ್ಮ ಉಪನ್ಯಾಸ ಕಾರ್ಯಕ್ರಮಗಳನ್ನು ನೀಡಿದರು"[೬].

೧೯೪೧ರಲ್ಲಿ ಸ್ಥಾಪನೆಯಾದ 'ಗುಲ್ಬರ್ಗಾ ಕನ್ನಡ ಸಾಹಿತ್ಯ ಸಂಘ' ಮತ್ತು ಶಹಾಬಾದ ಕನ್ನಡ ಸಾಹಿತ್ಯ ಸಂಘಗಳಿಂದ ಪ್ರೇರಣೆ ಪಡೆದು ಸುರಪುರದ ದೀಕ್ಷಾಚಾರ್ಯ ವಕೀಲರ ನೆತೃತ್ವದಲ್ಲಿ ೧೯೪೨ರಲ್ಲಿ ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಿದರು. ಈ ಸಂಘದ ಪ್ರಥಮ ನಾಡಹಬ್ಬದ ಆಚರಣೆ ಕಾರ್ಯಕ್ರಮದ ರೂಪರೇಷಯನ್ನು ನಿಲೋಗಲ್ಲು ಕೃಷ್ಣರಾಯರು ಪ್ರಾರಂಭಿಸಿದರು. ಊರಿನ ಹಿರಿಯರು ಸ್ಥಳೀಯ ವಕೀಲರು ಸಹಾಯಕ್ಕೆ ನಿಂತರು. ಈ ಸಂಘಕ್ಕೆ ಸಹಕಾರಿ ಸಂಘದ ಅಧಿಕಾರಿಗಳಾದ ಗೋಪಾಲಚಾರ್ಯರು, ವಟಗಲ್ ರಾಘವೇಂದ್ರರಾಯರು, ಜಯತೀರ್ಥ ಚಾರ್ಯ ಮಣ್ಣೂರು ಮತ್ತು ಹೆಬ್ಬಾಳ ಶೇಷಶಾಸ್ತ್ರಿಗಳು ಆರ್ಥಿಕವಾಗಿ ಬೆಂಬಲ ನೀಡಿದರು. ಸ್ಥಳೀಯರಿಂದ

ಹಣವನ್ನು ಸಂಗ್ರಹಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಕನ್ನಡ ಸಾಹಿತ್ಯ ಸಂಘವು ನಾಡಹಬ್ಬದ ಜೊತೆಗೆ ೧೯೪೨ರಲ್ಲಿ ನಿಜಾಂ ಕರ್ನಾಟಕ ಪರಿಷತ್‌ನ ಮೂರನೇ ಅಧಿವೇಶವನ್ನು ನಡೆಸಿದರು. ಹೀಗೆ ಪ್ರಸಿದ್ಧ ಸಾಹಿತಿಗಳನ್ನು ಕರೆಯಿಸಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಶಿಸ್ತನ್ನು ಕಾಪಾಡಲು 'ಸ್ವಯಂ ಸೇವಕ ದಳವಿತ್ತು' ಹರಿಕೀರ್ತನೆಯ ಮೂಲಕ ರಾಷ್ಟ್ರೀಯ ಭಾವನೆಗಳನ್ನು ಕೆರಳುಸುತ್ತಿದ್ದರು.

೬. ೧೯೪೭-೪೮ರ ಸಂದರ್ಭದಲ್ಲಿ ಪತ್ರಿಕೆಗಳ ಪಾತ್ರ

ಪತ್ರಿಕೆಗಳು ಒಂದು ನಾಡಿನ ಒಂದು ರಾಜ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ಕ್ರೌರ್ಯ, ದಬ್ಬಾಳಿಕೆ, ದೌರ್ಜನ್ಯಗಳ ಕುರಿತು ಸ್ಪಷ್ಟ ಚಿತ್ರಣವನ್ನು ಪತ್ರಿಕೆಗಳು ನೀಡುತ್ತವೆ. ಅನ್ಯಾಯದ ವಿರುದ್ಧ ಹೋರಾಡುವ, ನ್ಯಾಯವನ್ನು ಪ್ರೋತ್ಸಾಹಿಸುವ ಕಲೆ ಪತ್ರಿಕೆಗಿದೆ. ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ದಂಗೆಯದ್ದ ಜನರು ತಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಸಲು ಪತ್ರಿಕೆ ಎನ್ನುವ ಅಸ್ತ್ರವನ್ನು ಬಳಸಿದುದ್ದನ್ನು ನಾವು ಗಮನಿಸಬಹುದು.

ಹೈದ್ರಾಬಾದ್ ಸಂಸ್ಥಾನದಲ್ಲಿ ನಿಜಾಂ ಅವರ ನಿರಂಕುಶ ಆಡಳಿತದ ವಿರುದ್ಧ ನಡೆದ ಹೋರಾಟದಲ್ಲಿ ವಿವಿಧ ಆಯಾಮಗಳಲ್ಲಿ ಪತ್ರಿಕೆಗಳು ಕಾರ್ಯನಿರ್ವಹಿಸಿರುವುದನ್ನು ಕಾಣಬಹುದು. ಆಡಳಿತದ ಭಾಷೆ 'ಉರ್ದು'ವಾಗಿದ್ದರಿಂದ ಆರಂಭದಲ್ಲಿ 'ಉರ್ದು' ಭಾಷೆಯನ್ನು ಹೊರತುಪಡಿಸಿ ಬೇರೆ ಯಾವ ಭಾಷೆಯಲ್ಲಿ ಪತ್ರಿಕೆಗಳು ಹೊರಬರಲಿಲ್ಲ. "ಹೈದ್ರಾಬಾದ್ ನಿಜಾಂನ ಸರ್ಕಾರದ ಪರವಾಗಿ ಬರೆಯುತ್ತಿದ್ದ ಪತ್ರಿಕೆಗಳಿಗೆ ಸಂಭಾವನೆ ಕೊಡುತ್ತಿದ್ದರು. ನಿಜಾಂ ಅವರ ಆಡಳಿತದ ರೀತಿಯನ್ನು ಹೊಗಳುತ್ತಿದ್ದ ಪತ್ರಿಕೆಗಳಿಗೆ (ಸಂಭಾವನೆ) ಸಂಪಾದಕರಿಗೆ ನಿಜಾಂ ಆಸ್ಥಾನದಲ್ಲಿ 'ಭವ್ಯ'ವಾದ ಸ್ವಾಗತ ನೀಡುತ್ತಿದ್ದರು. ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಜನತಾ ಆಂದೋಲನದ ಪರವಾಗಿ ಬರೆಯುತ್ತಿದ್ದ ಪತ್ರಿಕೆಗಳು ಕೋಮುವಾದಿಗಳೆಂದು ಕರೆದು ಆ ಪತ್ರಿಕೆಗಳ ಮೇಲೆ ನಿಜಾಂ ಅವರು ನಿಷೇಧ ಹೇರುತ್ತಿದ್ದರು"[೬].

ಈ ರೀತಿಯ ನಿಜಾಂ ಅವರ ಧಮನಕಾರಿ ನೀತಿಯಿಂದ ಪತ್ರಿಕೆಗಳ ಸಂಖ್ಯೆ ಇಳಿಮುಖವಾಗಿದ್ದವು. ಪತ್ರಿಕೆಗಳಿಗೆ ಬೇಕಾಗುವ ಮುದ್ರಣ ಕಾಗದವನ್ನಾಗಲಿ, ಮುದ್ರಣಕ್ಕಾಗಲಿ ಅನುಮತಿ ಕೊಡುವಾಗ ತಾರತಮ್ಯ ನೀತಿಯನ್ನು ಅನುಸರಿಸುತ್ತಿತ್ತು. ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರಕಟಿಸುವುದಕ್ಕೆ ನಿಜಾಂ ಅವರ ಆಳ್ವಿಕೆಯಲ್ಲಿ ಅವಕಾಶ ಇರಲಿಲ್ಲ. ಇಂತಹ ಕಠಿಣ ಪರಸ್ಥಿತಿಯಲ್ಲಿ ಕನ್ನಡ ನಾಡಿನ ರಕ್ಷಣೆಗಾಗಿ ಸುರಪುರದಿಂದ ಕನ್ನಡ ಭಾಷೆಯಲ್ಲಿ ಒಂದು, ಇಂಗ್ಲೀಷ್ ಭಾಷೆಯಲ್ಲಿ ಒಂದು ಹೀಗೆ ಒಟ್ಟು ಎರಡು ಪತ್ರಿಕೆಗಳು ಪ್ರಕಟವಾಗುತ್ತಿದ್ದವು.

ಪತ್ರಿಕೆಗಳು ಸ್ವರೂಪ ನೈಜಾಂ ನ್ಯಾ ತೀರ್ಪು ಪತ್ರಿಕೆ

ಕನ್ನಡ ಪತ್ರಿಕೆಗಳ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದವರು ಗುರಯ್ಯ ಸೂಗೂರು ಮಠ ಅವರು. ಸಂಸ್ಕೃತ, ಉರ್ದು, ಕನ್ನಡ, ಮರಾಠಿ ಭಾಷೆಗಳಲ್ಲಿ ನೈಪುಣ್ಯತೆ ಪಡೆದ ಇವರು ರಂಗಂಪೇಟೆಯಲ್ಲಿ ಜನಿಸಿದರು. ಸರ್ಕಾರಿ ನೌಕರಿಗೆ ಸೇರಿದ ನಂತರ 'ನೈಜಾಂ ನ್ಯಾಯ ತೀರ್ಪು' ಎಂಬ ಕನ್ನಡ ಮಾಸ ಪತ್ರಿಕೆಯನ್ನು ೧೯೨೫ ರಿಂದ ೧೯೪೦ರವರೆಗೆ ಸುಮಾರು ೧೫ ವರ್ಷಗಳ ಕಾಲ ಪತ್ರಿಕೆ ನಡೆಸಿದರು"[೯]. ಈ ಸಮಯದಲ್ಲಿ ಕರ್ನಾಟಕದಲ್ಲಿ ಕನ್ನಡ ಮುದ್ರಣಾಲಯ ಕೇವಲ ಬೆಂಗಳೂರಿನಲ್ಲಿ ಮಾತ್ರ ಇತ್ತು. ಬೆಂಗಳೂರಿನಿಂದ ಮುದ್ರಿಸಿಕೊಂಡು ತಂದು ಸುರಪುರ ತಾಲ್ಲೂಕಿನ ಪ್ರತಿಯೊಂದು ಹಳ್ಳಿಹಳ್ಳಿಗೂ ಹಂಚುತ್ತಿದ್ದರು. ಇವರು 'ನ್ಯಾಯಪ್ರಭು' ಎಂಬ ಮತ್ತೊಂದು ಪತ್ರಿಕೆಯನ್ನೂ ತಮ್ಮ ಸಹೋದರರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದರು. ನ್ಯಾಯಾಲಯದ ತೀರ್ಪುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ತೀರ್ಪಿನ ಅಂಶಗಳನ್ನು ಪತ್ರಿಕೆಗಳ ಮೂಲಕ ಜನರ ಗಮನಕ್ಕೆ ತರುವಲ್ಲಿ ಪತ್ರಿಕೆ ಮಹತ್ವದ ಪಾತ್ರವಹಿಸಿತು. ಕನ್ನಡ ಭಾಷೆಗೆ ಮೆರಗು ಕೊಟ್ಟು ಕನ್ನಡ ಭಾಷೆ ಆ ಕಾಲದಲ್ಲಿ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಪ್ರಭಾವ ಬೀರಿತು. ಪ್ರಪ್ರಥಮವಾಗಿ ಸುರಪುರದ ಮಟ್ಟಿಗೆ ಕನ್ನಡ ಭಾಷೆಯಲ್ಲಿ ಪತ್ರಿಕೆಯನ್ನು ನಡೆಸಿದ ಕೀರ್ತಿ ಗುರಯ್ಯ ಸೂಗೂರ ಮಠ ಅವರಿಗೆ ಸಲ್ಲುತ್ತದೆ.

ಸುರಪುರ ಸಮಾಚಾರ್

ಸುರಪುರ ತಾಲ್ಲೂಕಿನ ಆಫೀಸ್‌ನಲ್ಲಿ ಗುಮಾಸ್ತರಾಗಿದ್ದ ತಿರುಮಲರಾವ್ ದೇಸಾಯಿಯವರು ಗುಲ್ಬರ್ಗಾದ ವಿ.ಪಿ. ದೇವಳಗಾಂವಕರ ಅವರ ಸಲಹೆ ಪಡೆದು ಹೈದ್ರಾಬಾದ್ ಕರ್ನಾಟಕ ವಿಮೋಚನಗೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಗಳನ್ನು ನಿಜಾಂ ಸರ್ಕಾರದ ದುರಾಡಳಿತ ರಜಾಕಾರರ ದಬ್ಬಾಳಿಕೆ, ಅನ್ಯಾಯವನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆಯನ್ನು ನೀಡಲು 'ಸುರಪುರದ ಸಮಾಚಾರ್' ಎಂಬ ಇಂಗ್ಲೀಷ್ ಪತ್ರಿಕೆಯನ್ನು 'ತಾಳಿಕೋಟೆ'ಯಿಂದ ಮುದ್ರಿಸಿ ಸುರಪುರಕ್ಕೆ ತಂದು ಹಳ್ಳಿಹಳ್ಳಿಗಳಲ್ಲಿ ಹಂಚುತ್ತಿದ್ದರು. "ನಿಜಾಂ ಸರ್ಕಾರವು ಭಾರತದಲ್ಲಿ ವಿಲೀನವಾಗುವ ತನಕ ಚಳವಳಿಗಳು ನಡೆಯಬೇಕು. ವಿಲೀನಕ್ಕಾಗಿ ಒತ್ತಾಯ ಮಾಡಬೇಕು. 'ಕರಗಳ ನಿರಾಕರಣೆ ಸರಕಾರಿ ನೌಕರರು ಶಾನಭೋಗರು ರಾಜನಾಮೆ ನೀಡಬೇಕು. ಸೇಂದಿ ಮರಗಳನ್ನು ನಾಶಮಾಡುವುದು' ಎಂಬ ಈ ಅಂಶಗಳನ್ನು ಪತ್ರಿಕೆ ಮುಖಮಟಗಳಲ್ಲಿ ಮುದ್ರಿಸುತ್ತಿತ್ತು"[೯].

೭. ನಿಜಾಂನ ಅನ್ಯಭಾಷೆ ಧೋರಣೆ

ಹೈದ್ರಾಬಾದ್ ನಿಜಾಂ ಅವರ ಆಳ್ವಿಕೆ ಕಾಲದಲ್ಲಿ ಮೊದಲು 'ಫಾರಸಿ' ಭಾಷೆಯು ಮುಂಚೂಣಿಯ ಸ್ಥಾನದಲ್ಲಿತ್ತು. ನಂತರ ಉರ್ದು ಭಾಷೆಯನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಕಡ್ಡಾಯಗೊಳಿಸಿದರು. ಅಂದರೆ ಹೈದ್ರಾಬಾದಿನ ನಿಜಾಂನು ಉರ್ದು ಭಾಷೆಯನ್ನು ಅಭಿವೃದ್ಧಿಪಡಿಸಲು ಕ್ರಮವನ್ನು ಕೈಗೊಂಡರು. ಹೈದ್ರಾಬಾದ್ ಸಂಸ್ಥಾನದ ಸುರಪುರ ಹಾಗೂ ಇತರ ಭಾಗಗಳಲ್ಲಿ

ಕನ್ನಡ, ತೆಲಗು, ಮರಾಠಿ, ಭಾಷೆಗಳು 'ದೇಶಿ' ಭಾಷೆಗಳಾಗಿದ್ದವು. ಬಹುಸಂಖ್ಯಾತರಾದ ಕನ್ನಡಿಗರು. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬದಿಗೊತ್ತಿ ಪ್ರಭುತ್ವದ ಭಾಷೆಯಾದ 'ಉರ್ದು' ಭಾಷೆಯನ್ನು ಕಲಿಯುವ ಒತ್ತಡಕ್ಕೆ ಒಳಗಾದರು.

ಸಂಸ್ಥಾನದಲ್ಲಿ 'ಉರ್ದು' ಭಾಷೆ ಕಲಿತವರ ಸಂಖ್ಯೆ ಕಡಿಮೆಯಿತ್ತು. ಆಡಳಿತವನ್ನು ಸುವ್ಯವಸ್ಥಿತ ವಾಗಿ ನಡೆಸುವುದಕ್ಕೆ ಮತ್ತು ಸ್ಥಳೀಯವಾಗಿ ಉರ್ದು ಭಾಷಿಕರನ್ನು ಆಡಳಿತಾತ್ಮಕ ಕಾರಣಗಳಿಂದ ಸೃಷ್ಟಿಸುವುದು ಈ ಕಾಲದಲ್ಲಿ ನಿಜಾಂ ಸಂಸ್ಥಾನಕ್ಕೆ ಅವಶ್ಯಕತೆಯಿತು. ಉರ್ದು ಭಾಷೆಯನ್ನು 'ದೇಶಿ' ಭಾಷೆಯನ್ನಾಗಿ ಮಾಡಲು ನಿಜಾಂನ ಸರ್ಕಾರ ಶ್ರಮಿಸಿತು. ಆದರೆ ಸಂಸ್ಥಾನದ ಭಾಷೆಗಳು ಕನ್ನಡ ತೆಲುಗು ಮತ್ತು ಮರಾಠಿ ಆಗಿದ್ದವು. "ಬಹುಸಂಖ್ಯಾತರಾಗಿದ್ದ ಕನ್ನಡಿಗರು ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆದು ಮುಂದೊಂದು ದಿನ ನಿಜಾಂ ಸಂಸ್ಥಾನಕ್ಕೆ ಮಾರಕ ವಾಗಬಹುದು. ಎಂಬ ದೃಷ್ಟಿ ಕೋನದಿಂದ ನಿಜಾಂ ಅವರು 'ಉರ್ದು' ಭಾಷೆಯನ್ನು ಅಸ್ತಿತ್ವಕ್ಕೆ ತಂದರು. ಉರ್ದು ಭಾಷೆಯ ಹೇರಿಕೆ ಬಹುಸಂಖ್ಯಾತ ಜನರ ಶೈಕ್ಷಣಿಕ ಅವಕಾಶಗಳನ್ನು ಮೊಟಕುಗೊಳಿಸಿತು"[೧೦].

ನಿಜಾಂ ಅವರ ಭಾಷಾ ದಬ್ಬಾಳಿಕೆಯ ಧೋರಣೆಯಿಂದಾಗಿ ಕನ್ನಡ ಭಾಷೆಯ ಬೆಳವಣಿಗೆಯು ಕುಂಠಿತಗೊಂಡಿತು "ಆಳುವ ವರ್ಗದ ಭಾಷೆಯಾದ 'ಉರ್ದು'ವನ್ನು ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಪದವಿಯವರೆಗೂ ಕಲಿಯಬೇಕಾಗಿತ್ತು. ರಾಜಮನೆತನಗಳ ಆಳ್ವಿಕೆಯಲ್ಲಿ ಕನ್ನಡ ಭಾಷೆ ಉನ್ನತ ಸ್ಥಾನದಲ್ಲಿತ್ತು. ಆದರೆ ನಿಜಾಂ ಅವರ ಆಳ್ವಿಕೆಯಲ್ಲಿ ಈ ಭಾಗದಲ್ಲಿ ಕನ್ನಡ ಭಾಷೆ ಸಂಪೂರ್ಣವಾಗಿ ಮಲತಾಯಿ ಧೋರಣೆ ನೀತಿಗೆ ಬಲಿಯಾಗಿತ್ತು"[೧೧].

ಇಂಗ್ಲೀಷ್ ಭಾಷೆಯಲ್ಲಿ ಕಲಿಯಲು ಅವಕಾಶವಿದ್ದರೂ ಉನ್ನತ ಪದವಿ ಪರೀಕ್ಷೆಗಳಕನ್ನು ಉರ್ದು ಭಾಷೆಯಲ್ಲಿಯೆ ಬರೆಯುವುದು ಕಡ್ಡಾಯವಾಗಿತ್ತು. "ನಿಜಾಂ ಸರ್ಕಾರ ಇಂಗ್ಲೀಷ್ ಭಾಷೆಯಿಂದ ಉರ್ದುಭಾಷೆಗೆ ಭಾಷಾಂತರಿಸಲು ಒಂದು ಪ್ರತ್ಯೇಕ ವಿಭಾಗವನ್ನು ತೆರೆದಿದ್ದರು. ಇದನ್ನು ಗಮಿಸಿದ ಸಿದ್ದಯ್ಯ ಪುರಾಣಿಕರು "ಉರ್ದುಭಾಷೆಯನ್ನು ಅಭಿವೃದ್ಧಿಪಡಿಸಿದ ನಿಜಾಂ ಅವರ ನೀತಿ ಉಳಿದವರಿಗೆ ಮಾಧರಿಯಾಗಿದೆ" ಎಂದು ಅಭಿಪ್ರಾಯಪಟ್ಟರು. ನಿಜಾಂ ಅವರ ಆಳ್ವಿಕೆಯಲ್ಲಿ ಉರ್ದು ಕಲಿಯದಿದ್ದರೆ ನೌಕರಿ ಏಕೆ? ಮೋಕ್ಷವು ಇಲ್ಲವೆಂಬ ಪರಿಸ್ಥಿತಿ ಇತ್ತು"[೧೨].

ಉಸ್ಮಾನೀಯ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗಳನ್ನು ಉರ್ದುವಿನಲ್ಲಿ ಕಲಿಯಲು ವ್ಯವಸ್ಥೆಮಾಡಿರುವುದು "ದೇಶಿ ಭಾಷೆಯಲ್ಲಿ ಶಿಕ್ಷಣ ಕೊಡಬೇಕಾದುದು ನಮ್ಮ ನೀತಿ" ಎಂದು ನಿಜಾಂ ಅವರು ದೃಢ ನಿಲುವನ್ನು ತಾಳಿದರು. ದೇಶಿ ಭಾಷೆ ಎಂದರೆ ಉರ್ದು ಭಾಷೆ ಎಂದು ಆಗಿನ ನಿಜಾಂ ಸರ್ಕಾರ ಘೋಷಿಸಿತ್ತು. ಹೈದ್ರಾಬಾದ್ ಕರ್ನಾಟಕದ ಕೆಲವು ಭಾಗಗಳು ಮರಾಠಿ ಮಯವಾಗಿದ್ದವು. ಆದಿಲ್‌ಶಾಹಿ ಮತ್ತು ನಿಜಾಂ ಅವರ ಆಳ್ವಿಕೆ ಕಾಲದಲ್ಲಿ ಫಾರಸಿ (ಉರ್ದು) ಪೇಶ್ವೆಗಳ ಕಾಲದಲ್ಲಿ ಮರಾಠಿ ಭಾಷೆಗಳು ಆಡಳಿತಾತ್ಮಕವಾಗಿ ಪ್ರಮುಖ ಸ್ಥಾನವನ್ನು ಪಡೆದುಕೊಂಡು

ಬಂದಿದ್ದವು. ಉಳಿದ ಭಾಷೆಗಳಿಗಿರುವಂತೆ ಆಡಳಿತ ವಿಭಾಗ ವ್ಯವಸ್ಥೆ ಕನ್ನಡ ಭಾಷೆಗೆ ಇರಲಿಲ್ಲ ವಾದ್ದರಿಂದ ಕನ್ನಡ ಭಾಷೆ ತುಳಿತಕ್ಕೊಳಿಗಾಗಿತ್ತು. ಈ ನೀತಿಯನ್ನು ವಿರೋಧಿಸಲು ಇತರ ಭಾಷೆಗಳ ಕುತರ್ಕಕ್ಕೆ ಒಳಗಾಗಿ ಅವಸಾನದ ಅಂಚಿನಲ್ಲಿರುವ ಕನ್ನಡನಾಡು- ನುಡಿ - ಭಾಷೆ ಮತ್ತು ಸಂಸ್ಕೃತಿ ಆಚರಣೆ ಸಂಪ್ರದಾಯಗಳನ್ನು ಪೋಷಣೆ ಮಾಡಿ ಬೆಳಸಲು ಸಂಘ ಸಂಸ್ಥೆಗಳ ಅವಶ್ಯಕತೆಯಿತ್ತು. ಹೈದ್ರಾಬಾದ್ ಸಂಸ್ಥಾನದಲ್ಲಿ ಹಿಂದೂಗಳು ಮಾತನಾಡುವ ಮರಾಠಿ, ಕನ್ನಡ ಮತ್ತು ತೆಲಗು ಭಾಷೆಗಳು ಕೇವಲ ಮೌಖಿಕ ಭಾಷೆಗಳಾಗಿ ಪರಿವರ್ತಿತ ಗೊಂಡಿದ್ದವು.

"ಈ ಪ್ರಾಂತ್ಯದಲ್ಲಿ ಉರ್ದುಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಉನ್ನತ ಹುದ್ದೆಗಳಿಗೆ ಹೋಗಲು ಅವಕಾಶವಿತ್ತು. ಇಲ್ಲಿಯ ಜನರು ಸ್ವತಂತ್ರ್ಯ ಪ್ರೀಯರು. ಕನ್ನಡ ನಾಡು, ನುಡಿಯ ಮೇಲೆ ಅಪ್ಪಟ ಪ್ರೇಮಿಗಳಾಗಿದ್ದರು. ತಮ್ಮ ಅಸ್ತಿತ್ವಕ್ಕೆ ಹಾಗೂ ತಾಯ್ನಾಡಿನ, ತಾಯ್ನುಡಿಯ ಅಸ್ತಿತ್ವಕ್ಕೆ ದಕ್ಕೆ ಬಂದಾಗ ಅದನ್ನು ಸಹಿಸಿಕೊಳ್ಳಲಾಗದೆ ಹೋರಾಟಕ್ಕೆ ಸಂಘ-ಸಂಸ್ಥೆಗಳು ಸಿದ್ದವಾದವು. ಅಂತಹ ಹೋರಾಟದ ಪ್ರಥಮ ಹೆಜ್ಜೆಯೇ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘದ ಸ್ಥಾಪನೆ"[೧೧] (ಸಂದರ್ಶನ: ತ್ರಿವೇದಿ ೨೨.೦೪.೦೪).

ಒಂದು ನಾಡಿನ ಒಂದು ಜನಾಂಗದ ಅಭಿವೃದ್ಧಿಯಲ್ಲಿ ಸಂಘ-ಸಂಸ್ಥೆಗಳು ತುಂಬಾ ಪ್ರಮುಖವಾದ ಪಾತ್ರವನ್ನುವಹಿಸುತ್ತವೆ. ಸಾಹಿತ್ಯ ಸಂಘಗಳು ಜನರಲ್ಲಿ ಸದಾಭಿರುಚಿಯನ್ನು ರೂಪಿಸಿ, ಪೋಷಿಸಿ, ಜನಮನವನ್ನು ಹದಗೊಳಿಸಿ ಸಾಹಿತ್ಯದ ರಸ ಸ್ವಾದನೆಗೆ ಅಣಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಕನ್ನಡ ಭಾಷೆ, ಸಂಸ್ಕೃತಿಗಳ ಸಂರಕ್ಷಣೆಯೊಂದಿಗೆ ಕನ್ನಡಿಗರನ್ನು ಒಂದೇ ಪರದಿಯ ಮೇಲೆ ತರುವುದು ಅನಿವಾರ್ಯವಾಗಿತ್ತು.

ಅದು ಸ್ವತಂತ್ರ್ಯಪೂರ್ವಕಾಲ. ಒಂದಡೆ ಅಂದಿನ ಹೈದ್ರಾಬಾದ್ ಸಂಸ್ಥಾನದ ಆಳರಸರ ಸರಕಾರ ಸಂಘ-ಸಂಸ್ಥೆಗಳನ್ನು ಸಂಶಯದ ದೃಷ್ಟಿಯಿಂದ ಕಾಣುತ್ತಿದ್ದ ಕಗ್ಗತ್ತಲೆಯ ಕಾಲವದು. ಇನ್ನೊಂದಡೆ 'ಮಾಡು ಇಲ್ಲವೆ ಮಡಿ' ಎಂದು ಪ್ರಾಣವನ್ನು ಪಣಕಿಟ್ಟು ದೇಶದ ಬಂಧಮುಕ್ತಿಗಾಗಿ ಹೋರಾಡುತ್ತಿದ್ದ ಭೀಷ್ಮಕಾಲ. ನಿಜಾಂ ಸಂಸ್ಥಾನದ ಆಳ್ವಿಕೆಗೆ ಒಳಗಾಗಿದ್ದ ಮತ್ತು ಉರ್ದು ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದ ಈ ಪ್ರದೇಶದಲ್ಲಿ ಕನ್ನಡಿಗರು ಕನ್ನಡ ಭಾಷೆ, ಸಂಸ್ಕೃತಿಗಳ ರಕ್ಷಣೆಗಾಗಿ ತಮ್ಮ ತಮ್ಮ ಪ್ರದೇಶಗಳಲ್ಲಿ ಕನ್ನಡದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಪ್ರಬಲವಾದ ಸಂಘ-ಸಂಸ್ಥೆಗಳ ಅವಶ್ಯಕತೆ ಇತ್ತು.

ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಶಾಲಿವಾನ ಶಕೆ ೧೮೬೫ರ ಯುಗಾದಿಯ ಶುಭದಿನ ಅಂದರೆ ದಿನಾಂಕ ೦೫.೦೪.೧೯೪೩ರಂದು ರಂಗಂಪೇಟೆ-ತಿಮಾಪುರದ ಸಾಹಿತ್ಯಾಸಕ್ತರು, ಸಾಹಿತ್ಯಭಿಮಾನಿಗಳು, ಕನ್ನಡ ಪ್ರೀಯರು ಊರಿನ ಸಾರ್ವಜನಿಕರು ಸೇರಿ ಕನ್ನಡದ ಏಳಿಗೆಗಾಗಿ ಸಂಘವನ್ನು ಸ್ಥಾಪಿಸಿದರು.

ಐತಿಹಾಸಿಕ ಹಿನ್ನಲೆ ಹೊಂದಿರುವ ರಂಗಂಪೇಟೆ ರಾಜ ಮಹಾರಾಜರು, ಕವಿಗಳು, ಕಲಾವಿದರು, ಸಾಹಿತಿಗಳು ಹಾಗೂ ಶರಣರು ಜನಿಸಿದ ನಾಡು ಸಗರನಾಡು ಎಂದೇ ಖ್ಯಾತಿ ಪಡೆದಿದೆ. 'ಶೂರರ ಊರು' ಸುರಪುರ. 'ಸುರಪುರ' ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಅವಳಿನಗರವೆಂದೆ ಪ್ರಸಿದ್ಧಿಯಾದ ರಂಗಂಪೇಟೆ ಸುರಪುರ ರಾಜವಂಶದ ಪರಂಪರೆಯಲ್ಲಿ ಬಂದ ಮುಮ್ಮಡಿ ರಾಜವೆಂಕಟಪ್ಪನಾಯಕನ ರಾಣಿಯಾಗಿದ್ದ ರಂಗಮ್ಮನ ಸವಿನೆನಪಿಗಾಗಿ ೧೮೮೨ರಲ್ಲಿ 'ರಂಗಮ್ಮ'ನ ಪೇಟೆಯನ್ನು ಸ್ಥಾಪಿಸಲಾಯಿತು. ರಂಗಮ್ಮ ಒಳ್ಳೆಯ ಕವಿಯತ್ರಿಯಾಗಿದ್ದಳು ಎಂದು ಪುರುಷಕಾರಿ 'ಲೋಕಯ್ಯ'ನವರ "ಸುರಪುರ ರಾಜರುಗಳ ಚರಿತ್ರೆ" ಹಸ್ತಪ್ರತಿಯ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ೧೮೨ ವರ್ಷಗಳ ಇತಿಹಾಸವಿರುವ ರಂಗಂಪೇಟೆ ಅಂದು ಬ್ರಾಹ್ಮಣರ ಅಗ್ರಹಾರವಾಗಿತ್ತು ಎಂದು ತಿಳಿದುಬರುತ್ತದೆ.

ಸಾಹಿತ್ಯಾಭಿಮಾನಿಗಳು, ಸಾಹಿತ್ಯಾಸಕ್ತರು ಎಂ.ಆರ್. ಬುದ್ಧಿವಂತ ಶೆಟ್ಟಿ, ದಿ. ಶ್ರೀ ಸಗರ ಕೃಷ್ಣಚಾರ್ಯ ದಿ. ರುದ್ರಸ್ವಾಮಿಗಳು, ದಿ. ಬಂಡಿ ಗುರಾಚಾರ್ಯ, ದಿ.ಡಿ. ಗೋವಿಂದಪ್ಪ, ಶ್ರೀ ದಿ. ಮಮ್ಮಡಿ ಶಿವಣ್ಣನವರು, ದಿ. ಶ್ರೀನಿವಾಸ ಚಾರ್ಯರು ಜಾಗೀರದಾರ್, ದಿ. ಶ್ರೀ ಗಿರೆಪ್ಪ ತ್ರಿವೇದಿ, ದಿ. ಶ್ರೀ ಜನಾರ್ಧನ ಹಳಿಜೋಳ, ದಿ. ರಾಮಣ್ಣ ಬೋಡಾ, ದಿ. ರಾಮಯ್ಯ ಕಲ್ಬುಂಡ, ದಿ. ಅಷ್ಟವದಾನಿ ನರಸಿಂಹಶಾಸ್ತ್ರಿಗಳು, ದಿ. ಶ್ರೀ ರಾಮಣ್ಣ ಜಯತೀರ್ಥಾಚಾರ್ಯ ಮಣ್ಣೂರು, ದಿ. ಶ್ರೀ ಹೆಬ್ಬಾಳ ಶೇಷಾಶಾಸ್ತ್ರಿಗಳು ಮತ್ತು ಊರಿನ ಕನ್ನಡದ ಅಭಿಮಾನಿ ಸ್ನೇಹಿತರ ಬಳಗ ಇವರೆಲ್ಲರ ಕನಸಿನ 'ಕೂಸಾಗಿ' ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಯಾಯಿತು.

ಸಂಘದ ಸಂಸ್ಥಾಪನ ಅಧ್ಯಕ್ಷರಾಗಿ ಶ್ರೀ ರಾಮಣ್ಣ ಬೋಡಾ ಉಪಾಧ್ಯಕ್ಷರಾಗಿ ಶ್ರೀನಿವಾಸಾ ಚಾರ್ಯ ಜಾಹಗೀರದಾರ ಮತ್ತು ಕಾರ್ಯದರ್ಶಿಗಳಾಗಿ ಶ್ರೀ ರುದ್ರಸ್ವಾಮಿಗಳು ಅಯ್ಯಯಾಗಿ ಭದ್ರವಾದ ತಳಪಾಯ ಹಾಕಿದರು. ಶ್ರೀ ಹೆಬ್ಬಾಳ ಶೆಷಶಾಸ್ತ್ರಿ ಹಾಗೂ ಶ್ರೀ ಅಷ್ಟವದಾನಿ ನರಸಿಂಹಶಾಸ್ತ್ರಿಗಳು ಹಾಗೂ ಶ್ರೀ ಜಯತೀರ್ಥಚಾರ್ಯ ಮಣ್ಣೂರ ಅವರ ಮಾರ್ಗದರ್ಶನದಲ್ಲಿ ಸಂಘ ಸುತ್ತ-ಮುತ್ತ ಜನಪ್ರಿಯತೆಯನ್ನು ಗಳಿಸಿತ್ತು.

ಇಲ್ಲಿಯವರೆಗೂ ಶ್ರೀ ರಾಮಣ್ಣ ಬೇಡಾ, ಶ್ರೀ ಅಡಿವೆಪ್ಪ ಗೋಲಗೇರಿ, ಶ್ರೀ ಡಿ. ಗೋವಿಂದಪ್ಪ, ಅಧ್ಯಕರಾಗಿ ಕೆಲಸಮಾಡಿದ್ದಾರೆ. ಪ್ರಸ್ತುತ ನಾಲ್ಕನೇ ಅಧ್ಯಕ್ಷರಾಗಿ ಸಂಘ ಸ್ಥಾಪನೆ ಆದಾಗಿನಿಂದ ಅದಕ್ಕೆ ಬೆನ್ನೆಲುಬಾಗಿ ನಿಂತಿರುವ ಶ್ರೀ ಎಂ.ಆರ್. ಬುದ್ಧವಂತ ಶೆಟ್ಟರು ಸೇವೆ ಸಲ್ಲಿಸುತ್ತಿದ್ದಾರೆ.

ಆ. ಸಂಘದ ಗುರಿ-ಉದ್ದೇಶಗಳು

ಕನ್ನಡ ಶಿಕ್ಷಣದ ಬಗೆಗಿನ ಜಾಗೃತಿ ಒಂದಡೆಯಾದರೆ ಕನ್ನಡ ಸಾಹಿತ್ಯ ಸಂಸ್ಕೃತಿ, ಭಾಷೆ, ಮತ್ತೀತರ ಈ ಭಾಗದ ಕನ್ನಡಿಗರ ಸಮಸ್ಯೆಗಳನ್ನು ಅರ್ಥೈಸಿ ನಿವಾರಿಸಿ ಕನ್ನಡ ಭಾಷಿಕರನ್ನು ಒಂದಾಗಿಸುವ ಪ್ರಯತ್ನಗಳನ್ನು ತರೆಮರೆಯಲ್ಲಿಯೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ನಡೆಸಿತು.

ರಂಗಂಪೇಟೆ ಗ್ರಾಮದ ಕನ್ನಡ ಅಭಿಮಾನಿಗಳನ್ನು ಒಂದಡೆ ಸೇರಿಸಿ ಅದನ್ನು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಅಥವಾ ಪ್ರಾಂತೀಯ ಮಟ್ಟದ ಸಂಘವನ್ನಾಗಿ ಬೆಳೆಸಬೇಕೆಂಬ ಧ್ಯೇಯ ಆರಂಭಿಕ ಸದಸ್ಯರಿಗೆ ಇತ್ತೋ, ಇಲ್ಲವೋ ತಿಳಿಯದಾದರೂ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಆರಂಭದಲ್ಲಿ ಕನ್ನಡ ನುಡಿಯ ಸೇವೆ ಮಾಡುತ್ತಲೇ ಈ ಭಾಗವನ್ನು ಸಾಂಸ್ಕೃತಿಕವಾಗಿ ಬೆಳೆಸುತ್ತಲೇ ವ್ಯಾಪಕವಾಗಿ ಬೆಳೆದು ಒಂದು ಪ್ರಾಂತೀಯ ಮಟ್ಟದ ಸಂಘವಾಗಿ ಬೆಳೆಯಿತು. ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡಿಗರಿಗೆ ತಮ್ಮ ಭಾವನೆಗಳ ವಿಚಾರ ಅಭಿವ್ಯಕ್ತಿಯ ವೇದಿಕೆಯಾಯಿತು. ಕನ್ನಡ ಭಾಷೆಯ ಧೀನ ಸ್ಥಿತಿಯನ್ನು ದೂರ ಮಾಡುವುದಕ್ಕಾಗಿ ಈ ಭಾಗದ ಕನ್ನಡ ಜನರ ಸಹಾಯದಿಂದ ಒಂದು ಸಂಘವನ್ನು ಸ್ಥಾಪಿಸಬೇಕೆಂಬ ವಿಚಾರವನ್ನು ಹೊಂದಿದ ರಂಗಂಪೇಟೆ ಕನ್ನಡ 'ಸಾಹಿತ್ಯ ಗೆಳೆಯರ ಬಳಗ' ಕನ್ನಡ ಭಾಷೆ ಸಂಸ್ಕೃತಿ ಬೆಳೆಸಲು ಪ್ರಾಥಮಿಕ ಮಟ್ಟದ ಅವಶ್ಯಕತೆಗಳನ್ನು ಪಟ್ಟಿಮಾಡಿ ಸಂಘವು ತನ್ನ ಧ್ಯೇಯೋದ್ದೇಶಗಳು ಮತ್ತು ನಿಯಮಗಳನ್ನು ಸಿದ್ಧಪಡಿಸಿತು. ಸಂಘ ಸ್ಥಾಪನೆಯಾದಾಗಿನ ಗುರಿ-ಉದ್ದೇಶಗಳು ಕೆಲವು ದಿನಗಳ ನಂತರ ಸಮಯ ಸಂದರ್ಭಕ್ಕೆ ತಕ್ಕಂತೆ ಗುರಿ-ಉದ್ದೇಶಗಳು ರೂಪಿತದವಾಗುತ್ತವೆ. ಅವುಗಳಲ್ಲಿ ಮುಖ್ಯವಾದ ಧ್ಯೇಯೋದ್ದೇಶಗಳನ್ನು ಮತ್ತು ಗುರಿಗಳನ್ನು ಈ ಕೆಳಗಿನಂತೆ ಕಾಣಬಹುದು.

೧. ಈ ಭಾಗದ ಬರಹಗಾರರ, ಸಾಹಿತಿಗಳ, ಬರಹರೂಪದ ಸಾಹಿತ್ಯವನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು.

೨. ತತ್ವಶಾಸ್ತ್ರ, ಪ್ರಕೃತಿಶಾಸ್ತ್ರ, ಚರಿತ್ರೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಕನ್ನಡದಲ್ಲಿ ಬರೆಯುವುದಕ್ಕೆ ಪ್ರೋತ್ಸಾಹ ನೀಡುವುದು.

೩. ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನು ಕನ್ನಡ ದೇಶಗಳ ಚರಿತ್ರೆಯನ್ನೊಳಗೊಂಡ ಗ್ರಂಥಗಳನ್ನು ಸಂಗ್ರಹಿಸಿ, ಪರಿಷ್ಕರಿ ಪ್ರಕಟಿಸುವುದು.

೪. ಭಾರತ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು, ಹೈದ್ರಾಬಾದ್ ನಿಜಾಂನಿಂದ ವಿಮೋಚನೆ ಗಾಗಿ ರಚಿಸುವ ಲೇಖನಗಳನ್ನು ಸಂಘದ ಪತ್ರಿಕೆಯಲ್ಲಿ ಪ್ರಕಟಿಸುವುದು.

೫. ನಾಡಹಬ್ಬಗಳ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಈ ಭಾಗದಲ್ಲಿ ಜೀವಂತವಾಗಿರಿಸುವುದು.

೬. ಕನ್ನಡ ಭಾಷೆ, ಸಾಹಿತ್ಯ, ಸಮಾಜ ಜಾಗೃತಿ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ ವಿದ್ವಾಂಸರಿಗೆ ಸಾಮಾಜಿಕ ಕಾರ್ಯಕರ್ತರನ್ನು ಗುರ್ತಿಸಿ ಸಂಘದ ವಾರ್ಷಿಕೋತ್ಸವದಲ್ಲಿ ಮತ್ತು ನಾಡಹಬ್ಬದಲ್ಲಿ ಸನ್ಮಾನಿಸುವುದು.

೭. ಕನ್ನಡ ನಾಡಿನ ಖ್ಯಾತ ಕವಿಗಳನ್ನು, ಸಾಹಿತಿಗಳನ್ನು ಸೇರಿಸಿ ಆಗಾಗ ಸಭೆ ಸಮಾರಂಭಗಳನ್ನು ಏರ್ಪಡಿಸಿ ಉಪನ್ಯಾಸಗಳನ್ನು ಮಾಡಿಸುವುದು.

೮. ದತ್ತಿ ಉಪನ್ಯಾಸಮಾಲೆಗಳನ್ನು ಆರಂಭಿಸುವುದು.

೯. ಕವಿಗೋಷ್ಠಿ ಸಾಹಿತ್ಯಗೋಷ್ಠಿ ಹಾಗೂ ಸಂಗೀತ ಗೋಷ್ಠಿಗಳನ್ನು ನಡೆಸುವುದು.

೧೦. ಪುಸ್ತಕ ಪ್ರಕಟಣೆ ಮತ್ತು ಪ್ರಸಾರ.

ಹೀಗೆ ಗುರು-ಉದ್ದೇಶಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದ್ದುವು.

ಬ. ಕನ್ನಡ ಭಾಷಾ ಬೆಳವಣಿಗೆಯಲ್ಲಿ ಸಂಘದ ಪಾತ್ರ

ಕನ್ನಡ ಭಾಷೆ ಬೆಳೆಯಲು ಅಸ್ಪದ ನೀಡಬಾರದು ಎನ್ನುವುದು ನಿಜಾಂನ ಮನೋಭಾವ. ಈಗ ಇಂಗ್ಲೀಷ ಭಾಷೆಯ ಮೋಹವಿದ್ದಂತೆ ಆಗ ಜನರಿಗೆ ಉರ್ದು ಭಾಷೆಯ ಮೋಹ ಹೆಚ್ಚಾಗಿತ್ತು. ಕನ್ನಡ ಭಾಷೆ ಸಂಸ್ಕೃತ ಶಬ್ದಗಳಿಂದ ಪರಿಪುಷ್ಟವಾಗಿ ಬೆಳಿಸಿದಂತೆ ಉರ್ದು ಭಾಷೆಯು ಅರಬ್ಬಿ ಹಾಗೂ ಫಾರಸಿ ಭಾಷೆಗಳ ಸತ್ವಹೀರಿಕೊಂಡು ಶ್ರಿಮಂತ ಭಾಷೆಯಾಗಿ ಪಂಡಿತರು ಹಾಗೂ ಅಧಿಕಾರಿಗಳ ಆಡಳಿತ ಭಾಷೆಯಾಗಿತ್ತು. ಹೀಗೆ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ "ತಾಬದೇ ಖಾಲಿ ಕೇ ಆಲಂ ಯಹಾ ರಿಯಾ ಸತ ರಖೇ ತುಜಕೋ ಉಸ್ಮಾಬಸದ್ ಇಜಲಾಲ ಸಲಾಮತ್ ರಖೆ"[೧೪] (ನಿಜಾಂ ಉಸ್ಮಾನ್ ಅಲಿಖಾನ್ ಹಾಗೂ ಆತನ ಕುಟುಂಬದವರಿಗೆ ಅಲ್ಲಾಹ ಒಳ್ಳೆಯದು ಮಾಡಲಿ ಹೈದ್ರಾಬಾದ್ ರಾಜ್ಯ ಹಾಗೂ ಅಸಫೀಯಾ ಮನೆತನ ಸೂರ್ಯ ಚಂದ್ರರಿರುವ ವರೆಗೂ ಮುಂದುವರಿಯಲಿ ದೇವರು ನಿನಗೆ ಸಂಪತ್ತು ಕರುಣಿಸಲಿ ಪ್ರಜೆಗಳು ನಿನ್ನ ಹುಟ್ಟು ಹಬ್ಬವನ್ನು ಆಚರಿಸುವಂತಾಗಲಿ)" ಸರ್ವವು ಉರ್ದುಮಯವಾಗಿರುವಂತಹ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಂಘ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ಸ್ಥಾಪಿಸಲಾಯಿತು.

ಕನ್ನಡಿಗರ ಪರವಾದ ಕೆಲಸವನ್ನು ಮಾಡಿ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಿತು. ಜೊತೆಗೆ ನಿಜಾಂ ಅವರ ಸರ್ಕಾರದ ವಿರುದ್ಧ ಈ ಭಾಗದ ಜನರನ್ನು ಎತ್ತಿ ಕಟ್ಟುವಲ್ಲಿ ಮತ್ತು ಸಂಘಟಿತ ರಾಗುವಲ್ಲಿ ಕನ್ನಡ ಸಾಹಿತ್ಯ ಸಂಘ ಅಪಾರವಾದ ಶ್ರಮ ಪಟ್ಟಿತು. ಕನ್ನಡವನ್ನು ಬೆಳೆಸುವ ಕಾರ್ಯಕ್ರಮಗಳು ಆರಂಭದಲ್ಲಿ ಗುಪ್ತರೀತಿಯಲ್ಲಿ ನಡೆದವು. ಈ ರೀತಿಯ ಬೆಳವಣಿಗೆಯನ್ನು ಶೇಷಾಶಾಸ್ತ್ರಿಗಳು ಪತ್ರಿಕೆಗಳಲ್ಲಿ ಬರೆದರೆ, ಸಾಹಿತ್ಯ ಸಂಘದ ಸದಸ್ಯರು ಮನೆಮನೆಗೆ ಕನ್ನಡದ ಕರಪತ್ರಗಳನ್ನು ಹಂಚುತ್ತಿದ್ದರು. ಕೀರ್ತನೆಗಳನ್ನು ಹೇಳುವುದರ ಜೊತೆಗೆ ರಾಜ್ಯದಲ್ಲಿನ, ದೇಶದಲ್ಲಿನ ವಿದ್ಯಾಮಾನಗಳ ಬಗ್ಗೆ ತಿಳಿಸುತ್ತಿದ್ದರು. ಮುಂದೆ ಆಗಬಹುದಾದ ಬೆಳವಣಿಗೆಗಳನ್ನು ಹಾಗೂ ಅದಕ್ಕೆ ಪೂರ್ವ ತಯಾರಿಯನ್ನು ಹೇಗೆ ಮಾಡಿಕೊಳ್ಳಬೇಕು ಎನ್ನುವುದನ್ನು ಹರಿಕೀರ್ತನೆಗಳ ಮೂಲಕ ತಿಳುವಳಿಕೆ ಕೊಡುತ್ತಿದ್ದರು. ನಿಜಾಂನಿಗೆ ತಿಳಿಯದಂತೆ ಗುಪ್ತವಾದ ಕಾರ್ಯ ಚಟುವಟಿಕೆಗಳು ನಡೆಸುವ ಕೇಂದ್ರವಾಗಿ ಈ ಸಂಘವು ಕೆಲಸಮಾಡಿರುವುದನ್ನು ಕಾಣುತ್ತೇವೆ.

ಭಕ್ತ ಪ್ರಹ್ಲಾದನ ಚರಿತ್ರೆಯ ಮೂಲಕ ಜನರಿಗೆ ದೇಶದ ಸ್ವಾತಂತ್ರ್ಯ ಹೋರಾಟದ

ಚಿತ್ರಣವನ್ನು ನೀಡುತ್ತಿದ್ದರು. ಹರಿಕತೆಗಳನ್ನು ಹೇಳುವ ಸ್ಥಳಗಳನ್ನು ಪೋಲಿಸರು ಹೊಡೆಯುತ್ತಿದ್ದರು. ಅವರು ಎಷ್ಟು ಲಕ್ಷಕೊಟ್ಟು ಕೇಳಿದರು ಅವರಿಗೆ ತಿಳಿಯುತ್ತಿರಲಿಲ್ಲ.

“ಯಾವುದೇ ಕನ್ನಡದ ಕಾರ್ಯಕ್ರಮಗಳನ್ನು ಮಾಡಲು ನೈಜಾಂ ಸರ್ಕಾರದಿಂದ ಪರವಾನಿಗೆ ಇರಲಿಲ್ಲ. ಆದರೆ ಉರ್ದು ಮಾಧ್ಯಮದಲ್ಲಿ ಮಾಡುವುದಾದರೆ ಸರ್ಕಾರದಿಂದ ಪರವಾನಿಗೆ ಇತು. ಇಂತಹ ಸಂದರ್ಭದಲ್ಲಿ ಅಧಿಕೃತವಾಗಿ ನಿಜಾಂನಿಂದ ಪರವಾನಿಗೆಯನ್ನು ಪಡೆಯದೆ ನಿಜಾಂನ ವಿರುದ್ಧ ಬಂಡಾಯದ ಕಹಳೆ ಊದಿ ಕನ್ನಡ ಪ್ರಸಾರ ಮತ್ತು ಪ್ರಚಾರದ ಉದ್ದೇಶದಿಂದ ಆರಂಭವಾಯಿತು. ಬೀದರನಲ್ಲಿ ಬಾಲ್ಕಿ ಮಠದ ಶಾಲೆಗಳಲ್ಲಿ ಉರ್ದು ಮಾಧ್ಯಮದ ಶಾಲೆಗಳು ಎಂದು ಹೆಸರು ಹಾಕಿ ಶಾಲೆಯ ಒಳಗೆ ಕನ್ನಡವನ್ನು ಕಲಿಸುತ್ತಿದ್ದರು. ಹಾಗೇಯೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಕನ್ನಡದ ಬದ್ಧತೆಯೇ ಇದರ ಅಡಿಪಾಯವಾಗಿತ್ತು. ನಿಜಾಂನ ಉರ್ದು ಮಾಧ್ಯಮದ ಶಿಕ್ಷಣವಿರುವಾಗ ಕನ್ನಡ ಬೆಳವಣಿಗೆಯ ಚಟುವಟಿಕೆಗಳನ್ನು ನಡೆಸುತ್ತಿದ್ದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಮೇಲೆ ಯಾವಾಗಲೂ ನಿಜಾಂ ಸರ್ಕಾರದ ಹದ್ದಿನ ಕಣ್ಣಿತ್ತು. ಆದರೂ ರಜಾಕಾರರ ಹಾವಳಿ ಸಂದರ್ಭದಲ್ಲಿ ಸಂಘದ ಅನೇಕ ಕಾರ್ಯಕರ್ತರನ್ನು ಮೂರು ವರ್ಷಗಳ ಕಾಲ ಸೆರೆಮನೆಗೆ ಹಾಕಲಾಯಿತು”[೫೯]. (ಸಂದರ್ಶನ: ಗುರುಬಸವಯ್ಯ ಅಮ್ಮಾಪುರ: ೨೩.೦೪.೦೮). ಆರು ದಶಕಗಳಿಂದಲೂ ನಡೆಸುತ್ತಾ ಬಂದಿರುವ ಕನ್ನಡದ ಕಾರ್ಯಚಟುವಟಿಕೆಗಳಲ್ಲಿನ ತೀವ್ರತೆ ಮತ್ತು ಅಚ್ಚುಕಟ್ಟುತನ ಒಂದೇ ಸಮತಲನವನ್ನು ಕಾಪಾಡಿಕೊಂಡು ಬಂದಿದೆ. ವಾರ್ಷಿಕ ಆಚರಣೆಗಳ ಜೊತೆಗೆ ಅನೇಕ ಕಾರ್ಯಕ್ರಮಗಳ ಮೂಲಕ ಸಂಘದ ಚಟುವಟಿಕೆಗಳು ಜೀವಂತವಾಗಿವೆ.

ಕ. ಕನ್ನಡ ಕಟ್ಟುವಲ್ಲಿ ‘ಅರುಣಾ ಪತ್ರಿಕೆ’

ಒಂದು ರಾಜ್ಯದ ಬೆಳವಣಿಗೆಗೆ ಒಂದು ಭಾಷೆಯ ಬೆಳವಣಿಗೆಗೆ ಒಂದು ನಾಡಿನ ಸಂಸ್ಕೃತಿಯ ಬೆಳವಣಿಗೆಗೆಯಲ್ಲಿ ಆ ನಾಡಿನ, ಆ ಕ್ಷೇತ್ರದ ಪತ್ರಿಕೆಗಳು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತವೆ. ೧೯೪೩ರ ಕಾಲ ಘಟ್ಟ ಭಾರತದ ಸ್ವತಂತ್ರ್ಯದ ಪೂರ್ವಕಾಲ. ಒಂದಡೆ ಈ ಭಾಗ ಹೈದ್ರಾಬಾದ್ ನಿಜಾಂನ ಕಪಿಮುಷ್ಠಿಯಲ್ಲಿ ಕನ್ನಡ ಭಾಷೆ ಮತ್ತು ಹಿಂದೂಗಳು ನಲುಗಿದ ಕಾಲ. ಹೈದ್ರಾಬಾದ್ ನಿಜಾಂ ಸರ್ಕಾರದ ಪರವಾಗಿ ಬರೆಯುತ್ತಿದ್ದ ಪತ್ರಿಕೆಗಳಿಗೆ ಸಂಭಾವನೆಯನ್ನು ನೀಡಲಾಗುತ್ತಿತ್ತು. ನಿಜಾಂ ವಿರುದ್ಧ ಹಾಗೂ ಕನ್ನಡದ ಪರವಾಗಿ ಪತ್ರಿಕೆಗಳು ಬರೆದರೆ ಅವುಗಳನ್ನು ಕೋಮುವಾದಿ ಪತ್ರಿಕೆಗಳು ಎಂದು ನಿಷೇಧಿಸಲಾಗುತ್ತಿತ್ತು. ನಿಜಾಂ ಅವರ ಧಮನಕಾರಿ ನೀತಿಯಿಂದ ಪತ್ರಿಕೆಗಳ ಸಂಖ್ಯೆ ಇಳಿಮುಖವಾಗಿತ್ತು. ಆರಂಭದಲ್ಲಿ ಉರ್ದು ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಯಲ್ಲಿ ಪತ್ರಿಕೆಗಳು ಹೊರಬರಲಿಲ್ಲ. ಹೀಗೆ ಹೈದ್ರಾಬಾದ್ ನಿಜಾಂ ಅವರ ಪರವಾನಿಗೆ ಇಲ್ಲದೆ ಅವರ ಪ್ರಭುತ್ವದ ವಿರುದ್ಧ ಬಂಡಾಯವೆದ್ದು ೧೯೪೩ರಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಯಾದಾಗಿನಿಂದ ಸಂಘವು ‘ಉರ್ದುಮಯವಾಗಿದ್ದಂತ ಕನ್ನಡ ನಾಡು-ನುಡಿ ಮತ್ತು ಸಂಸ್ಕೃತಿಯನ್ನು ಮತ್ತು ಈ ಭಾಗದಲ್ಲಿ ಸಾಹಿತ್ಯಿಕ ಚಟುವಟಿಕೆಗಳ ಮೂಲಕ ಸಾಹಿತ್ಯವನ್ನು ಪ್ರಸಾರ

ಮತ್ತು ಪ್ರಚಾರ ಮಾಡುವ ಗುರಿಯೊಂದಿಗೆ 'ಅರುಣಾ ಕೈ' ಬರಹದ ಮಾಸ ಪತ್ರಿಕೆಯನ್ನು ಆರಂಭಿಸಿತು. ಹೈದ್ರಾಬಾದ್ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಾದ ಮಣ್ಣೂರು ಜಯತೀರ್ಥ ಚಾರ್ಯ ಹಾಗೂ ರೇವಣ ಸಿದ್ಧಯ್ಯ ರುದ್ರಸ್ವಾಮಿ ಮಠ ಅವರು ಈ ಪತ್ರಿಕೆಯ ಸಂಪಾದಕ ರಾಗಿದ್ದರು.

ಸ್ಥಳೀಯ ಲೇಖಕರು ಹಾಗೂ ಕವಿಗಳಿಂದ ಉತ್ತಮ ಲೇಖನಗಳನ್ನು ಮತ್ತು ಕತೆ, ಕವನಗಳನ್ನು ಸುಂದರ ಕೈಬರಹ ಹಾಗೂ ಆಕರ್ಷಕ ಚಿತ್ರಗಳಿಂದ ಅಲಂಕರಿಸಿ ಪ್ರಕಟಿಸುತ್ತಿದ್ದರು. ಈ ಪತ್ರಿಕೆ ಸುಮಾರು ವರ್ಷಗಳ ಕಾಲ ಮುಂದವರೆಯಿತು. ಕನ್ನಡ ಭಾಷೆಯ ಪ್ರಸಾರ ಮತ್ತು ಪ್ರಚಾರಕ್ಕೆ ಕಂಕಣಬದ್ಧವಾಗಿನಿಂತ ಅರುಣಾ ಪತ್ರಿಕೆ ಕನ್ನಡವನ್ನು ಕನ್ನಡಿಗರ ಭಾಷೆಯನ್ನಾಗಿ ಮಾಡಿತು. ಈ ಪತ್ರಿಕೆಯಲ್ಲಿ ಈ ಭಾಗದ ಸಾಹಿತಿಗಳ, ಕವಿಗಳ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ ಅವರ ಸಾಹಿತ್ಯಿಕ ಮೌಲ್ಯಗಳನ್ನು ಪ್ರಕಟಿಸಲಾಗುತ್ತಿತ್ತು.

ಕೇವಲ ಕವನಗಳು ಲೇಖನಗಳಲ್ಲದೆ ನಿಜಾಂ ಆಡಳಿತದಲ್ಲಿ ಕನ್ನಡ ಭಾಷೆ ಯಾವ ಸ್ಥಾನ ದಲ್ಲಿತ್ತು. ಮತ್ತು ನಿಜಾಂ ಸರ್ಕಾರದ ನಿರಂಕುಶಾಧಿಕಾರದಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿ ಹೇಗೆ ಧಮನಿಸಲ್ಪಟ್ಟಿದೆ ಎಂಬುದನ್ನು ಜನರಲ್ಲಿ ತಿಳುವಳಿಕೆಯನ್ನು ಮೂಡಿಸುತ್ತಿತ್ತು. ಅಲ್ಲದೆ ನಿಜಾಂ ವಿರುದ್ಧ ಉಗ್ರವಾದ ಲೇಖನಗಳನ್ನು ಬರೆಯುವುದರ ಮೂಲಕ ಜನರನ್ನು ಜಾಗೃತ ಗೊಳಿಸುತ್ತಿತ್ತು. ನಿಜಾಂ ಹಾಗೂ ರಜಾಕಾರರಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಹೇಗೆ ಪಾರುಮಾಡಿಕೊಳ್ಳಬೇಕು ಎನ್ನುವ ಕಿವಿಮಾತನ್ನು ಈ ಪತ್ರಿಕೆ ಬರೆದು ತಿಳಿಸುತ್ತಿತ್ತು. ಈ ಪತ್ರಿಕೆಗಳು ಇಂದಿಗೂ ರಂಗಂಪೇಟ ಕನ್ನಡ ಸಾಹಿತ್ಯ ಸಂಘದ ಪ್ರಸ್ತುತ ಅಧ್ಯಕ್ಷರಾದ ಎಂ.ಆರ್. ಬುದ್ಧಿವಂತ ಶೆಟ್ಟರ ಮನೆಯಲ್ಲಿ ನೊಡಲು ಇಂದಿಗೂ ಸಿಗುತ್ತದೆ. ಕನ್ನಡ ಸಾಹಿತ್ಯ ಸಂಘ ಆರಂಭಿಸುವುದರ ಜೊತೆಗೆ ಸಂಘದ ಕಾರ್ಯಚಟುವಟಿಕೆಗಳನ್ನು ಗುರಿ-ಉದ್ದೇಶಗಳನ್ನು ಪ್ರಕಟಿಸಿ ತಿಳಿಸುವಲ್ಲಿ ಅರುಣಾಮಾಸ ಪತ್ರಿಕೆ ಮಹತ್ವದ ಪಾತ್ರವನ್ನುವಹಿಸಿದೆ.

ಯಾವುದೇ ಒಂದು ಸಂಘದ ಬೆಳೆವಣಿಗೆಯೆನ್ನು ಅದರ ಕಾರ್ಯಚಟುವಟಿಕೆಗಳ ಮೂಲಕ ಅಳೆಯಲಾಗುತ್ತದೆ. ಸಂಘ ಸ್ಥಾಪನೆಯಾದಾಗಿನಿಂದ ನಾಡಹಬ್ಬ ಹಾಗೂ ಇತರ ವಾರ್ಷಿಕ ಉತ್ಸವಗಳ ಪ್ರಯುಕ್ತ ನಾಡಿನ ಪ್ರಮುಖ ಸಾಹಿತಿಗಳನ್ನು ಕರೆಯಿಸಿ ಉಪನ್ಯಾಸಗಳನ್ನು ವ್ಯದ್ಧಿಸಲಾಗುತ್ತಿತ್ತು. ವಾರ್ಷಿಕ ಆಚರಣೆಗಳನ್ನು ಮತ್ತು ಕನ್ನಡ ಸಂಸ್ಕೃತಿಯನ್ನು ಬೆಳೆಸುವ ಲೇಖನಗಳನ್ನು ಅರುಣಾಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು.

ಡ. ಸಾಹಿತ್ಯ ಸಂಘದ ಗ್ರಂಥಾಲಯ

ಈ ಭಾಗದ ಕನ್ನಡ ಭಾಷಿಕರ ಸಮಗ್ರ ಅಭಿವೃದ್ಧಿಯ ಕನಸಿನ ಕೂಸಾಗಿ ಕಾರ್ಯಾರಂಭಮಾಡಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಕನ್ನಡದ ಪ್ರಸಾರದ ಹಿನ್ನೆಲೆಯಲ್ಲಿ ಪುಸ್ತಕಗಳನ್ನು ಸಂಗ್ರಹಿಸಲು

ಸಂಘದ ಸದಸ್ಯರು ಕಾರ್ಯಪ್ರವೃತ್ತರಾದರು. ಬುದ್ಧವಂತ ಶೆಟ್ಟರು ಸಂಘ ಸ್ಥಾಪನೆಯಾಗುವುದಕ್ಕಿಂತ ಮುಂಚೆ ೪೦೦-೫೦೦ ಪುಸ್ತಕಗಳಿದ್ದವು. ಶ್ರೀ ಸಗರ ಕೃಷ್ಣಚಾರ್ಯರು ಬಂದ ಮೇಲೆ ಅವುಗಳಿಗೆ ಒಂದು ಸಾರ್ವಜನಿಕ ರೂಪವನ್ನು ನೀಡಬೇಕು ಎನ್ನುವ ಕನಸು ಹುಟ್ಟಿತು. ಹಾಗಾಗಿ ಸಂಘದ ಎಲ್ಲಾ ಹಿರಿಯರು ಹಾಗೂ ಸದಸ್ಯರು ಸೇರಿಕೊಂಡು ರಂಗಂಪೇಟೆಯ ಹೃದಯ ಭಾಗದಲ್ಲಿರುವ "ನಗರೇಶ್ವರ ದೇವಸ್ಥಾನದ ಆವರಣದಲ್ಲಿರುವ ಒಂದು ಕೋಣೆಯಲ್ಲಿ ಮೊಟ್ಟಮೊದಲು ಪುಸ್ತಕಗಳನ್ನು ಸಂಗ್ರಹಿಸಿದರು". ಮುಂದುವರಿದು ಸಂಘದ ಸದಸ್ಯರು ಹಾಗೂ ಊರಿನ ಸಾಹಿತ್ಯಭಿಮಾನಿಗಳಲ್ಲಿರುವ ಪುಸ್ತಕಗಳನ್ನು ಕೂಡ ಆ ಸಂಘದ ಗ್ರಂಥಾಲಯಕ್ಕೆ ತಂದು ಕೊಟ್ಟರು. ಹೀಗೆ ಪುಸ್ತಕಗಳ ಸಂಖ್ಯೆ ಹೆಚ್ಚತೊಡಗಿತು. ಅಂತಿಮಾವಾಗಿ ೨೫೦೦-೩೦೦೦ ಪುಸ್ತಕಗಳು ಈ ಸಂಘದ ಗ್ರಂಥಾಲಯದಲ್ಲಿ ಸಂಗ್ರಹವಾಗಿವೆ.

ಸ್ವತಂತ್ರ ಪೂರ್ವದ ನಿಜಾಂ ಆಳ್ವಿಕೆಯಲ್ಲಿ ಕನ್ನಡ ಪತ್ರಿಕೆಗಳನ್ನು ಓದುವುದೆ ಅಪರಾಧವಾಗಿತ್ತು. ಮತ್ತು ಕನ್ನಡದ ಕರಪತ್ರರಗಳನ್ನು ಕೈಯಲ್ಲಿ ಹಿಡಿದವರನ್ನು ಬಂಧಿಸುವಂತಹ ಪ್ರಕ್ಷುಬ್ಧ ವಾತಾವರಣ ವಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸಂಘದ ಗ್ರಂಥಾಲಯಕ್ಕೆ ಅನೇಕ ದಿನ ಪತ್ರಿಕೆಗಳು ವಾರಪತ್ರಿಕೆಗಳು ಮಾಸಪತ್ರಿಕೆಗಳನ್ನು ತರಿಸಲಾಗುತ್ತಿತ್ತು. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ಸಂಯುಕ್ತ ಕರ್ನಾಟಕ (ದಿನಪತ್ರಿಕೆ)
೨. ಕರ್ಮವೀರ (ವಾರ ಪತ್ರಿಕೆ)
೩. ಕಸ್ತೂರಿ (ಮಾಸ ಪತ್ರಿಕೆ)
೪. ಜೀವನ ಪತ್ರಿಕೆ
೫. ಜಯಂತಿ ಪತ್ರಿಕೆ
೬. ಪ್ರಪಂಚ ಪತ್ರಿಕೆ
೭. ಅಮರವಾಣಿ
೮. ಮಿಂಚಿನ ಬಳ್ಳಿ
೯. ಪ್ರಜಾಮತ
೧೦. ಕನ್ನಡ ನುಡಿ (ಕ.ಸಾ.ಪ)
೧೧. ಪಂಚಾಮೃತ

ಹೀಗೆ ಹಲವಾರು ಕ್ರಾಂತಿಕಾರಿ ಪತ್ರಿಕೆಗಳೂ, ಸ್ವಾತಂತ್ರಕ್ಕೆ ಸಂಬಂಧಿಸಿದ ಪತ್ರಿಕೆಗಳು ಈ ಸಂಘದ ಗ್ರಂಥಾಲಯದಲ್ಲಿರುತ್ತಿದ್ದವು. ಗ್ರಂಥಾಲಯವನ್ನು ಸಾರ್ವಜನಿಕರಿಗಾಗಿ ಓದಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿತ್ತು. ಯಾವುದೇ ಜಾತಿ-ಮತ ಎನ್ನುವ ಬೇಧ-ಭಾವವಿಲ್ಲದೆ ಓದುಗರಿಗೆ ಮುಕ್ತ ಅವಕಾಶ ನೀಡಲಾಗಿತ್ತು ಹಾಗೂ ಇನ್ನೊಂದು ವಿಶೇಷ ಸಂಗತಿಯಂದರೆ ರಂಗಂಪೇಟೆ ಗ್ರಾಮದಲ್ಲಿ ಶೇಕಡ ೫೦ ರಷ್ಟು ಜನ ಮುಸ್ಲಿಂ ಜನಾಂಗದವರಿದ್ದಾರೆ. ಅನೇಕ ಮುಸ್ಲಿಂರು ಗ್ರಂಥಾಲಯದ ಸದುಪಯೋಗಪನ್ನು ಪಡೆಯುತ್ತಿದ್ದರು. ಅಲ್ಲದೆ ಅನೇಕ ಮುಸ್ಲಿಂರು ಸಾಹಿತ್ಯ ಸಂಘದ ಸದಸ್ಯರು ಆಗಿದ್ದರು. ಮುಂಜಾನೆ ಹಾಗೂ ಸಾಯಂಕಾಲ ಓದುಗರು ಇಲ್ಲಿ ಬಂದು ತಮ್ಮ ಜ್ಞಾನ ದಾಹವನ್ನು ತಿರಿಸಿಕೊಳ್ಳುತ್ತಿದ್ದರು. ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳು,

ವಿಮರ್ಶೆಗಳು, ಉರ್ದು, ಹಿಂದಿ ಹಾಗೂ ಇಂಗ್ಲೀಷ್ ಗ್ರಂಥಗಳು ಕೂಡ ಲಭ್ಯವಿದ್ದವು. ಜೊತೆಗೆ ನಿಜಾಂ ಸರ್ಕಾರದ ಗೆಜೆಟೀಯರ್‌ಗಳನ್ನೂ ಕೂಡ ಗ್ರಂಥಾಲಯದಲ್ಲಿ ಸಂಗ್ರಹಿಸಲಾಗಿತ್ತು.

ಹೀಗೆ ಬೃಹದಾಕಾರದಲ್ಲಿ ಬೆಳೆದ ಗ್ರಂಥಾಲಯ ಸುಸಂಗತವಾಗಿ ನಡೆಯುತ್ತಾ ಬಂದಿತ್ತು. ಆದರೆ ಈಗ್ಗೆ ಐದು ವರ್ಷಗಳ ಹಿಂದೆ ಕೆಲವು ದುಷ್ಕರ್ಮಿಗಳ ದುಷ್ಕೃತ್ಯಕ್ಕೆ ಬೆಂಕಿಗೆ ಆಹುತಿಯಾಗಿತ್ತು. ಅದೃಷ್ಟವಶಾತ್ ಬೆಂಕಿ ಹತ್ತಿದ ಕೆಲವೇ ನಿಮಿಷಗಳಲ್ಲಿ ನಂದಿಸಲಾಯಿತು. ಕನ್ನಡವನ್ನು ನಿರ್ನಾಮ ಮಾಡಬೇಕು ಎನ್ನುವ ನಿಜಾಂ ಸರ್ಕಾರದ ಕುತಂತ್ರದಲ್ಲಿಯೇ ಕನ್ನಡವನ್ನು ಉಳಿಸಿ ಬೆಳಸಲು ಕಂಕಣಬದ್ಧವಾಗಿ ನಿಂತ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕಾರ್ಯ ಶ್ಲಾಘನೀಯ.

ಈ. ಅಭ್ಯಾಸ ಮಿತ್ರ ಮಂಡಳಿ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸದಸ್ಯರು ಸಾಹಿತ್ಯದ ಆಸಕ್ತಿ ಬೆಳೆಸಲು ಮತ್ತು ನಿರಂತರ ಚರ್ಚೆಗಾಗಿ 'ಅಭ್ಯಾಸ ಮಿತ್ರಮಂಡಳಿ'ಯನ್ನು ರಚನೆಮಾಡಿಕೊಂಡರು. ಎಂ.ಆರ್. ಬುದ್ಧಿವಂತ ಶೆಟ್ಟಿಯವರ ನೇತೃತ್ವದಲ್ಲಿ ಸಗರ ಕೃಷ್ಣಾಚಾರ್ಯ, ನಾಗಪ್ಪ ತ್ರಿವೇದಿ, ಸೋಮಶೇಖರ ಸುಂಕದ, ಶಾಂತಪ್ಪ ಬೂದಿಹಾಳ, ಜನಾರ್ಧನ ವಿಭೂತೆ ಮತ್ತು ಪ್ರಹ್ಲಾದರಾವ ಕುಳಗೇರಿ ಹೀಗೆ ಹಲವಾರ ಜನ ಸೇರಿ ಪ್ರತಿ ಭಾನುವಾರ ಮುಂಜಾನೆ ಸಭೆ ಸೇರುತ್ತಿದ್ದರು. ಪ್ರತಿಯೊಬ್ಬರು ಒಂದೊಂದು ವಿಷಯವನ್ನು ಆಯ್ಕೆಮಾಡಿಕೊಂಡು 'ನಗರೇಶ್ವರ ದೇವಾಲಯ'ದಲ್ಲಿ ಸಂಘದ ಕಛೇರಿ ಆವರಣದಲ್ಲಿ ಸೇರುತ್ತಿದ್ದರು. ಅಲ್ಲಿ ವಿಷಯವನ್ನು ಕುರಿತು ಚರ್ಚಿಸಲಾಗುತ್ತಿತ್ತು. ಕನ್ನಡ ಸಾಹಿತ್ಯವನ್ನು ಜನರಲ್ಲಿ ಬೆಳೆಸುವುದು ಈ ಮಂಡಳಿಯ ಉದ್ದೇಶವಾಗಿತ್ತು. ಪ್ರತಿ 'ಭಾನುವಾರ'ವು ಲಕ್ಷ್ಮೀಶನ ಜೈಮಿನಿಭಾರತ, ಪಂಪಭಾರತ, ಸಾಹಸಭೀಮ ವಿಜಯ, ಹರಿಶ್ಚಂದ್ರ ಕಾವ್ಯ, ಜನ್ನನ ಯಶೋಧರ ಚರಿತ್ರೆ, ಅಂಡಯ್ಯನ ಕಬ್ಬಿಗರ ಕಾವ್ಯ, ರಾಮಾಯಣದರ್ಶನಂ, ರಾಮಚಂದ್ರ ಚರಿತ್ರೆ ಪುರಾಣಂ ಹೀಗೆ ಮುಂತಾದ ಹಳೆಗನ್ನಡ ಕಾವ್ಯಗಳನ್ನು ಕಂಠಪಾಠ ಮಾಡುತ್ತಿದ್ದರು. ಮತ್ತು ಎಲ್ಲರು ಸೇರಿ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಈ ರೀತಿಯಾಗಿ ಸಂಘದಲ್ಲಿ ಅನೇಕ ಸದಸ್ಯರು ಹಳೆಗನ್ನಡದ ಸಾಹಿತ್ಯವನ್ನು ಕಾವ್ಯಗಳನ್ನು ಕಂಠಪಾಠ ಮಾಡಿದ್ದಲ್ಲದೆ ಆ ವಿಷಯದಲ್ಲಿ ಪ್ರಭುದ್ಧತೆಯನ್ನು ಪಡೆದವರಾಗಿದ್ದಾರೆ. ಈ ಮುಖಾಂತರವಾಗಿ ಸತತವಾಗಿ ಕನ್ನಡ ಸಾಹಿತ್ಯವನ್ನು ಬೆಳೆಸುವ ಕೆಲಸವನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸದಸ್ಯರು ಮಾಡುತ್ತಾ ಬರುತ್ತಿದ್ದಾರೆ.

ಫ. ಗಾಂಧೀ ಸ್ವಯಂ ಸೇವಾ ಸಂಘ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಯಾಗುವುದಕ್ಕಿಂತ ಮುಂಚೆಯೂ ಈ ಭಾಗದಲ್ಲಿ ರಜಾಕಾರರ ಹಾವಳಿ ಸರ್ವೆ ಸಾಮಾನ್ಯ ಎನ್ನುವಂತಿತ್ತು. ಸುರಪುರ ರಜಾಕಾರರ ಕಾರ್ಯಚಟುವಟಿಕೆಯ

ಕೇಂದ್ರವಾಗಿತ್ತು. ಈ ಕಾರಣಕ್ಕಾಗಿ ರಂಗಂಪೇಟೆ ಗ್ರಾಮದಲ್ಲಿ ಸಾಹಿತ್ಯ ಸಂಘ ಸ್ಥಾಪನೆಯಾದಾಗ ಡಿ. ಗೋವಿಂದಪ್ಪನವರ ನೇತೃತ್ವದಲ್ಲಿ ಗಾಂಧೀ ಸ್ವಯಂ ಸೇವಾ ಸಂಘವನ್ನು ರಚಿಸಿಕೊಂಡರು. ಈ ಸ್ವಯಂ ಸೇವಾ ಸಂಘದಲ್ಲಿ ಸುಮಾರು ೨೦-೨೫ ಸ್ವಯಂ ಸೇವಕರಿದ್ದರು. ಈ ಸಂಘದಲ್ಲಿ ಗ್ರಾಮದ ಹಿರಿಯರು, ವಿದ್ಯಾರ್ಥಿಗಳು ಸ್ವಯಂ ಆಸಕ್ತಿಯಿಂದ ಸದಸ್ಯತ್ವ ಪಡೆದು ಸೇವೆಸಲ್ಲಿಸುತ್ತಿದ್ದರು. ಸ್ವಯಂ ಸೇವಕರು ರಾತ್ರಿಯಿಡಿ ಊರನ್ನು ರಕ್ಷಣೆ ಮಾಡುವ ಕಾರ್ಯದಲ್ಲಿ ಬಹು ಪ್ರಮುಖವಾದ ಪಾತ್ರವಹಿಸಿದರು. ಪ್ರತಿಯೊಬ್ಬರು ಒಂದೊಂದು 'ಲಾಟಿ'ಯನ್ನು ಹೊಂದಿದ್ದರು. ಈ ಸ್ವಯಂ ಸೇವಾ ಸಂಘದ 'ರಾತ್ರಿಯ ಗಸ್ತಿನಿಂದ ಜನರು ನೆಮ್ಮದಿಯ ರಾತ್ರಿಗಳನ್ನು ಕಳೆಯುವಂತಿತ್ತು. ಊರಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಜಾಗೃತಿಯನ್ನು ಈ ಸಂಘವಹಿಸುತ್ತಿತ್ತು. 'ಲಾಟಿ' ಹಾಗೂ ಇತರ ಸಾಧನ ಸಲಕರಣೆಗಳನ್ನು ಕನ್ನಡ ಸಾಹಿತ್ಯ ಸಂಘದ ಹಳೆಯ ಕೊಠಡಿಯಲ್ಲಿ ಇಡಲಾಗುತ್ತಿತ್ತು.

೧೯೩೮ರಲ್ಲಿ ಹೈದ್ರಾಬಾದಿನ 'ನಾನೇಲ್'ನಗರದಲ್ಲಿ ನಡೆದ ಅಖಿಲ ಭಾರತೀಯ ಕಾಂಗ್ರೇಸ್ ಅಧಿವೇಶನದಲ್ಲಿ ಶಿಸ್ತನ್ನು ಕಾಪಾಡಲು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ 'ಸ್ವಯಂ ಸೇವಾ ಸಂಘ' ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿತು. ಅಧಿವೇಶನಕ್ಕೆ ಪೂರ್ವಭಾವಿಯಾಗಿಯೇ ಹೋಗಿ ಅಲ್ಲಿನ ಕೆಲಸ ಕಾರ್ಯಗಳಲ್ಲಿ ತೊಡಗಿ ಇಡೀ ಅಧಿವೇಶನ ಮುಗಿಯುವವರೆಗೂ ಶಿಸ್ತನ್ನು ಕಾಪಾಡಿದ ಕೀರ್ತಿ ಈ ಗಾಂಧೀ ಸ್ವಯಂ ಸೇವಾ ಸಂಘಕ್ಕೆ ಸಲ್ಲುತ್ತದೆ.

"ಸ್ವಾತಂತ್ರ್ಯ ಪೂರ್ವದಲ್ಲಿ ಇಂತಹ ಸಾಮಾಜಿಕ ಜಾಗೃತಿ ಕಾರ್ಯದಲ್ಲಿ ತೊಡಗಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಮೇಲೆ ನಿಜಾಂ ಸರ್ಕಾರ ತೀವ್ರ ನಿಗಾವಹಿಸಿತ್ತು. ರಜಾಕಾರರ ಹಾವಳಿ ತೀವ್ರವಾದಾಗ "ಸ್ವಯಂ ಸೇವಾ ಸಂಘದ ಕಾರ್ಯಚಟುವಟಿಕೆಗಳು ತೀವ್ರವಾದವು. ವಿಷಯವನ್ನು ತಿಳಿದ ನಿಜಾಂ ಸರ್ಕಾರ ಸ್ವಯಂ ಸೇವಾ ಸಂಘದ ನೇತಾರರಾದ ಡಿ. ಗೋವಿಂದಪ್ಪ, ಪ್ರದಾನಪ್ಪ ಮತ್ತು ಇತರ ಸದಸ್ಯರನ್ನು ಬಂಧಿಸಲಾಯಿತು. ಇವರನ್ನು ಮೂರು ವರ್ಷಗಳವರೆಗೂ ಜೈಲಿನಲ್ಲಿಡಲಾಯಿತು. 'ನೀವು ನಿಜಾಂ ಸರ್ಕಾರದ ವಿರುದ್ಧ ಪಿತೂರಿ ನಡೆಸುತಿದ್ದೀರಿ ಎಂದು ಕನ್ನಡ ಸಾಹಿತ್ಯ ಸಂಘದ ಕಛೇರಿಯನ್ನು ಶೋಧಿಸಲಾಗಿ ಅಲ್ಲಿ ಗಾಂಧೀ ಸ್ವಯಂ ಸೇವಾ ಸಂಘಕ್ಕೆ ಸಂಬಂಧಿಸಿದ 'ಲಾಟಿ'ಗಳು ಹಾಗೂ ಸ್ವಾತಂತ್ರ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ 'ಮಿಂಚಿನ ಬಳ್ಳಿ' ಪತ್ರಿಕೆಯನ್ನು ಮತ್ತು ಇತರ ವಸ್ತುಗಳ ಸಂಘದ ಕಛೇರಿಯಲ್ಲಿ ಸಿಕ್ಕಾಗ ಇವುಗಳ ಸಾಕ್ಷಿಗಳ ಮೇಲೆ ಸ್ವಯಂ ಸೇವಕ ಸದಸ್ಯರನ್ನು ಬಂದಿಸಲಾಯಿತು"[೧]. ಹೀಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಈ ಭಾಗದ ಜನರ ಜಾಗೃತಿಯ ಕೇಂದ್ರವಾಗಿ ಕೆಲಸಮಾಡಿದೆ.

೨. ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ರಂಗಂಪೇಟೆ ಸಾಹಿತ್ಯ ಸಂಘ

ಅ. ಕರ್ನಾಟಕ ಏಕೀಕರಣದಲ್ಲಿ ಸಂಘದ ಪಾತ್ರ

"ಮಾನವನಿಗೆ ಬದುಕುವುದಕ್ಕೆ ಅನ್ನ ಎಷ್ಟು ಅವಶ್ಯಕವೋ, ಅವನ ಸಾಂಸ್ಕೃತಿಕ ಜೀವನಕ್ಕೆ ಸಾಹಿತ್ಯವು ಅಷ್ಟೇ ಅವಶ್ಯಕ. ಸಾಹಿತ್ಯ ಸಂಸ್ಕೃತಿ ಮತ್ತು ಬದುಕಿನ ಸಹ ಸಂಬಂಧವನ್ನು ಮನವರಿಕೆ ಮಾಡಿ 'ಹಿಂದಿನ ಕತೆಯು ಏನೇ ಇರಲಿ ಇಂದು ಕನ್ನಡವು ಎರಡು ಕೋಟಿ ಪ್ರಜೆಗಳಲ್ಲಿ ಜೀವಂತವಾಗಿರುವ ಭಾಷೆ ಇಷ್ಟೊಂದು ದೊಡ್ಡ ಜನಾಂಗದ ನಿತ್ಯದ ವ್ಯವಹಾರ ಅವರ ಆಗು-ಹೋಗುಗಳ ಅವರ ಸಂಪಾದನೆ, ಅವರ ಜೀವನೋತ್ಕೃಷ್ಟತೆಯ ಸಾಧನೆಯೆಂದರೆ ಕನ್ನಡ. ಅಂತಯೇ ನಾವು ಕನ್ನಡಕ್ಕೆ ಬೆಲೆ ಕೊಡಬೇಕಾಗಿದೆಯಾಗಲಿ ಅವಿಚಾರ ಮೋಹದ ಅತೀರೇಕದಿಂದಲ್ಲ. ಕನ್ನಡ ಭಾಷೆಯ ಶ್ರೇಯಸ್ಸೆಂದರೆ ಕನ್ನಡ ಜನಾಂಗದ ಶ್ರೇಯಸ್ಸು ನುಡಿಯೇ ನಾಡಿನ ಜೀವ'"[೧೭]. ಈ ಕಾರಣದಿಂದ ನಾವು ನಮ್ಮ ಮೈಮನಗಳನ್ನು ಕನ್ನಡಮ್ಮನ ಊಳಿಗದಲ್ಲಿ ಸವೆಯಲು ಕಂಕಣಬದ್ಧರಾಗಬೇಕಾಗಿದ್ದ ಕಾಲ ಅದಾಗಿತ್ತು. ಈ ವೇಳೆಗಾಗಲೇ ಸಾಕಷ್ಟು ಎಚ್ಚರಗೊಂಡಿದ್ದ ಹೈದ್ರಾಬಾದ್ ಕರ್ನಾಟಕದ ಕನ್ನಡಿಗರನ್ನು ಮತ್ತಷ್ಟು ಕಾರ್ಯಸಾಧನೆಗೆ ಪ್ರೇರೆಪಿಸುವಂತ ಕೆಲಸ ಈ ಭಾಗದಲ್ಲಿ ಅನೇಕ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಕನ್ನಡ ಸಾಹಿತ್ಯ ಪರಿಷತ್‌ಗಳು ತಮ್ಮ ಕಾರ್ಯವನ್ನು ನಿರ್ವಹಿಸಿದ್ದವು. ಅಂತಹ ಸಂಘ-ಸಂಸ್ಥೆಗಳಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಒಂದಾಗಿತ್ತು.

೧೯೫೫ರಲ್ಲಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಏಕೀಕರಣದ ಬಿಸಿಗಾಳಿ ತುಂಬಿ ತುಳುಕುತ್ತಿತ್ತು. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಏಕೀಕರಣವನ್ನು ಬೆಂಬಲಿಸಿ ಹಲವು ಕಡೆ ಸಮಾರಂಭಗಳು, ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು. ಸುರಪುರ (ರಂಗಂಪೇಟೆ) ಸಂಸ್ಥಾನವು ಸ್ಥಾಪನೆಯಾದಾಗಿನಿಂದ ಈ ಭಾಗದಲ್ಲಿ ಸ್ವರಾಜ್ಯ, ಸ್ವಧರ್ಮ ಮತ್ತು ಕನ್ನಡ ಭಾಷೆಯ ರಕ್ಷಣೆಗಾಗಿ ಎದೆಕೊಟ್ಟು ನಿಂತು ಕೆಲಸ ಕಾರ್ಯಗಳನ್ನು ಮಾಡುತ್ತಾ ಬರಲಾಗಿತ್ತು. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಆರಂಭವಾದಾಗಿನಿಂದ ನಾಡಹಬ್ಬಗಳ ಮೂಲಕ, ದತ್ತಿ ಉಪನ್ಯಾಸಗಳ ಮೂಲಕ, ಕವಿಗೋಷ್ಠಿ, ಸಾಹಿತ್ಯ ಗೋಷ್ಠಿಗಳ ಮೂಲಕ ಕನ್ನಡ ಕಟ್ಟುವ ಕೆಲಸದಲ್ಲಿ ನಿರಂತರ ತಲ್ಲಿನವಾಗಿತ್ತು. ಆದರೆ "೧೯೫೫ರ ನಾಡಹಬ್ಬದಲ್ಲಿ ವಿಶೇಷವಾಗಿ ಕರ್ನಾಟಕ ಏಕೀಕರಣಕ್ಕೆ ವಿಶೇಷ ಒತ್ತು ಕೊಟ್ಟು ಸಮಾರಂಭವನ್ನು ಆಯೋಜಿಸಲಾಗಿತ್ತು.

ಅಕ್ಟೋಬರ್ ೧೬ನೇ ೧೯೫೫ ರಂದು ಐದು ದಿನಗಳ ಕಾಲ ನಾಡಹಬ್ಬದ ಆಚರಣೆ ಆರಂಭವಾಯಿತು. 'ಕರ್ನಾಟಕ ಏಕೀಕರಣ' ವಿಷಯವನ್ನು ಕುರಿತು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಸತತ ಐದು ದಿನಗಳವರೆಗೂ ಪ್ರತಿದಿನವು ಕಾರ್ಯಕ್ರಮಗಳು ನಡೆಯುತ್ತಿದ್ದವು. ಹೈದ್ರಾಬಾದ್ ಕರ್ನಾಟಕದ ವಿವಿಧ ಭಾಗಗಳಿಂದ ಜನರು ಸಾಗರೋಪಾದಿಯಲ್ಲಿ ಸಮಾರಂಭಕ್ಕೆ ಬಂದು ಸೇರಿತ್ತು. ಮಹಿಳೆಯರು ಮಕ್ಕಳನ್ನು ಕಟ್ಟಿಕೊಂಡು ಬಂದು ಸಮಾರಂಭದಲ್ಲಿ ಭಾಗವಹಿಸುತ್ತಿದ್ದರು.

ಮೊದಲ ದಿನ ನಾಡಮಾತೆ ಭುವನೇಶ್ವರಿ ದೇವಿಯ ಭಾವಚಿತ್ರ ಮೆರವಣಿಗೆಯೊಂದಿಗೆ ಅಧಿಕೃತ ವಾಗಿ ಕಾರ್ಯಕ್ರಮ ಆರಂಭವಾಗುತ್ತಿತ್ತು. ಸತತ ಮೂರು ದಿನಗಳ ಕಾಲ ಕೀರ್ತನೆಗಳು, ಉಪನ್ಯಾಸ ಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲಾಯಿತು. ಕೊನೆಯ ಎರಡು ದಿನ 'ಕರ್ನಾಟಕ ಏಕೀಕರಣದ ಅವಶ್ಯಕತೆ ಮತ್ತು ಕರ್ನಾಟಕದ ಹಿರಿಮೆ' ಎಂಬ ವಿಷಯಗಳ ಮೇಲೆ ಶ್ರೀ ಎಂ.ಜಿ. ಕುಲ್ಕರ್ಣಿ ಮತ್ತು ಮದ್ವರಾಜ್ ಅವರಿಂದ ಭಾಷಣ ಹಾಗೂ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಉಪನ್ಯಾಸದುದ್ದಕ್ಕೂ ಭಾರತಮಾತೆ, ಕರ್ನಾಟಕ ಮಾತೆಯ ಕೂಗುಗಳು ಚಪ್ಪಾಳಿಗಳ ಸುರಿಮಳೆ ತುಂಬಿ ತುಳುಕುತ್ತಿತ್ತು.

ಕೊನೆಯ ದಿನ ಸಾರ್ವಜನಿಕ ಸಭೆಯಲ್ಲಿ ಗುಲಾಂ ರಸೂಲ ಸಾಹೇಬರಿಂದ ಲಾವಣಿಗಳನ್ನು ಹಾಡಿಸಲಾಯಿತು. ಮತ್ತೆ ಎಂ.ಆರ್. ಬುದ್ಧಿವಂತಶೆಟ್ಟರಿಂದ ಜನ್ನನ 'ಯಶೋಧರ ಚರಿತೆ' ಕುರಿತು ಮಾತನಾಡಿದರು. ಶ್ರೀ ರುದ್ರಸ್ವಾಮಿಗಳು ಹರಿಹರನ 'ಗಿರಿಜಾಕಲ್ಯಾಣ'ದ ಕುರಿತು ಮಾತನಾಡಿದರು.

ಈ ರೀತಿಯಾಗಿ ೧೯೫೫ರ ನಾಡಹಬ್ಬ ಆಚರಣೆ ಬಹಳ ವಿಶೇಷತೆಯಿಂದ ಮತ್ತು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಭಾಗದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮುಖ್ಯ ಒತ್ತಾಸೆಯಾಗಿತ್ತು"[೧೯].

ಹೀಗೆ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು ತೀವ್ರ ಗೊಳಿಸಲಾಗಿತ್ತು. ಅದರ ಜೊತೆಗೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಸಂರಕ್ಷಣೆ ಹಾಗೂ ಪೋಷಣೆ ಯಲ್ಲಿ ಸುದೀರ್ಘವಾದ ಕಾರ್ಯಕ್ರಮಗಳು ಇನ್ನು ನಡೆಯುತ್ತಲಿವೆ.

ಸಗರ ನಾಡಿಗೆ ವರಕವಿ ದ.ರಾ. ಬೇಂದ್ರೆ ದರ್ಶನ

"೧೯೫೬ರಲ್ಲಿ ದ.ರಾ. ಬೇಂದ್ರೆಯವರು ಸೋಲ್ಲಾಪುರದಲ್ಲಿ ಇದ್ದರು. ಬೇಂದ್ರೆಯವರಿಗೆ ಕನ್ನಡ ಸಾಹಿತ್ಯ ಸಂಘದ ಸ್ಥಾಪನಾ ಸದಸ್ಯರು ಹಾಗೂ ಇಂದಿನ ಅಧ್ಯಕ್ಷರಾದ ಎಂ.ಆರ್. ಬುದ್ಧಿವಂತಶೆಟ್ಟರು ಸತತ ಹತ್ತು ಹನ್ನೆರಡು ವರ್ಷಗಳ ಕಾಲ ಪತ್ರವ್ಯವಹಾರಮಾಡಿ ನಾಡಹಬ್ಬಕ್ಕೆ ಆಹ್ವಾನಿಸಿದರೂ ಬೇಂದ್ರೆಯವರು ರಂಗಂಪೇಟೆಗೆ ಬಂದಿರಲಿಲ್ಲ. ಸೋಲ್ಲಾಪುರಕ್ಕೆ ಮೂರು ಜನ ಸಂಘದ ಸದಸ್ಯರನ್ನು ಕಳುಹಿಸಲಾಗಿ ಕೊನೆಗೆ ಒಪ್ಪಿಕೊಂಡು ಬಂದರು. ೧೯೫೬ ಜನವರಿ ೩ ಮತ್ತು ೪ ರಂದು ಎರಡು ದಿನಗಳವರೆಗೆ ಮುಖ್ಯ ಅಥಿತಿಗಳಾಗಿ ಆಗಮಿಸದ್ದರು.

ಅವರು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ 'ಮಿರಿಯಾಲ ರಂಗಯ್ಯ ಸ್ಮಾರಕ' ಉಪನ್ಯಾಸ ಮಾಲೆಯನ್ನು ಉದ್ಘಾಟಿಸಿ ಮಾತನಾಡಿತ್ತಾ "ನವ ಕರ್ನಾಟಕದ ನಿರ್ಮಾಣದಲ್ಲಿ ನಮ್ಮ ಕರ್ತವ್ಯವನ್ನು ಕುರಿತು ಮನನೀಯವಾಗಿ ಮಾತನಾಡಿ ನಾವು ಹೇಗೆ ನಡೆದುಕೊಳ್ಳಬೇಕು. ಮತ್ತು ಭಾವಿ ಕರ್ನಾಟಕವನ್ನು ಹೇಗೆ ರಚಿಸಿಕೊಳ್ಳಬೇಕು ಎಂದು ತಿಳಿಸಿ ಕರ್ನಾಟಕದ ಹಿರಿಯರನ್ನು ಸ್ಮರಿಸಿದರು. ಈ ಮುಖಾಂತರವಾಗಿ ಕರ್ನಾಟಕ ಏಕೀಕರಣದ ತಯಾರಿ ಕುರಿತು ಈ ಭಾಗದ ಜನರಿಗೆ ಕಿವಿಮಾತು

ಹೇಳಿದರು. ಆ ಸಮಾರಂಭದಲ್ಲಿ ಈ ಭಾಗದ ಪ್ರಸಿದ್ಧ ಸಂಶೋಧಕರಾದ 'ಕಪಟರಾಳ ಕೃಷ್ಣರಾಯರು' ಅಧ್ಯಕ್ಷತೆಯನ್ನು ವಹಿಸಿದ್ದರು.

ಎರಡನೆಯ ದಿನ ಸಂಘದ ಗ್ರಂಥಾಲಯಕ್ಕೆ ಬೇಟಿಕೊಟ್ಟು ಪುಸ್ತಕ ಸಂಗ್ರಹವನ್ನು ನೋಡಿ ದಿಗ್ಭ್ರಮೆಗೊಂಡು ಇಂಥ ಸುವರ್ಣಾವಕಾಶವನ್ನು ಕಾಣಲು ನಾನು ಹತ್ತು ಹನ್ನೆರಡು ವರ್ಷಗಳು ತಡಮಾಡಿದ್ದು ನನ್ನ ದೌರ್ಭಾಗ್ಯ ಎಂದು ತಮ್ಮ ಅಳಲನ್ನು ತೋಡಿಕೊಂಡರು. ಜೊತೆಗೆ ಎಂದಿನ ತಮ್ಮ ಮನೋಹರವಾದ ಶೈಲಿಯಲ್ಲಿ ಕಾವ್ಯವಾಚನ ಮಾಡಿದರು. ಅಂದು ಸಾಯಂಕಾಲ ಸಮಾರೂಪ ಸಮಾರಂಭದಲ್ಲಿ ಲಕ್ಷ್ಮೀಶನ ಕಾಲ, ದೇಶ ಮುಂತಾದವುಗಳನ್ನು ಕುರಿತು ತಾವು ನಡೆಸಿದ ಸಂಶೋಧನೆಯ ಕುರಿತು ತಿಳಿಸುತ್ತಾ ಜೈಮಿನಿ ಭಾರತದಲ್ಲಿದ್ದ ಸ್ವಾರಸ್ಯವನ್ನು ಹೃದಯಂಗಮವಾಗಿ ವರ್ಣಿಸಿದರು''[೧೯].

ಹೀಗೆ ಮೊಟ್ಟ ಮೊದಲ ಬಾರಿಗೆ ಬೇಂದ್ರೆಯವರು ಬೇಟಿನೀಡಿ ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು. ಕನ್ನಡ ನಾಡಿನ ಸಂಸ್ಕೃತಿಯನ್ನು ರಕ್ಷಿಸುವುದು ನಿಮ್ಮ ಜವಬ್ದಾರಿ ಯಾಗಿದೆ ಎಂದು ಕಿವಿಮಾತು ಹೇಳಿದರು.

೩. ಕರ್ನಾಟಕ ಏಕೀಕರಣ ನಂತರದ ಬೆಳವಣಿಗೆ

ಅ. ಕನ್ನಡದ ಏಳಿಗೆಗಾಗಿ ಸಾಹಿತ್ಯಿಕ ಚಟುವಟಿಕೆಗಳು

ಒಂದು ಪ್ರಭುತ್ವದ ವಿರುದ್ಧ ಕನ್ನಡ ನಾಡು-ನುಡಿ ಸಂಸ್ಕೃತಿ ಬೆಳವಣಿಗೆಯ 'ಗುರಿಯನ್ನು ಇಟ್ಟುಕೊಂಡು' ಕನ್ನಡದ ಬದ್ಧತೆಯ ಮೇಲೆಯೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಲಾಯಿತು. ಹಲವಾರು ಉತ್ಸವಗಳ ಮೂಲಕ, ಉಪನ್ಯಾಸಗಳ ಮೂಲಕ, ಆಚರಣೆಗಳ ಮೂಲಕ ಕನ್ನಡವನ್ನು ಬೆಳೆಸುವ ಕೆಲಸ ಈ ಸಂಘದ್ದಾಗಿತ್ತು. ಸತತ ೬೫ ವರ್ಷಗಳುದ್ದಕ್ಕೂ ಅನೇಕ ಕಾರ್ಯಕ್ರಮಗಳಲ್ಲಿ ಕನ್ನಡದ ಪಾಂಡಿತ್ಯ ಪೂರ್ಣವಿದ್ವತ್ ಪೂರ್ಣ ಮಹಾನ್ ಸಾಹಿತಿಗಳನ್ನು ಕರೆಯಿಸಿ ಈ ಭಾಗದ ಜನರಿಗೆ ಪರಿಚಯಿಸುವುದು. ಪ್ರತಿ ವರ್ಷವು ಹೊಸ ಹೊಸ ಮುಖಗಳನ್ನು ಕರೆತರುವುದು ಸಂಘದ ವಿಶೇಷ ಕಾರ್ಯವಾಗಿತ್ತು. ೧೯೪೩ರಿಂದಲೂ ಈ ಕೆಳಗಿನ ಕಾರ್ಯಕ್ರಮಗಳ ಮೂಲಕ ಸಾಹಿತ್ಯದ ಸೂಗ್ಗಿಯ ರಸದೌತಣವನ್ನು ಉಣಬಡಿಸಿದರು. ಈ ಮೂಲಕ ಕನ್ನಡವನ್ನು ಬೆಳೆಸುವಲ್ಲಿ ಸಂಘ ನಿರತವಾಗಿದೆ.

೧. ಅರುಣಾ ಕೈಬರಹ ಮಾಸ ಪತ್ರಿಕೆ

ಒಂದು ಜಗದ ಒಂದು ಯುಗದ ಒಂದು ಪ್ರಾಂತದ ಸಮಾಜವನ್ನು ಜಾಗೃತಗೊಳಿಸುವ ಹಲವಾರು ಅಸ್ತ್ರಗಳಲ್ಲಿ ಪತ್ರಿಕೆಯು ಒಂದಾಗಿದೆ. ಸಂಪೂರ್ಣ 'ಉರ್ದು' ಮಯವಾಗಿರುವ ಈ ಭಾಗವನ್ನು ಕನ್ನಡಮಯವಾಗಿ ಮಾಡಲು ಈ ಭಾಗದ ತೆರೆಯ ಮರೆಯ ಎಲೆಮರೆಯ ಕಾಯಿಯೆಂತಿದ್ದ ಸಾಹಿತಗಳ ಪ್ರತಿಭೆಯನ್ನು ಸೂಕ್ತರೀತಿಯಲ್ಲಿ ಹೊರ ಹಾಕಲು ರಂಗಂಪೇಟೆ ಕನ್ನಡ

ಸಾಹಿತ್ಯ ಸಂಘದ 'ಅರುಣಾ ಮಾಸ ಪತ್ರಿಕೆ' ಒಂದು ವೇದಿಕೆಯಾಗಿತ್ತು. ಕವಿಗಳ, ಸಾಹಿತಿಗಳ ಪರಿಚಯದೊಂದಿಗೆ ಅವರ ಕಥೆ, ಕವನ, ಲೇಖನಗಳನ್ನು ಪ್ರಕಟಿಸುತ್ತಿದರು. ಹಾಗೂ ಸಂಘ ಸ್ಥಾಪನೆಯಾದದ್ದು ಸ್ವಾತಂತ್ರ್ಯ ಪೂರ್ವಕಾಲವಾಗಿದ್ದರಿಂದ ಈ ಭಾಗದ ಜನರನ್ನು ಸ್ವಾತಂತ್ರ್ಯದತ್ತ ಕೊಂಡ್ಯುಯಲು ಸ್ವಾಭಿಮಾನಗಳನ್ನಾಗಿ ಮಾಡಲು ಬೇಕಾದಂತ ವಾತಾರವಣವನ್ನು ರೂಪಿಸಿದ್ದ ಈ ಪತ್ರಿಕೆ ಮುಖಾಂತರ ಹೈದ್ರಾಬಾದ್ ನಿಜಾಂನ ಹಾಗೂ ಉರ್ದುವಿನ ವಿರುದ್ಧ ಜನರನ್ನು ಎತ್ತಿ ಕಟ್ಟುವ ಕೆಲಸದಲ್ಲಿಯೂ ನಿರತವಾಗಿತ್ತು.

೨. ವಾರ್ಷಿಕ ಆಚರಣೆಗಳು

ರಂಗಂಪೇಟೆ ಕನ್ನಡ ಸಂಘವು ಈ ವಾರ್ಷಿಕ ಆಚರಣೆಗಳ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿಕಾಸದ ಕೆಲಸದಲ್ಲಿ ನಿರಂತರವಾಗಿದೆ. ನಾಡಹಬ್ಬ, ವಾರ್ಷಿಕೋತ್ಸವ, ಸ್ಮಾರಕೋಪನ್ಯಾಸ ಮಾಲೆಗಳು, ಕರ್ನಾಟಕ ರಾಜ್ಯೋತ್ಸವ, ಕವಿಗೋಷ್ಠಿ ಸಾಹಿತ್ಯಗೋಷ್ಠಿ ಸಂಗೀತಗೋಷ್ಠಿ, ರಾಷ್ಟ್ರ ನಾಯಕ, ಗಣ್ಯವ್ಯಕ್ತಿಗಳ ದಿನಾಚರಣೆಗಳು, ನಾಟಕೋತ್ಸವ ಮತ್ತು ಗಜಾನನೋತ್ಸವ ಹೀಗೆ ಹಲವಾರು ವಾರ್ಷಿಕ ಆಚರಣೆಗಳನ್ನು ಆಚರಿಸುತ್ತಿದೆ.

೩. ಪ್ರಕಟಣೆ ಮತ್ತು ಪ್ರಸಾರ

ಸಗರನಾಡಿನಿಂದ ಸಾಹಿತ ಲೋಕಕ್ಕೆ ಕೊಡುಗೆಯನ್ನು ನೀಡುವ ಉದ್ದೇಶದಿಂದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸಂಸ್ಥಾಪನ ಸದಸ್ಯರು 'ಅರುಣಾ ಗ್ರಂಥಮಾಲೆ'ಯನ್ನು ಪ್ರಕಣೆಗೋಸ್ಕರ ಆರಂಭಿಸಿದರು. ನಂತರದ ದಿನಗಳಲ್ಲಿ 'ಶ್ರೀ ಎಂ.ಆರ್. ಬುದ್ದಿವಂತಶೆಟ್ಟರು ಶ್ರೀ ಮಿರಿಯಾಲ ರಂಗಯ್ಯ ಸ್ಮಾರಕ ಮಾಲೆ'ಯನ್ನು ಆರಂಭಿಸಿದರು. ಹೀಗೆ ಇದುವರೆಗೂ ೧೪ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದೆ.

೪. ಕನ್ನಡ 'ಕಾವಾ' ಮತ್ತು ಜಾಣ ಪರೀಕ್ಷಾ ಕೇಂದ್ರ

ಸಾಹಿತ್ಯ ಸಂಘ ಸ್ಥಾಪನೆಯಾದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ ನಡೆಸುವ 'ಕಾವಾ ಮತ್ತು ಜಾಣ' ಪರೀಕ್ಷೆಗಳನ್ನು ನಡೆಸಲು ಪರವಾನಿಗೆಯನ್ನು ಪಡೆದುಕೊಂಡರು. ಪರಿಕ್ಷೆಗೆ ಉಪಯುಕ್ತವಾದ ತರಗತಿಗಳನ್ನು ಈ ಸಂಘದ ಸದಸ್ಯರು ನೀಡುತ್ತಿದ್ದರು. ಜೊತೆಗೆ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಗಳನ್ನು ಕೊಡುವುದರ ಮೂಲಕ ಪರೀಕ್ಷೇಗೆ ತಯಾರಾಗುವಂತೆ ಎಲ್ಲಾ ಸಹಾಯಗಳಿಗೆ ಸಂಘ ವ್ಯವಸ್ಥೆ ಮಾಡಿಕೊಡುತ್ತಿತ್ತು.

೫. ಗಾಂಧೀ ಸ್ವಯಂ ಸೇವಾ ಸಂಘ

ಕೇವಲ ಸಾಹಿತ್ಯ ಸೇವೆಗೆ ಮಾತ್ರ ಮಿಸಲಾಗಿರದೆ ಸಾಮಾಜಿಕ ಕಾರ್ಯಗಳಲ್ಲಿ ಈ ಸಂಘ ಸೇವೆ ಸಲ್ಲಿಸುತ್ತಿತ್ತು. ಆ ದೃಷ್ಟಿಯಿಂದಲೇ ಡಿ. ಗೋವಿಂದಪ್ಪನವರ ನೇತೃತ್ವದಲ್ಲಿ ೨೦-೨೫ ಸ್ವಯಂ ಸೇವಕರು ಇದರಲ್ಲಿದ್ದರು. ಇವರಲ್ಲಿ ವಿದ್ಯಾರ್ಥಿಗಳು, ಯುವಕರು, ಕೂಡ ಸದಸ್ಯರಾಗಿದ್ದರು.

ರಾತ್ರಿಯಿಡಿ ಊರನ್ನು ಗಸ್ತು ತಿರುಗುತ್ತಿದ್ದರು. ಎಲ್ಲಾ ಸ್ವಯಂ ಸೇವಕರಲ್ಲಿ ಒಂದೊಂದು 'ಲಾಟಿ' ಇರುತ್ತಿತ್ತು. ಅನೇಕ ಊರಿನ ನ್ಯಾಯ-ಪಂಚಾಯಿತಿಗಳನ್ನು ಈ ಸ್ವಯಂ ಸೇವಾ ಸಂಘದ ಅಡಿಯಲ್ಲಿ ನಡೆಸಲಾಗುತ್ತಿತ್ತು. ಈ ಕೆಲಸದಲ್ಲಿ ಶ್ರೀ ರಾಮಣ್ಣಬೋಡ ಪ್ರಮುಖ ಪಾತ್ರವಹಿಸುತ್ತಿದ್ದರು.

೬. ಪ್ರಶಸ್ತಿ ಮತ್ತು ಸನ್ಮಾನಗಳನ್ನು ನೀಡುವುದು.

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಪ್ರತಿ ವರ್ಷವು ಕನ್ನಡ ಸೇವೆ, ಸಾಮಾಜಿಕ ಸೇವೆ, ಸಾರ್ವಜನಿಕ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಇಲ್ಲಿಗೆ ಕರೆಯಿಸಿ ಪ್ರಶಸ್ತಿ ಹಾಗೂ ಸನ್ಮಾನಗಳನ್ನು ನೀಡುವುದರ ಮೂಲಕ ಅವರ ಕಾರ್ಯಚಟುವಟಿಗೆಳನ್ನು ಪ್ರೋತ್ಸಾಹಿಸುತ್ತಾರೆ.

೭. ಗ್ರಂಥಾಲಯ

ಸರ್ಕಾರದ ಯಾವುದೇ ಸಹಾಯ ಧನವಿಲ್ಲದೆ ಊರಿನ ಗಣ್ಯವ್ಯಕ್ತಿಗಳ ಸಾಹಿತ್ಯಸಕ್ತರಿಂದ ಗ್ರಂಥಾಲಯ ಆರಂಭವಾಯಿತು, ಗ್ರಂಥಾಲಯದಲ್ಲಿ ಸುಮಾರು ೨೫೦೦-೩೦೦೦ ಪುಸ್ತಕಗಳ ಸಂಗ್ರಹವಿದೆ. ಕನ್ನಡ ಸಾಹಿತ್ಯದ ಪುಸ್ತಕಗಳ ಉಗ್ರಾಣವೇ ಸಂಘದ ಗ್ರಂಥಾಲಯವಾಗಿತ್ತು. ಜೊತೆಗೆ ದಿನಪತ್ರಿಕೆಗಳು, ವಾರಪತ್ರಿಕೆಗಳು ಹಾಗೂ ಮಾಸಪತ್ರಿಕೆಗಳು ತರಿಸಲಾಗುತ್ತದೆ. ಇಲ್ಲಿ ಕನ್ನಡ, ಉರ್ದು, ಹಿಂದಿ, ಇಂಗ್ಲೀಷ್ ಭಾಷೆಯ ಕೃತಿಗಳನ್ನು ಸಂಗ್ರಹಿಸಲಾಗಿದೆ. ಹಾಗೂ ನಿಜಾಂ ಸರ್ಕಾರದ ಗ್ಯಾಸೆಟಿಯೆರ್‌ಗಳು ಕೂಡ ಇಲ್ಲಿ ಕಂಡುಬರುತ್ತವೆ. ಹೀಗೆ ಕನ್ನಡ ಸಾಹಿತ್ಯ ದಾಹವನ್ನು ತಿರಿಸಿಕೊಳ್ಳಲು ಈ ಭಾಗದ ಸಾಹಿತಿಗಳು ಯುವಕರು ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಂಘದ ಗ್ರಂಥಾಲಯದ ಸದ್ಬಳಿಕೆ ಮಾಡಿಕೊಳ್ಳುತ್ತಾರೆ.

೮. ಅಭ್ಯಾಸ ಮಿತ್ರಮಂಡಳಿ

ಸಾಹಿತ್ಯ ಸಂಘದ ಸದಸ್ಯರು ಸಾಹಿತ್ಯದ ಆಸಕ್ತಿ ಅಭಿರುಚಿ ಬೆಳೆಸಲು ನಿರಂತರ ಚರ್ಚೆಗಾಗಿ ಆ ಅಭ್ಯಾಸ ಮಂಡಳಿಯನ್ನು ರಚಿಸಿಕೊಂಡಿದ್ದರು. ಈ ಮಂಡಳಿಯ ಸದಸ್ಯರು ಪ್ರತಿ 'ಭಾನುವಾರ' ಒಂದೊಂದು ವಿಷಯವನ್ನು ಕುರಿತು ಚರ್ಚೆ ನಡೆಸುತ್ತಿದ್ದರು ಹಾಗೂ ಪ್ರಾಚೀನ ಕನ್ನಡ ಕಾವ್ಯಗಳನ್ನು ಕಂಠಪಾಠ ಮಾಡುತ್ತಿದ್ದರು ಹಾಗೂ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಹೀಗೆ ಸದಸ್ಯರು ಹಳೆಗನ್ನಡ ಸಾಹಿತ್ಯದ ಮೇರು ಪರ್ವತಗಳಾಗಿ ಬೆಳೆದಿದ್ದಾರೆ.

೯. ಪ್ರತಿಭಾ ಪುರಸ್ಕಾರ ಯೋಜನೆ

ಈ ಭಾಗದ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಪುರಸ್ಕರಿಸಿ ಪ್ರೋತ್ಸಾಹಿಸಲು ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ನೀಡುವ ಯೋಜನೆಯನ್ನು ಕೂಡ ಆರಂಭಿಸಿ ಮುನ್ನಡಿಸಿಕೊಂಡು ಬರುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಸ್ಪರ್ಧೆಯನ್ನು ಬೆಳಸಲು ಅನುಕೂಲಕರವಾದ ಕೆಲಸವನ್ನು ಮಾಡುತ್ತಿದೆ.

೧೦. ಪ್ರಕಟಣಾ ಮಾಲೆ

ಸಂಘ ಸ್ಥಾಪನೆಯಾದಾಗಿನಿಂದಲೂ ಪುಸ್ತಕಗಳನ್ನು ಪ್ರಕಟಿಸುವ ಉದ್ದೇಶದಿಂದ ಅರುಣಾ ಗ್ರಂಥಮಾಲೆಯನ್ನು ಆರಂಭಿಸಲಾಯಿತು. ನಂತರದಲ್ಲಿ 'ಮಿರಿಯಾಲ ರಂಗಯ್ಯ ಸ್ಮಾರಕ' ಮಾಲೆಯನ್ನು ಆರಂಭಿಸಲಾಯಿತು. ಹೀಗೆ ಒಟ್ಟಾರೆ ೧೪ ಕೃತಿಗಳನ್ನು ಇಲ್ಲಿಯವರೆಗೆ ಹೊರತಂದಿದೆ.

೧೧. ೧೯೭೧-೭೨ರಲ್ಲಿ ಗೋಕಾಕ ಚಳುವಳಿ

ಗೋಕಾಕ್ ಚಳವಳಿಯ ಕಾವು ಕರ್ನಾಟಕದ ಎಲ್ಲಾ ಮೂಲೆಗಳಲ್ಲಿ ಮುಗಿಲು ಮುಟ್ಟಿತ್ತು ಡಾ. ರಾಜಕುಮಾರ್ ಅವರು ಈ ಚಳುವಳಿಯ ಅಂಗವಾಗಿ ಶಹಾಪುರಕ್ಕೆ ಆಗಮಿಸಿದ್ದರು. ಆಗ ಸಂಘವು ಚಳುವಳಿಯನ್ನು ಬೆಂಬಲಿಸಿ ಒಂದು ವ್ಯಕ್ತಿಯಂತೆ ಚಳುವಳಿಯಲ್ಲಿ ಭಾಗವಹಿಸುವುದರ ಮೂಲಕ ಡಾ. ರಾಜಕುಮಾರ್ ಅವರನ್ನು ಬೆಂಬಲಿಸಿತ್ತು. ಹೀಗೆ ಈ ಸಂಘವು ತನ್ನ ಕನ್ನಡದ ಬಗೆಗಿನ ಅಭಿಮಾನವನ್ನು ಎತ್ತಿಹಿಡಿದಿದ್ದನ್ನು ನೆನಪಿಸಿಕೊಳ್ಳಬಹುದು.

ಹೀಗೆ ನಿಜಾಂ ಸರ್ಕಾರದ ರಾಜ್ಯ ಭಾಷೆಯಾದ 'ಉರ್ದು'ವಿನಿಂದ ಕನ್ನಡವನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರವಹಿಸಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸ್ಥಳೀಯರ ಸಹಾಯದಿಂದ ಈ ಕನ್ನಡದ ಕೈಂಕರ್ಯದಲ್ಲಿ ನಿರತವಾಗಿದೆ. ಇದಕ್ಕೆ ಸ್ಥಳೀಯ ಆಜಾದ್ ಯುವಕ ಸಂಘ ಹಾಗೂ ಇತರ ಸಂಘ-ಸಂಸ್ಥೆಗಳ ಸಹಾಯ ಸಹಕಾರವನ್ನು ಮರೆಯುವಂತಿಲ್ಲ.

ಬ. ಕನ್ನಡ 'ಕಾವಾ' ಮತ್ತು 'ಜಾಣ' ಪರೀಕ್ಷೆಗಳ ಮೂಲಕ ಕನ್ನಡದ ಬೆಳವಣಿಗೆ

ಈ ಭಾಗದಲ್ಲಿ ಉರ್ದು ಬಾಷೆಯ ಶಾಲೆಗಳು ಆರಂಭವಾದರೂ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಯಲು ಅವಕಾಶವಿತ್ತಾದರೂ ಅದು ಕೇವಲ ಮಾತನಾಡುವ ಭಾಷೆಯಾಗಿ ಉಳಿದುಕೊಂಡಿತ್ತು. ಮರುಭೂಮಿಯಲ್ಲಿನ ಯಾಸಿಸ್ಸ್‌ಗಳಂತೆ ಅಲ್ಲಲ್ಲಿ ಮಠಗಳಲ್ಲಿ ಮತ್ತು ಗಾವಂಟಿ ಶಾಲೆಗಳಲ್ಲಿ ಕನ್ನಡ ಭೋಧನೆಯನ್ನು ಮಾಡುತ್ತಿದ್ದರು. ಈ ಭಾಗದಲ್ಲಿ ಹಿಂದೂ ವಿದ್ಯಾರ್ಥಿಗಳನ್ನು ಮುಸ್ಲಿಂ ವಿದ್ಯಾರ್ಥಿಗಳು ಕೀಳಾಗಿ ಕಾಣುತ್ತಿದ್ದರು. ಮರಾಠಿ, ತೆಲಗು ಮತ್ತು ಉರ್ದು ಭಾಷೆಗಳಿಗಿರುವಂತಹ ಪ್ರೋತ್ಸಾಹ ಕನ್ನಡಕ್ಕೆ ಇರಲಿಲ್ಲ. ಕನ್ನಡ ಮಾತನಾಡುವುದೇ ಅಪರಾಧ ವಾಗಿತ್ತು ಕನ್ನಡದ ಕರಪತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ತಿರುಗುವಂತಿರಲಿಲ್ಲ. ಅಲ್ಲದೆ ಕನ್ನಡ ಪರ ಚಳುವಳಿಗಳಲ್ಲಿ ತೊಡಗಿದವರನ್ನು ಬಂಧಿಸಲಾಗುತ್ತಿತ್ತು.

೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾದಾಗಿನಿಂದ ಕನ್ನಡ ಭಾಷೆ-ಸಂಸ್ಕೃತಿಗಳನ್ನು ಒಂದಾಗಿ ಅಭಿವೃದ್ಧಿಗೊಳಿಸಲು ಕನ್ನಡ 'ಕಾವಾ' ಮತ್ತು 'ಜಾಣ' ಪರೀಕ್ಷೆಗಳನ್ನು ಕನ್ನಡ ಸಾಹಿತ್ಯ ಪರಿಷತ್ ನಡೆಸುತ್ತಿತ್ತು.

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ೧೯೪೫ರಲ್ಲಿ ಆರಂಭವಾದಾಗ ಈ ಭಾಗದ ಜನರು ದೂರದ ಬೆಂಗಳೂರಿನ ಪರಿಷತ್ ಪರೀಕ್ಷೆಗಳನ್ನು ಬರೆಯುವುದು ಕನಸಿನ ಮಾತಾಗಿತ್ತು. ಶಿಕ್ಷಕ

ವೃತ್ತಿಯಲ್ಲಿರುವವರಿಗೆ ಈ ಪರೀಕ್ಷೆಗಳು ತುಂಬಾ ಉಪಯುಕ್ತವಾಗಿದ್ದವು. ಈ ಪರೀಕ್ಷೆಯಲ್ಲಿ ಪಾಸಾದರೆ (Higer Secondery Certificet)(H.S.C.)ಮೆಟ್ರಿಕ್ಯುಲೇಷನ್ ಸಮಾನವೆಂದು ಪರಿಗಣಿಸಿ ಆ 'ವೇತನ'ವನ್ನು ಕೊಡಲಾಗುತ್ತಿತ್ತು. ಹೀಗಾಗಿ ಏಳನೇ ತರಗತಿ ಪಾಸಾದವರಿಗೆ ಕಾವ ಮತ್ತು ಜಾಣ ಪರೀಕ್ಷೆಗೆ ಕೂಡುವ ಆಸೆಗಳು ಹೆಚ್ಚಾಗಿದ್ದವು.

ಇಂತಹ ಸನ್ನವೇಶವನ್ನು ಅರಿತುಕೊಂಡು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಈ ಭಾಗದ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಸಲುವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪರವಾನಿಗೆಯನ್ನು ಪಡೆದುಕೊಂಡು ಸಾಹಿತ್ಯ ಸಂಘದ ಕಛೇರಿಯಲ್ಲಿಯೇ ಕನ್ನಡ 'ಕಾವಾ' ಮತ್ತು 'ಜಾಣ' ಪರೀಕ್ಷಾ ಕೇಂದ್ರವನ್ನು ಆರಂಭಿಸಿದರು.

ಇದು ಕೇವಲ ಪರೀಕ್ಷಾ ಕೇಂದ್ರವಾಗಿರದೆ ತರಗತಿಗಳನ್ನು ಕೂಡ ಅಚ್ಚುಕಟ್ಟಾಗಿ ನಡೆಸುತ್ತಿತ್ತು. ರವಿವಾರ ಅಭ್ಯಾಸ ಮಿತ್ರ ಮಂಡಳಿ ನಡೆಸುವ ಕಾರ್ಯಕ್ರಮಗಳಲ್ಲಿಯೂ ಕಾವಾ ಮತ್ತು ಜಾಣ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರ ಮೂಲಕ ಉಪಯೋಗ ಪಡೆದುಕೊಳ್ಳತ್ತಿದ್ದರು. ಸಾಹಿತ್ಯ ಸಂಘದ ಸದಸ್ಯರುಗಳೇ ವಿದ್ಯಾಮೇರು ಪರ್ವತಗಳಾಗಿದ್ದರು. ಸಗರ ಕೃಷ್ಣಚಾರ್ಯ ಮತ್ತು ಎಂ.ಆರ್. ಬುದ್ಧಿವಂತ ಶೆಟ್ಟರು ಮುಂತಾದವರು ಈ ತರಗತಿಗಳಲ್ಲಿ ಪಾಠಮಾಡುತ್ತಿದ್ದರು. ತರಗತಿಯ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಸಹಾಯವನ್ನು ಮಾಡಲಾಗುತ್ತಿತ್ತು. ಗ್ರಂಥಾಲಯ ದಲ್ಲಿಯೇ ಅನೇಕ ಕನ್ನಡ ಸಾಹಿತ್ಯಕ ಗ್ರಂಥಗಳನ್ನು ಇಲ್ಲಿ ಸಂಗ್ರಹಿಸಲಾಗಿತ್ತು. ಪರೀಕ್ಷೆಗಳನ್ನು ತುಂಬಾ ಅಚ್ಚುಕಟ್ಟಾಗಿ ನಡೆಸಲಾಗುತ್ತಿತ್ತು. ಹೀಗೆ ಸತತ ಹದಿನೈದು ವರ್ಷಗಳ ಕಾಲ ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಕನ್ನಡವನ್ನು ಬೆಳಸಲು ಸದಾ ಜಾಗೃತವಾಗಿದ್ದ ಕೇಂದ್ರವೆಂದರೆ ಕನ್ನಡ ಸಾಹಿತ್ಯ ಸಂಘವೆಂದರೆ ತಪ್ಪಾಗಲಾರದು. ಸ್ವತಃ ಈಗಿನ ಅಧ್ಯಕ್ಷರಾದ ಶ್ರೀ ಎಂ.ಆರ್. ಬುದ್ಧಿವಂತ ಶೆಟ್ಟರು ಕೂಡ ಈ ಪರೀಕ್ಷೆ ಕೇಂದ್ರದಿಂದಲೇ 'ಕಾವ' ಮತ್ತು 'ಜಾಣ' ಪರೀಕ್ಷೆಯನ್ನು ಪಾಸುಮಾಡಿ ಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಕ. ಕನ್ನಡ ಸಾಹಿತ್ಯ ಸಂಘದ ವಜ್ರಮಹೋತ್ಸವ

೧೯೪೩ರಲ್ಲಿ ಆರಂಭವಾದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸತತ ಆರುದಶಕಗಳ ಕಾಲ ಸಾಹಿತ್ಯ ಹಾಗೂ ಸಂಸ್ಕೃತಿಯ ಸುಧೆಯನ್ನು ಈ ಭಾಗದ ಜನರಿಗೆ ಉಣಬಡಿಸುತ್ತಿದೆ. ಅಲ್ಲಿಂದ ಇಲ್ಲಿಯವರೆಗೂ ಪ್ರತಿವರ್ಷ ರಾಷ್ಟ್ರೀಯ ಹಬ್ಬಗಳಲ್ಲಿ ನಾಡಹಬ್ಬಗಳಲ್ಲಿ ಮತ್ತು ವಾರ್ಷಿಕ ಆಚರಣೆಗಳೊಂದಿಗೆ ಈ ಕನ್ನಡ ಸಾಹಿತ್ಯ ಸಂಘವು ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಕನ್ನಡ ರಾಜ್ಯೋತ್ಸವ ಅಲ್ಲದೆ ವಿಜಯದಶಮಿ ಪರ್ವದಲ್ಲಿಯೂ ನಾಡಹಬ್ಬ ಕುರಿತು ಮೂರುದಿನ, ಐದು ದಿನಗಳವರೆಗೆ ಸಾಹಿತ್ಯದ ಸುಗ್ಗಿಯೇ ಸುಗ್ಗಿ ಪ್ರತಿವರ್ಷ ಈ ನಾಡಹಬ್ಬಕ್ಕೆ

ಕನ್ನಡ ನಾಡಿನ ಹೆಸರಾಂತ ಸಾಹಿತಿಗಳು, ಕವಿಗಳು ಆಗಮಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ.

ಈ ಸಂಘದ ನಾಡಹಬ್ಬ ಸಮಾರಂಭಗಳಿಗೆ ರಾಷ್ಟ್ರಪ್ರಶಸ್ತಿ, ರಾಜ್ಯಾ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡ ಖ್ಯಾತ ಸಾಹಿತಿಗಳು, ಕವಿಗಳು, ವಿಮರ್ಶಕರು ನಟರು ರಾಜಕೀಯ ನಾಯಕರು ಇಲ್ಲಿಗೆ ಆಗಮಿಸಿದ್ದಾರೆ. ಬಿ.ಎಂ.ಶ್ರೀ, ಮಾಸ್ತಿ-ಬೇಂದ್ರೆಯವರಿಂದ ಹಿಡಿದು ತಿ.ತಾ. ಶರ್ಮ ಅವರ ಮತ್ತು ತೀ.ನಂ.ಶ್ರೀ ವರೆಗೂ ಜಯದೇವಿತಾಯಿಲಿಗಾಡೆ ಅವರಿಂದ ಬಿ.ಟಿ. ಲಲಿತಾನಾಯ್ಕೆ ಅವರೆಗೂ ಬಿ. ರಾಮಕೃಷ್ಣ ಹೈದ್ರಾಬಾದ್ ಸರ್ಕಾರದ ಮುಖ್ಯಮಂತ್ರಿ ರಿಂದ ಹಿಡಿದು ಡಿ. ದೇವರಾಜ ಅರಸರವರೆಗೂ ಅಲ್ಲದೆ ಕನ್ನಡದ ಖ್ಯಾತ ಸಾಹಿತಿಗಳಾದ ಚನ್ನವೀರ ಕಣವಿ, ಸಿದ್ಧಯ್ಯ ಪುರಾಣಿಕ, ಸುಮತೀಂದ್ರನಾಡಿಗ ಬೆಟಗೇರಿ ಕೃಷ್ಣಶರ್ಮಾ, ವಿ. ಸೀತಾರಮಯ್ಯ, ಬೀ.ಚಿ., ಮಿರ್ಜಿ ಅಣ್ಣಾರಾಯರು, ನಟ ಉದಯಕುಮಾರ, ಬಾಳಪ್ಪ ಹುಕ್ಕೇರಿ, ಹೀಗೆ ಹಲವಾರು ಕನ್ನಡ ಸಾಹಿತ್ಯ ಲೋಕದ ಘಟಾನುಘಟಿಗಳು ಈ ಸಂಘದ ನಾಡಹಬ್ಬಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಇಲ್ಲಿ ಸಾಹಿತ್ಯದ ಹೊಳೆಯನ್ನೇ ಹರಿಸಿದ್ದಾರೆ. ಅಂತಹ ನೆನಪುಗಳ ಬುತ್ತಿ ಇನ್ನು ಅಭಿಪ್ರಾಯ ಪುಸ್ತಕದಲ್ಲಿ ದಾಖಲಾದದ್ದನ್ನು ಸ್ಮರಿಸಿಕೊಳ್ಳಬಹುದು.

ಈ ನಾಡಹಬ್ಬ ಸಮಾರಂಭಕ್ಕೆ ಬಂದ ಸಾಹಿತಿಗಳು ಹಾಗೂ ಸಾರ್ವಜನಿಕರಿಗೆ ಊಟ, ವಸತಿಗಳ ವ್ಯವಸ್ಥೆ ಚೆನ್ನಾಗಿಯೇ ಆಗುತ್ತವೆ. ಮಾನ-ಸನ್ಮಾನಗಳು ನೆನಪಿನ ಕಾಣಿಕೆಗಳಕತನ್ನು ಕೂಡ ಆದರದಿಂದ ಅರ್ಪಿಸುತ್ತಿದ್ದರು ಎಂಬ ಮಾತುಗಳು ಆಮಂತ್ರಿತ ಅಥಿತಿಗಳಿಂದಲೇ ಕೇಳಿ ಬಂದಿವೆ. ಬ್ರಾಹ್ಮಣರು, ವೀರಶೈವರು, ಮುಸ್ಲಿಂರು ಹಾಗೂ ಇತರ ಸಾಹಿತಿ, ಕವಿ, ಕಲಾವಿದರು, ಜಾತಿ, ಬೇಧವಿಲ್ಲದೆ ಈ ಸಂಘದಿಂದ ಆಮಂತ್ರಿಸಲ್ಪಟ್ಟಿದ್ದಾರೆ. ಬಂದು ಹೋದ ಸಾಹಿತಿ ಕವಿಗಳಿಂದ ಪ್ರಕಟವಾದ ಅಭಿಮತ, ಸಲಹೆ ಸೂಚನೆಗಳನ್ನು ಈ ಸಂಘದಲ್ಲಿ ದಾಖಲಾಗಿವೆ. ಅಂತಹ ಒಂದು ದಾಖಲೆ ಪುಸ್ತಕವು ಸಾಹಿತ್ಯ ಸಂಘದಲ್ಲಿ ಸುರಕ್ಷಿತವಾಗಿ ಇಂದಿಗೂ ಓದಲು ಸಿಗುತ್ತದೆ.

ಈ ಸಾಹಿತ್ಯ ಸಂಘವು ಇಂತಹ ಸುದೀರ್ಘ ಅವಧಿಯವರೆಗೂ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಚಟುವಟಿಕೆಗಳಿಗೆ ಮೂಲ ಕಾರಣರೆಂದರೆ ಶ್ರೀ ಎಂ.ಆರ್. ಬುದ್ಧಿವಂತ ಶೆಟ್ಟರು. ಇವರು ವ್ಯಾಪಾರಸ್ಥರು, ಅತಿ ಬುದ್ಧವಂತರು, ತಮ್ಮ ೮೬ನೇ ವಯಸ್ಸಿನಲ್ಲಿಯೂ ಇಂದು ಸಂಘದ ಅಧ್ಯಕ್ಷರಾಗಿ ಅದರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಇವರು ೧೯೪೮ರಿಂದಲೇ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಇವರಲ್ಲಿ ಸಾಹಿತ್ಯದ ಸೆಲೆ ಇನ್ನೂ ಜೀವಂತಿವಾಗಿರುವುದು ಸ್ಮರಣಾರ್ಹವಾಗಿದೆ.

ಸತತ ೬೫ ವರ್ಷಗಳ ಕಾಲದ ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ೧೯೭೨ರಲ್ಲಿ ಸುವರ್ಣಾಮಹೋತ್ಸವವನ್ನು ಆಚರಿಸಿಕೊಂಡು ವಜ್ರ

ಮಹೋತ್ಸವ ಕಾರ್ಯಕ್ರಮದ ಅಧ್ಯಕ್ಷರಾಗಿ ಸೀತಾರಮ ಜಾಹಾಗೀರದಾರನ್ನು ಆಯ್ಕೆಮಾಡಲಾಗಿತ್ತು. ದಿನಾಂಕ ಎಪ್ರಿಲ್. ೩, ೪, ೨೦೦೪ರಂದು ಎರಡು ದಿನಗಳ ಕಾಲ ಸಹಸ್ರಾರಾರು ಕನ್ನಡದ ಅಭಿಮಾನಿಗಳು ಸಂಘದ ವಜ್ರಮಹೋತ್ಸವದ ಆಚರಣೆಯನ್ನು ಒಂದು ಹಬ್ಬವಾಗಿ ಸಂಭ್ರಮದಿಂದ ಆಚರಿಸಿದರು. ಎಂ.ಆರ್. ಬುದ್ಧಿವಂತಶೆಟ್ಟರ ಸಂಘದ ಅಧ್ಯಕ್ಷರಾಗಿ ವೇದಿಕೆ ಅಲಂಕರಿಸಿದ್ದರು. ಹೀಗೆ ಸತತ ೬೫ ವರ್ಷಗಳ ಸಾಧನೆಯನ್ನು ಪುನರ್ ಮೆಲುಕು ಹಾಕಿ ಮುಂದಿನ ಸವಾಲುಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲಾಗುತ್ತದೆ.

ಅಡಿಟಿಪ್ಪಣಿಗಳು

೧. ಮಹಾಬಲೇಶ್ವರಪ್ಪಾ., ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು. (೧೯೯೭) ಪು. ೫೬.

೨. ಪೊಲೀಸ್ ಪಾಟೀಲ (೨೦೦೨) ಪು. ೫೨

೩. ಗೋಪಾಲರಾವ್., ಹಜೀಬ್ ಹೈದ್ರಾಬಾದ್ ಮುಕ್ತಿ ಸಂಘರ್ಷ (೨೦೦೧) ಪು. ೭೨

೪. ಟಿ.ಎಮ್. ಬಾಸ್ಕರ್., ಕಲ್ಬುರ್ಗಿ ಜಿಲ್ಲಾದರ್ಶನ (೨೦೦೫) ಪು. ೨೫೭

೫. ಗೋಪಾಲರಾವ್., ಹಜಿಬ್ ಹೈದ್ರಾಬಾದ್ ಮುಕ್ತಿ ಸಂಘರ್ಷ (೨೦೦೧) ಪು. ೭೨

೬. ಪಾಟೀಲ ಎಂ.ಬಿ., ಗುಲ್ಬರ್ಗಾ ಜಿಲ್ಲಾ ಗ್ಯಾಸೆಟಿಯರ್ಸ್ (೧೯೯೭) ಪು. ೫೯೮

೭. ಮಹಾಬಲೇಶ್ವರಪ್ಪಾ., ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು. (೧೯೯೭) ಪು. ೭೧

೮. ನಾಗಪ್ಪ ತ್ರಿವೇದಿ., ವಜ್ರದೀಪ್ತಿ ೨೦೦೪ ಪು. ೧೨೮

೯. ಕುಷ್ಟಗಿ ಸುಶಿಲ ಸುಬ್ಬಯ್ಯ., ಸ್ಮರಣಗ್ರಂಥ (೨೦೦೩) ಪು. ೧೭೫

೧೦. ಪಾಟೀಲ ಎಂ.ಬಿ., ಗುಲ್ಬರ್ಗಾ ಜಿಲ್ಲಾ ಗ್ಯಾಸೆಟಿಯರ್ಸ್ (೧೯೯೭) ಪು. ೧೨೫

೧೧. ಮಹಾಬಲೇಶ್ವರಪ್ಪಾ., ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು. (೧೯೯೭) ಪು. ೨೪

೧೨. ಅಮರೇಶ್ ನುಗಡೋಣಿ., ಹೈದ್ರಾಬಾದ್ ಕರ್ನಾಟಕದ ಹಾಡು-ಪಾಡು (೨೦೦೩) ಪು. ೫೧

೧೩. ಸಂದರ್ಶನ ತ್ರಿವೇದಿ., ನಾಗಪ್ಪ ೨೨.೦೪.೦೮

೧೪. ಗೋಪಾಲರಾವ್., ಹಜೀಬ್ ಹೈದ್ರಾಬಾದ್ ಮುಕ್ತಿ ಸಂಘರ್ಷ (೨೦೦೧) ಪು. ೩೨

೧೫. ಸಂದರ್ಶನ: ಎ. ಕೃಷ್ಣ ಸುರಪುರ. ೨೧.೦೪.೦೮

೧೬. ಸಂದರ್ಶನ: ಗುರುಬಸವಯ್ಯ ಅಮ್ಮಾಪುರ ೨೩.೦೪.೦೮

೧೭. ಎಚ್.ಎಸ್. ಗೋಪಾಲರಾವ್., ಕರ್ನಾಟಕ ಏಕೀಕರಣ ಇತಿಹಾಸ (೨೦೦೫) ಪು. ೧೨೦

೧೮. ಸಂದರ್ಶನ: ತ್ರಿವೇದಿ., ನಾಗಪ್ಪ ೨೨.೦೪.೦೮ ಹಾಗೂ ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ ದಿನಾಂಕ ೨೮.೧೦.೧೯೫೫,

೧೯. ನಾಗಪ್ಪ ತ್ರಿವೇದಿ., ವಜ್ರದೀಪ್ತಿ (೨೦೦೪) ಪು. ೭೦

ಅಧ್ಯಾಯ ೪

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಮತ್ತು ಸಾಹಿತ್ಯಿಕ ಪರಿಸರ

೧. ಸಂಘವನ್ನು ಕಟ್ಟಿಬೆಳೆಸಿದ ಪ್ರಮುಖರು

೨. ವಾರ್ಷಿಕ ಆಚರಣೆಗಳು ಕಾರ್ಯಕ್ರಮಗಳು

೩. ಸಂಘದ ಸಾಹಿತ್ಯಿಕ ಪ್ರಕಟಣೆಗಳು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಮತ್ತು ಸಾಹಿತ್ಯಿಕ ಪರಿಸರ

ಹೈದ್ರಾಬಾದ್ ಕರ್ನಾಟಕವು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರಬಹುದು. ಆದರೆ ಸಾಹಿತ್ಯ ಮತ್ತು ಸಂಸ್ಕೃತಿಯ ಸಮೃದ್ಧಿಯಲ್ಲಿ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಹಿಗಿದ್ದಾಗಿಯೂ ಜನಪದ ಸಾಹಿತ್ಯ ಕಲೆಗಳನ್ನು ಕೆದುಕಿ ಮತ್ತಷ್ಟು ಹೊರತೆಗೆಯುವ ಮತ್ತು ಪರಿಶೋಧಿಸುವ ಪ್ರಮುಖ ಸಂಘ-ಸಂಸ್ಥೆಗಳ ಅವಶ್ಯಕತೆ ಇತ್ತು. ಸಾಹಿತ್ಯ ಮತ್ತು ಕಲೆಗಳಿಗೆ ನೆಲೆ-ಬೆಲೆಗಳನ್ನು ಕಲ್ಪಿಸುವ ಪ್ರಾದೇಶಿಕ ಸಾಂಸ್ಕೃತಿಕ ಕೇಂದ್ರದ ಅನಿವಾರ್ಯತೆ ಈ ಭಾಗದಲ್ಲಿ ಎದ್ದು ಕಾಣುತ್ತಿತ್ತು. ಹೀಗಾಗಿ ೧೯೪೩ರಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಲಾಯಿತು. ನಿಜಾಮನು ತನ್ನ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಜನರನ್ನು ಒತ್ತಾಯಿಸುತ್ತಿದ್ದನು. ಇನ್ನೊಂದು ಕಡೆ 'ಇತ್ತೇಹಾದುಲ್ ಮುಸಲ್ಮಾನ್' ಎಂಬ ಸಂಘಟನೆಯ ಮತಾಂತರ ಪ್ರಕ್ರಿಯೆ ಪ್ರಾರಂಭವಾಗಿದ್ದವು. ರಜಾಕಾರರೊಂದಿಗೆ ನಿಜಾಮ ಪೋಲಿಸ್‌ರು ಸೇರಿಕೊಂಡು ಹಳ್ಳಿ ಹಳ್ಳಿಗಳಲ್ಲಿ ದಾಳಿ ಮಾಡುತ್ತಿದ್ದರು. ಅತ್ಯಾಚಾರಗಳು, ದರೋಡೆಗಳು, ಕೊಲೆಗಳು ಈ ಪ್ರಾಂತ್ಯದಲ್ಲಿ ಪ್ರತಿನಿತ್ಯ ನಡೆದಿದ್ದವು. ಈ ಸಂದರ್ಭದಲ್ಲಿ ಕನ್ನಡ ಪರವಾದ ಚಟುವಟಿಕೆಗಳಲ್ಲಿ ತೊಡಗಿದವರನ್ನು ಗಡಿಪಾರು ಮಾಡಲಾಗುತ್ತಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭ ವಾಗುದರೊಂದಿಗೆ ನಿಜಾಂನ ಭಾಷಾ ಧೋರಣೆಯ ನೀತಿಯನ್ನು ಮೀರಿ 'ಅರುಣಾ ಪತ್ರಿಕೆ'ಯನ್ನು ಆರಂಭಿಸಿತು.

ಹಿಂಜರಿಕೆಯ ನಂಜಿನಲ್ಲಿ ನರಳುತ್ತಿರುವ ಈ ಭಾಗದ ಲೇಖಕರ, ಯುವಪ್ರತಿಭಾವಂತ ಬರಹಗಾರರ ಅಂತರ್‍ಯದ ಪ್ರತಿಭೆಯ ಕಿಡಿಗಳನ್ನು ಮೇಲೇಳಿಸುವ ರಚನಾತ್ಮಕ ಪ್ರಯತ್ನವೂಕೂಡ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಉದ್ದೇಶಗಳೊಲ್ಲೊಂದಾಗಿತ್ತು. ಆ ಕಾರಣಕ್ಕಾಗಿಯೇ ಸಾಹಿತ್ಯ

ಸಂಘವು ಕನ್ನಡ ಸಾಹಿತ್ಯದ ಪ್ರಚಾರ ಹಾಗೂ ಪ್ರಸಾರಕ್ಕಾಗಿಯೇ 'ಅರುಣಾ ಗ್ರಂಥಮಾಲೆ' ಹಾಗೂ 'ಮಿರಿಯಾಲ ರಂಗಯ್ಯ' ಸ್ಮಾರಕ ಮಾಲೆಯನ್ನು ಆರಂಭಿಸಲಾಯಿತು.

ಆ ಸಂಘವನ್ನು ಕಟ್ಟಿಬೆಳೆಸಿದ ಪ್ರಮುಖರು.

ಸತತ ೬೫ ವರ್ಷಗಳ ಕಾಲ ನಿರಂತರ ಕನ್ನಡದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ೨೦೦೪ರಲ್ಲಿ ವಜ್ರಮಹೋತ್ಸವವನ್ನು ಆಚರಿಸಿಕೊಂಡ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಯಶಸ್ಸಿನ ಹಿಂದೆ ಅನೇಕ ಮಹನೀಯರ ಶ್ರಮವಿದೆ. ಅಂತಹ ಮಹನೀಯರನ್ನು ಈ ಕೆಳಗಿನಂತೆ ನೋಡಬಹುದು.

೧. ಎಂ.ಆರ್. ಬುದ್ಧಿವಂತ ಶೆಟ್ಟಿ (೧೯೨೧)

ಶ್ರೀ ಎಂ.ಆರ್. 'ಬುದ್ಧಿವಂತಶೆಟ್ಟಿ' ಕರ್ನಾಟಕದ ಬಹುಭಾಗಗಳ ಕನ್ನಡಾಸಕ್ತರಿಗೆ ಗೊತ್ತಿರುವ ಹೆಸರು. ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದ ಸಾಹಿತ್ಯ ಪ್ರಿಯರಿಗೆ ಪ್ರಿಯವಾದ ಹೆಸರು. ಸಾಹಿತ್ಯವಲಯದ ಅನೇಕ ಹಿರಿ-ಕಿರಿಯರು ಅವರಲ್ಲಿ ಬಂದು ತಮ್ಮನ್ನು ಪರಿಚಯಿಸಿಕೊಂಡು ಮಾತನಾಡಿ ಅವರ ಸಾಹಿತ್ಯ ಸೇವೆಯನ್ನು ಮನಮೆಚ್ಚಿ ಹೊಗಳಿದ್ದಲ್ಲದೆ, ಸ್ಫೂರ್ತಿಗೊಂಡು ತಾವು ಮಹತ್ವವಾದದ್ದು ಏನನ್ನಾದರೂ ಸಾಧಿಸಬೇಕು ಎಂಬ ಸಂಕಲ್ಪ ಮಾಡಿಕೊಂಡು ಹೋಗಿದ್ದಾರೆ. ಮತ್ತೆ ಕೆಲವರು ಮಾರ್ಗದರ್ಶನವನ್ನು ಪಡೆದುಕೊಂಡು ಸಂಶೋಧನಾ ಕಾರ್ಯಗಳಲ್ಲಿ ತೊಡಗಿದ್ದಾರೆ. ಎಂದು ಹೇಳಿದರೆ ಸಾಹಿತ್ಯದ ಕುರಿತು ಅವರಿಗಿರುವ ವಿಶಾಲ ಅನುಭವ ಅರಿವಾಗದೆ ಇರಲಾರದು. ಒಂದೆ ಮಾತಿನಲ್ಲಿ ಹೇಳುವದಾದರೆ ಎಂ.ಆರ್. ಬುದ್ಧಿವಂತಶೆಟ್ಟರು ಕನ್ನಡ ಸಾಹಿತ್ಯಸಕ್ತರು, ಸಾಹಿತ್ಯಾಭಿಮಾನಿಗಳು ಸಾಹಿತ್ಯ ಪ್ರಸಾರಕರು. ಸತತ ಸಾಹಿತ್ಯಾಭ್ಯಾಸಿಗಳು ಸಾಹಿತ್ಯ ಸೇವಾನಿರತರು. ಪ್ರಾಚೀನ ಕನ್ನಡ ಸಾಹಿತ್ಯ ಲೋಕದ ದಿಗ್ಗಜರಾದ 'ಜನ್ನ' ಅವರ ಅಚ್ಚುಮೆಚ್ಚಿನ ಕವಿ. ಜನ್ನನ ಯಶೋಧರ ಚರಿತೆ ಅವರ ಮನಸನ್ನು ಆಕರ್ಷಿಸಿದ ಕಾವ್ಯ. ಆ ಕಾವ್ಯದ ಅನೇಕ ಭಾಗಗಳು ಇವತ್ತಿಗೂ ಅವರಿಗೆ ಕಂಠಪಾಠವಾಗಿ ಉಳಿದಿದೆ ಎಂದರೆ ಆಶ್ಚರ್ಯವಾದೀತು.

ಬುದ್ಧಿವಂತ ಶೆಟ್ಟರು ಮುಗ್ಧ, ಸರಳಜೀವಿ ೮೭ರ ವಯೋವೃದ್ಧ ೧೯೨೧ರಲ್ಲಿ ರಂಗಂಪೇಟೆಯ ಮಿರಿಯಾಲ ರಂಗಯ್ಯ ಹಾಗೂ ಸುಭದ್ರಮ್ಮರವರ ಮಗನಾಗಿ ಜನಿಸಿದರು. ಶಾಲೆ ಕಲಿತಿದ್ದು ಕೇವಲ ಆರನೇ ತರಗತಿಯವರೆಗೆ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದರಿಂದ ಶಾಲಾ ಓದು ಮೊಟಕುಗೊಳಿಸಿ. ಪಾರಿವಾರಿಕ ಉದ್ಯೋಗ ಮುಂದುವರಿಸುವುದು ಅನಿವಾರ್ಯವಾಯಿತು. ಶಾಲೆ ಬಿಟ್ಟರು ಓದು ಬಿಡಲಿಲ್ಲ. ಓದು ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಹೀಗೆ ಓದು ಮುಂದುವರಿಸಿ ಕನ್ನಡ 'ಕಾವಾ' ಮತ್ತು 'ಜಾಣ' ಪರೀಕ್ಷೆ ಪಾಸುಮಾಡಿದರು. ಮದ್ರಾಸ್ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಪಾಸುಮಾಡಿದರು. ಅಷ್ಟಕ್ಕೆ ತೃಪ್ತರಾಗದೆ ತಮ್ಮ ೫೦ನೇ ವಯಸ್ಸಿನಲ್ಲಿ ೧೯೭೭-೭೮ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದಲ್ಲಿ ಎಂ.ಎ.

ಪದವಿಯನ್ನು ಪಡೆದರು. ಓದು ಅವರಿಗೆ ಉಸಿರಿದ್ದಷ್ಟೆ ಸಹಜ. ಅವರು ಓದದೇ ಇರುವ ದಿವಸವೇ ಇಲ್ಲ.

ಅವರು ಪುಸ್ತಕ ವ್ಯಾಪಾರಿಗಳು ಆದುದ್ದರಿಂದ ಅವರ ಅಂಗಡಿಯಲ್ಲಿ ನೂರಾರು ಪುಸ್ತಕಗಳು ಇಟ್ಟು ತಾವೂ ಓದುತ್ತಿದ್ದರು. ಸ್ನೇಹಿತರಿಗೂ ಓದಲು ಕೊಡುತ್ತಿದ್ದರು. ಹೀಗೆ ಗೆಳೆಯರಲ್ಲಿ ಓದುವ ಹವ್ಯಾಸ ಬೆಳೆಸಿದರು. ಓದುವವರ ಸಂಖ್ಯೆ ಹೆಚ್ಚಾದಂತೆ ವಾಚಾನಾಲಯದ ಅವಶ್ಯಕತೆ ಹೆಚ್ಚಾಯಿತು. ಅದರ ತತ್ಪರಿಣಾಮವಾಗಿ ೧೯೪೩ರಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಲಾಯಿತು. ಸಗರ ಕೃಷ್ಣಾಚಾರ್ಯ, ಬಂಡಿಗುರಾಚಾರ್ಯ, ಡಿ. ಗೋವಿಂದಪ್ಪ, ಮುಮ್ಮಡಿ ಶಿವಣ್ಣ, ಬೋಡಾ ರಾಮಣ್ಣ ಹಾಗೂ ಇತರ ಕನ್ನಡ ಅಭಿಮಾನಿಗಳು ಸೇರಿ ಸಂಘವನ್ನು ಸ್ಥಾಪಿಸಿದರು. ಈ ಸಂಘದ ಗ್ರಂಥಾಲಯದಲ್ಲಿ ೨೫೦೦ ರಿಂದ ೩೦೦೦ ಪುಸ್ತಕಗಳು ಸಂಗ್ರಹವಿದೆ.

ಪ್ರಸ್ತುತ ೮೭ರ ವಯೋವೃದ್ಧಾಪ್ಯದಲ್ಲಿಯೂ ಅಧ್ಯಕ್ಷರಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸಾಧಿಸಿದ ಪ್ರತಿಯೊಂದು ಸಾಧನೆಯಲ್ಲಿ ಅವರ ಪರಿಶ್ರಮವಿದೆ ಎಂದು ಬೇರೆ ಹೇಳಬೇಕಾಗಿಲ್ಲ.

೧. ಉರ್ದು ಭಾಷೆ ಹೈದ್ರಾಬಾದ್ ಸಂಸ್ಥಾನದ ಆಡಳಿತ ಭಾಷೆ ಮತ್ತು ಶಿಕ್ಷಣದ ಮಾಧ್ಯಮ ವಾಗಿದ್ದು ಈ ಭಾಗದಲ್ಲಿ ಜನರ ಮನೆಮನೆಗಳಲ್ಲಿ ಕನ್ನಡಭಿಮಾನದ ಬೀಜಗಳನ್ನು ಬಿತ್ತಿ ಕನ್ನಡ ಭಾಷೆಯ ಪ್ರಚಾರಕ್ಕೆ ಶ್ರಮಿಸಿ ಅದು ಕನ್ನಡಿಗರೆಲ್ಲರ ಭಾಷೆಯನ್ನಾಗಿ ಮಾಡಿದ್ದು.

೨. ಸಂಘದ ಗ್ರಂಥಾಲಯಕ್ಕೆ ಪತ್ರಿಕೆಗಳನ್ನು ತರಿಸಿ ವಾಚಕರ ಸಂಖ್ಯೆಯನ್ನು ಹೆಚ್ಚಿಸಿದರಲ್ಲದೆ. ಕನ್ನಡ ಭಾಷೆಯ ಮತ್ತು ಸಾಹಿತ್ಯದ ಬಗ್ಗೆ ಉತ್ಸಾಹವನ್ನು ಇಮ್ಮುಡಿಗೊಳಿಸಿದರು.

೩. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪರವಾನಿಗೆ ಪಡೆದು ಕನ್ನಡ 'ಕಾವ' ಮತ್ತು 'ಜಾಣ' ಪರೀಕ್ಷಾ ಕೇಂದ್ರ ಆರಂಭಿಸಿ ಭೋದನೆ ಮಾಡಿದರು.

೪. ಪ್ರತಿವರ್ಷವು ಸಂಘದ ವಾರ್ಷಿಕ ಉತ್ಸವ, ಆಚರಣೆಗಳಲ್ಲಿ ಇವರದು ಮಹತ್ವದ ಪಾತ್ರ

೫. ಸ್ವತಃ ಕವಿಗಳಾಗಿದ್ದ ಇವರು 'ಮಧುರಮಿಲನ' (ಕಥಾಸಂಕಲನ) 'ಗುಲಾಬಿಗೊಂಚಲು' (ಮಕ್ಕಳ ಕವನ ಸಂಕಲನ) ಮತ್ತು 'ಕವನ ಕುಸುಮ' ಕವನ ಸಂಕಲನಗಳನ್ನು ಸಂಪಾದಿರಸಿದ್ದಾರೆ.

೬. ತಂದೆಯವರ ಹೆಸರಿನಲ್ಲಿ 'ಮಿರಿಯಾಲ ರಂಗಯ್ಯ ಸ್ಮಾರಕ' ಮಾಲೆಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ.

೭. ೧೯೪೧ರ ಹೈದ್ರಾಬಾದ್ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಇಲ್ಲಿಯವರೆಗೂ ಒಂದೆರಡು ಸಮ್ಮೇಳನಗಳಲ್ಲಿ ಭಾಗವಹಿಸಿರಲಿಲ್ಲ. ಉಳಿದ ಎಲ್ಲಾ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ.

ಸಮಾಜ ಸೇವೆ

೧. ಅಪ್ಪಟ ಖಾದಿದಾರಿಗಳಾದ ಶ್ರೀ ಎಂ.ಆರ್. ಬುದ್ಧಿವಂತ ಶೆಟ್ಟರು ಗುಲ್ಬರ್ಗಾ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘದ ಟ್ರಸ್ಟ್‌ನ ನಿರ್ದೇಶಕರಾಗಿ ಕಳೆದ ೧೫-೨೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

೨. ಸುರಪುರ ನಗರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಹಲವು ವರ್ಷ ದುಡಿದು ಅದನ್ನು ಪುನಶ್ಚೇತನಗೊಳಿಸಿ ಅಭಿವೃದ್ಧಿ ಪಥದಲ್ಲಿ ಮುನ್ನಡಿಸಿಕೊಂಡು ಬಂದು ಎಲ್ಲ ಸದಸ್ಯರ ಪ್ರೀತಿಗೆ ಪಾತ್ರರಾದರು.

೩. ಸುರಪುರ ಪುರಸಭೆಯ ಸದಸ್ಯರಾಗಿ ಹನ್ನೊಂದು ವರ್ಷಗಳು ಸೇವೆ ಸಲ್ಲಿಸಿದ್ದಾರೆ.

ಸನ್ಮಾನ ಹಾಗೂ ಪುರಸ್ಕಾರಗಳು

ಶ್ರೀ ಬುದ್ಧಿವಂತಶೆಟ್ಟರು ಎಂದೂ ಪದವಿ ಪುರಸ್ಕಾರಗಳಿಗೆ ಆಸೆ ಪಟ್ಟವರಲ್ಲ, ಆದರೆ ಹಲವು ಸಂಘ-ಸಂಸ್ಥೆಗಳು ಅವರನ್ನು ಸನ್ಮಾನಿಸಿ ಗೌರವಿಸಿದೆ.

೧. ೨೫ ಡಿಸೆಂಬರ್ ೨೦೦೨ರಲ್ಲಿ 'ಕಲ್ಬುರ್ಗಿಯ ಉದಯೋನ್ಮುಕ' ಬರಹಗಾರರ ಬಳಗದವರು ಶ್ರೀ ಬುದ್ಧವಂತಶೆಟ್ಟರಿಗೆ 'ಕಾಯಕ ಸಮ್ಮಾನ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

೨. ಜೇವರ್ಗಿ ತಾಲ್ಲೂಕು ಸಾಹಿತ್ಯ ಸಮ್ಮೇಳನದಲ್ಲಿ ಇವರ ಸಾಹಿತ್ಯ ಸೇವೆಯನ್ನು ಗುರ್ತಿಸಿ ಸನ್ಮಾನಿಸಲಾಯಿತು.

೩. ಸುರಪುರದ ಕೆನರಾಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಶಾಖೆಗಳು ಸನ್ಮಾನ ಹಾಗೂ ಪ್ರಶಸ್ತಿ ನೀಡಿವೆ.

೪. ಸುರಪುರದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು "ವರ್ಷದ ವ್ಯಕ್ತಿ" ಪುರಸ್ಕಾರ ನೀಡಿ ಗೌರವಿಸಿದೆ. ಶ್ರೀಯುತರು ೧೯೭೪ರಲ್ಲಿ ಮಾರಿಷಿಯಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಆರ್ಯ ಸಮಾಜದ ಅಧಿವೇಶನಕ್ಕೂ ಹೋಗಿ ಬಂದ ಕೀರ್ತಿ ಇವರದು.

"ದಿನಾಂಕ ೧೦ ಜುಲೈ ೧೯೯೪ರ ತರಂಗ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಪಾಟೀಲ ಪುಟ್ಟಪ್ಪನವರ 'ನಿಸ್ವಾರ್ಥ ಸೇವೆಯ ನೆನಪು' ಲೇಖನದಲ್ಲಿ ನಿಸ್ವಾರ್ಥ ಸಾಂಸ್ಕೃತಿಕ ಸೇವೆಯ ದೀರ್ಘ ದಾಖಲೆ ಹೊಂದಿರುವ ವ್ಯಕ್ತಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಬುದ್ಧಿವಂತ ಶೆಟ್ಟರನ್ನು ಬಿಟ್ಟರೆ ಈ ರಾಜ್ಯದಲ್ಲಿಯೇ ಆಗಲಿ ಈ ದೇಶದಲ್ಲಿಯೇ ಆಗಲಿ ಬೇರೊಬ್ಬರಿಲ್ಲ. ೧೯೪೩ರಿಂದ ಇಲ್ಲಿಯವರೆಗೂ ಸುರಪುರದ ರಂಗಂಪೇಟೆಯಲ್ಲಿ ಕನ್ನಡ ಸಾಹಿತ್ಯ ಸಂಘವನ್ನು ಕಟ್ಟಿ ಬೆಳೆಸಿಕೊಂಡು ಬಂದಿದ್ದಾರೆ. ಇವರಲ್ಲಿ ಅವರು ಸಾಧಿಸಿದ ಸ್ವಾರ್ಥವೇನು? ತಮ್ಮ ಜನರಿಗೆ ಸಾಹಿತಿಗಳ ಮುಖವನ್ನು ತೋರಿಸಿದ್ದಾರೆ. ನಾಮಾಂಕಿತ ಸಾಹಿತಿಗಳ ಹಸ್ತಾಕ್ಷರಗಳನ್ನು ಬಿ.ಎಂ.ಶ್ರೀ ಯವರ ಕಾಲದಿಂದ ಹಿಡಿದು

ಅವರು ಇಲ್ಲಿಯವರೆಗೂ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಬುದ್ಧಿವಂತ ಶೆಟ್ಟರಲ್ಲಿಗೆ ಹೋಗಬೇಕು"".

ತಮ್ಮನ್ನು ಯಾರು ಸನ್ಮಾನಿಸಲಿಲ್ಲವೆಂದು ಅವರು ತಮ್ಮ ಸಾಹಿತ್ಯ ಸೇವೆಯನ್ನು ನಿಲ್ಲಿಸಿದರೆ, ಇಲ್ಲ ಸೂರ್ಯ ಹೊಳೆಯುತ್ತಲೇ ಇರುತ್ತಾನೆ. ಗಾಳಿ ಬಿಸುತ್ತಲೆ ಇರುತ್ತದೆ ಪ್ರಶಂಸೆ ಲಭಿಸಲಿಲ್ಲ. ಪುರಸ್ಕಾರ ಸಿಕ್ಕಲಿಲ್ಲವೆಂದು ಅವು ತಮ್ಮ ಕೆಲಸವನ್ನು ನಿಲ್ಲಿಸುವದಿಲ್ಲ. ಎಂದು ಲೇಖನದಲ್ಲಿ ಬರೆದಿದ್ದಾರೆ.

ಸುದೀರ್ಘವಾದ ಸಾಹಿತ್ಯ ಸೇವೆಯನ್ನು ಅರಿತ ಕನ್ನಡ ಸಾಹಿತ್ಯ ಪರಿಷತ್ ಮೂಡಬಿದರೆಯಲ್ಲಿ ಜರುಗಿದ ೭೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬುದ್ಧಿವಂತ ಶೆಟ್ಟರಿಗೆ ೨೧.೧೨.೨೦೦೩ರಂದು "ಕರ್ನಾಟಕ ಶ್ರೀ" ಪ್ರಶಸ್ತಿ ನೀಡಿ ಗೌರವಿಸಿದೆ.

೮೭ರ ವಯೋವೃದ್ಧರಾದ ಶ್ರೀ ಎಂ.ಆರ್. ಬುದ್ಧಿವಂತಶೆಟ್ಟರು ಪ್ರಸ್ತುತ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಗರ ಕೃಷ್ಣಚಾರ್ಯ (೧೯೧೭-೨೦೦೪)

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಹುಟ್ಟುಹಾಕುವಲ್ಲಿ ಶ್ರೀ ಬುದ್ಧಿವಂತಶೆಟ್ಟರಿಗೆ ಪ್ರೊತ್ಸಾಹಿಸಿ ಸಂಘ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಸಗರ ಕೃಷ್ಣಚಾರ್ಯರು. ಸಂಘಕ್ಕೆ ಸಾಹಿತ್ಯಕ ಚೈತನ್ಯವನ್ನು ತುಂಬಿದ ಕೀರ್ತಿ ಸಗರ ಕೃಷ್ಣಚಾರ್ಯರಿಗೆ ಸಲ್ಲುತ್ತದೆ. ಅಪ್ಪವದಾನಿ ನರಸಿಂಹ ಶಾಸ್ತ್ರಿಗಳು. ಬಂಡಿಗುರಾಚಾರ್ಯ, ಜಯತೀರ್ಥ ಮಣ್ಣೂರು, ಡಿ. ಗೋವಿಂದಪ್ಪ, ಮುಮ್ಮಡಿ ಶಿವಣ್ಣ ಹಾಗೂ ಗುಲಾಂ ರಸೊಲರೊಂದಿಗೆ ಸಾಹಿತ್ಯ ಸಂಘಕ್ಕೆ ಸಲ್ಲಿಸಿದ ಇವರ ಸೇವೆ ಅಪಾರ ವಾದುದ್ದು.

ಇವರು ಹುಟ್ಟಿದು ಶಹಾಪುರ ತಾಲೂಕಿನ ಸಗರದಲ್ಲಿ ಸರಕಾರಿ ಶಿಕ್ಷಕರಾಗಿ ಶಿಕ್ಷಣ ಇಲಾಖೆಯ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆಸಲ್ಲಿಸಿದ್ದಾರೆ. ಜೊತೆಗೆ ಸಂಘವನ್ನು ವಿವಿಧ ಮಗ್ಗಲುಗಳಲ್ಲಿ ಬೆಳಸಿದ ಕೀರ್ತಿ ಇವರದು. ಚಿಕ್ಕಂದಿನಿಂದಲೂ ಇವರಿಗೆ ಸಾಹಿತ್ಯ ಬಗೆಗೆ ಒಲವು ಇತ್ತು. ಇವರ ತಾತ ಸಂಸ್ಕೃತ ಸಾಹಿತ್ಯವನ್ನು ಬಲ್ಲವರಾಗಿದ್ದರು. ದೊಡ್ಡಪ್ಪ ಕನ್ನಡ ಸಾಹಿತ್ಯದಲ್ಲಿ ಅನುಭವ ಉಳ್ಳವರು. ಇರ್ರೀರ್ವರ ಮಧ್ಯೆ ಸಾಹಿತ್ಯದ ಮೇರು ಪರ್ವತವೇ ಇವರಾದರು ಎಂದು ಹೇಳಿದರೆ ತಪ್ಪಾಗಲಾರದು.

ಸಂಘ ಸ್ಥಾಪನೆಯಾದಾಗಿನಿಂದಲೂ ಸದಸ್ಯರಾಗಿ ಕಾರ್ಯನಿರ್ವಹಿಸಿ ಸಂಘ ಹುಟ್ಟಿದ ಹನ್ನೊಂದನೆ ವರ್ಷಕ್ಕೆ 'ಕಾರ್ಯಾಧ್ಯಕ್ಷರಾದರು' ಅದೇ ವರ್ಷವೆ ಸಂಘದಲ್ಲಿ 'ಹೇಮಂತ ಭಾಷಣ ಮಾಲೆ'ಯನ್ನು ಆರಂಭಿಸಿದ ಕೀರ್ತಿ ಅವರದು.

"ಮೊಟ್ಟ ಮೊದಲ ಬಾರಿಗೆ ರಂಗಂಪೇಟೆಯಲ್ಲಿ ಎಂದು ಮಾತನಾಡದ ಮಹಿಳೆಯರನ್ನು

ಒಟ್ಟುಗೂಡಿಸಿ ಕೆಲವರಿಂದ ಭಾಷಣಗಳನ್ನು ಮಾಡಿಸಿದ್ದರು. ಆ ಮಹಿಳೆಯರಿಗೆ ಮೊದಲೇ ಸಿದ್ದಪಡಿಸಿದ್ದರು. ಇವರ ಸಾಹಿತ್ಯ ಸೇವೆಗೆ ಪ್ರಚೋಧನೆ ನೀಡಿದವರು ಮಣ್ಣೂರು ಜಯತೀರ್ಥಚಾರ್ಯರು. ಗದ್ವಾಲದಲ್ಲಿ ಇವರಿಬ್ಬರೂ ಸೇರಿ 'ಭಾಗ್ಯೋದಯ ಗ್ರಂಥಮಾಲೆ' ಆರಂಭಿಸಿ 'ಕತೆಗಾರ್ತಿ' ಸಾಹಿತಿಯ ಜೀವನ ಮುಂತಾದ ಕೃತಿಗಳನ್ನು ಪ್ರಕಟಿಸಿದರು. ಹೀಗೆ ಸಗರ ಕೃಷ್ಣಾಚಾರ್ಯರು ಹೈದ್ರಾಬಾದ್ ಕರ್ನಾಟಕದ ವಿವಿಧ ಭಾಗಗಳಲ್ಲಿ ಸೇವೆಸಲ್ಲಿಸಿದ್ದಾರೆ"[೨].

"ಸಾಹಿತ್ಯ ಸಂಘ"ದ ವಾಚನಾಲಯಕ್ಕೆ ಮೂರ್ತ ಸ್ವರೂಪ ನೀಡಿದವರೂ ಇವರೇ. ಸುರಪುರದ ಸಾಹಿತ್ಯ ಸಂಘದೊಂದಿಗೆ ಪ್ರತಿಸ್ಪರ್ಧಿಯಾಗಿರದೆ ಸಹಸ್ಪರ್ದೆಯಾಗಿ ಹಲವಾರು ಕಾರ್ಯಕ್ರಮಗಳನ್ನು ಸಗರ ಕೃಷ್ಣಚಾರ್ಯ ಮತ್ತು ಬುದ್ಧಿವಂತ ಶೆಟ್ಟರ ಮುಖಂಡತ್ವದಲ್ಲಿ ನಡೆಸುತ್ತಾ ಬರಲಾಯಿತು.

"ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ 'ಕಾವಾ' ಮತ್ತು 'ಜಾಣ' ಪರೀಕ್ಷಾಕೇಂದ್ರ ಆರಂಭಿಸುವಲ್ಲಿಯಂತೊ ಅತಿ ಹೆಚ್ಚಿನ ಕೆಲಸದ ಒತ್ತಡ ಇವರ ಮಲೆಯೇ ಇತ್ತು. ತರಗತಿಗಳಿಗೆ ಪಾಠಬೋಧನೆ ಮಾಡುವುದು, ಆ ವಿದ್ಯಾರ್ಥಿಗಳಿಗೆ ಚರ್ಚೆ ಸ್ಪರ್ದೆಗಳನ್ನು ಏರ್ಪಡಿಸುವುದು. ಗ್ರಂಥಾಲಯದಲ್ಲಿ ಮಾರ್ಗದರ್ಶನ ನೀಡುವುದು ಇವರ ಮುಖ್ಯ ಕೆಲಸವಾಗಿತ್ತು. ಹೀಗೆ ಸಂಘದ ಸಂಪೂರ್ಣ ಯಶಸ್ಸಿಗೆ ಕಾರಣರಾದವರಲ್ಲಿ ಇವರ ಸೇವೆ ಸ್ಮರಣೀಯವಾದದ್ದು".[೩]

ಸಾಹಿತ್ಯದಲ್ಲಿ ಸಲ್ಲಿಸಿದ ಸೇವೆಯಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಅವರು ಅಪೂರ್ವ ಸಾಧನೆಗಳನ್ನು ಮಾಡಿದ್ದಾರೆ. ಇವರು ಸುರಪುರದ ಶಿಕ್ಷಣಾಧಿಕಾರಿಯಾಗಿದ್ದಾಗ ಹಲವಾರು ಮಕ್ಕಳ ಸಮ್ಮೇಳನಗಳು, ಶಿಕ್ಷಕರ ಸಮ್ಮೇಳನಗಳನ್ನು ಮಾಡಿದ್ದಾರೆ. ಹಾಗೆ ಇವರು ಶಿಕ್ಷಕರಾಗಿ, ಕನ್ನಡಕ್ಕಾಗಿ ಅಭೂತಪೂರ್ವ ಸೇವೆಯನ್ನು ಸಲ್ಲಿಸುವದರ ಜೊತೆಗೆ ಹಲವಾರು ಬಾರಿ ರಜಾಕಾರರ ತೊಂದರೆಗೆ ಒಳಗಾಗಿದ್ದಾರೆ. ಇವರ ಅನೇಕ ಗ್ರಂಥಗಳು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದಿಂದ ಪ್ರಕಟವಾಗಿದೆ.

ಒಟ್ಟಿನಲ್ಲಿ ಸಗರ ಕೃಷ್ಣಾಚಾರ್ಯರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅನನ್ಯವಾದದ್ದು. ಹೈದ್ರಾಬಾದ್ ಕರ್ನಾಟಕದ ಖ್ಯಾತ ಸಾಹಿತಿಗಳಲ್ಲಿ ಪ್ರಮುಖರು ಇವರು. ಆದರ್ಶ ಅಮೃತಬಿಂದು ಜೀವನ ಸಂಸಾರ ಸಗರನಾಡು. ತೋರಣ ಹಕೀಕ ಮಸಾವಾತ ಕೃತಿಗಳನ್ನು ರಚಿಸಿದ್ದಾರೆ. ಹಾಗೂ ನನ್ನ ನಾ ಕಂಡೆ ಆತ್ಮಚರಿತ್ರೆಯನ್ನು ಎರಡು ಸಂಪುಟಗಳಲ್ಲಿ ಬರೆದಿದ್ದಾರೆ. ಈಗ ಇವರ ಸಾಹಿತ್ಯದ ಮೇಲೆ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ 'ಮಂಜುಳಾ ಪಾಟೀಲ'ರು ಪಿಹೆಚ್.ಡಿ. ಅಧ್ಯಯನ ಮಾಡುತ್ತಿದ್ದಾರೆ. ಹೀಗೆ ಸಾಹಿತ್ಯ ಸಂಘವನ್ನು ಮುನ್ನಡೆಸಿಕೊಂಡು ಬಂದ ಇವರು ನಾಲ್ಕು ವರ್ಷಗಳ ಹಿಂದೆ ನಿಧನರಾದರು. ಇವರ ಮರಣ ಕನ್ನಡ ಸಾಹಿತ್ಯ ಸಂಘಕ್ಕೆ ಹಾಗೂ ನಾಡಿನ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿ ಪರಿಣಮಿಸಿದೆ.

ಶ್ರೀ ಅಷ್ಟವದಾನಿ ನರಸಿಂಹ ಶಾಸ್ತ್ರಿಗಳು (೧೯೧೪-೧೯೯೦)

ಸುರಪುರ ಎಂದಾಕ್ಷಣ ಥಟ್ಟನೇ ಇಬ್ಬರು ಪುರುಷರು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತಾರೆ.

ಒಬ್ಬರು ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಹಾಡಿದ ಕ್ರಾಂತಿವೀರ ನಾಲ್ವಡಿ ವೆಂಕಟಪ್ಪ ನಾಯಕರು ಮತ್ತೊಬ್ಬರು ಈ ನೆಲದಲ್ಲಿ ಹುಟ್ಟಿ ಬೆಳೆದು ಸಾಹಿತ್ಯ, ಸಂಗೀತ ಕಾಯಕದಲ್ಲಿ ಬದುಕನ್ನು ಸವೆಸಿ ಇತ್ತೀಚೆಗೆ ಕಣ್ಮರೆಯಾದ ಶ್ರೀ ಅಪ್ಪವದಾನಿ ನರಸಿಂಹಶಾಸ್ತ್ರಿಗಳು.

"ಸಗರನಾಡಿನಲ್ಲಿ ಕನ್ನಡದ ಉಳಿವಿಗೆ ಕಾರಣರಾದವರಲ್ಲಿ ಅಪ್ಪವದಾನಿ ನರಸಿಂಹಶಾಸ್ತ್ರಿಗಳ ಪಾತ್ರ ತುಂಬಾ ಹಿರಿದಾದದ್ದು ಉರ್ದುವಿನ ಪ್ರಭಾವವಿದ್ದ ಕಾಲದಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಲು ರಂಗಂಪೇಟೆಯ ಶ್ರೀ ಬುದ್ಧಿವಂತ ಶೆಟ್ಟರ ಜೊತೆಸರಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ಕಟ್ಟಿಬೆಳೆಸಿದ ಕೀರ್ತಿ ಶ್ರೀ ಅಪ್ಪವದಾನಿ ನರಸಿಂಹಶಾಸ್ತ್ರಿಗಳಿಗೆ ಸಲ್ಲುತ್ತದೆ".[೪]

"ಮಹಾಕವಿ ಲಕ್ಷ್ಮೀಶನ ಜೈಮಿನಿ ಭಾರತವನ್ನು ಸುಶ್ರಾವ್ಯವಾಗಿ ಹಾಡುವುದರ ಮೂಲಕ ಅದರ ನಾದಸ್ಮೃತಿಯನ್ನು ನಾಡಿನ ಮನೆ-ಮನೆಗೆ ತಲುಪಿಸುವಲ್ಲಿ ಶಾಸ್ತ್ರಿಗಳು ಶ್ರಮ ಸ್ಮರಣೆಯವಾದದ್ದು. ನಾಡಹಬ್ಬದ ನಿಮಿತ್ತ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಆಗಮಿಸಿದ ನಾಡಿನ ಸಾಹಿತ್ಯದ ದಿಗ್ಗಜರುಗಳಾದ ದ.ರಾ. ಬೇಂದ್ರೆ, ಬಿ.ಎಂ.ಶ್ರೀ, ಮಾಸ್ತಿ ಮುಂತಾದವರೊಂದಿಗೆ ಚರ್ಚಿಸಿ ಲಕ್ಷ್ಮೀಶನ ದೇಶ, ಕಾಲದ ಬಗೆಗೆ ಅವನು ದೇವಪುರದವನೇ ಎಂಬ ತಮ್ಮ ಖಚಿತವಾದ ಸಂಬಂಧಿಸಿದಂತೆ ನಿಲವನ್ನು ಸಮರ್ಥಿಸಿಕೊಳ್ಳುತ್ತಿದ್ದರು".[೫]

ಜುಲೈ ೮, ೧೯೧೫ರಲ್ಲಿ ಶ್ರೀ ವೆಂಕಯ್ಯನವರ ಪುತ್ರರಾಗಿ ಕೆ. ಗೌರಮ್ಮನವರ ದತ್ತು ಪುತ್ರರಾಗಿ ಸುರಪುರದಲ್ಲಿ ಜನಿಸಿದರು. ಸುರಪುರದಲ್ಲಿ ಇವರ ತಂದೆ ಅರಸು ಮನೆತನದ ವಿದ್ಯಾಗುರುಗಳಾಗಿದ್ದರು. ಹಾಗಾಗಿ ಈ ವಿದ್ಯಾಶಾರದೆ ಇವರಿಗೆ ಒಲಿದು ಬಂದಳು. ಪ್ರಾಥಮಿಕ ಶಿಕ್ಷಣ ಸುರಪುರದಲ್ಲಿ ಮುಗಿಸಿ ನಂತರ ಹುಮನಾಬಾದ್ ತಾಲೂಕಿನ ಮಾಣಿಕ್ ನಗರದಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿದರು.

ಶಾಸ್ತ್ರಿಗಳು ಬರೆದಿದ್ದು ಅತ್ಯಲ್ಪ, ಅವರ ವಿದ್ವತ್ತು ಅನುಭವ ಬರಹರೂಪದಲ್ಲಿ ಪೂರ್ಣ ರೂಪತಾಳದೆ ಹೊದದ್ದು ಕನ್ನಡ ಸಾರಸತ್ವ ಲೋಕಕ್ಕೆ ಹಾನಿಯೇ ಸರಿ. ಆದರೆ ಅವರು ಕನ್ನಡ ಕೆಲಸಕ್ಕೆ ಅನೇಕ ಬರಹಗಾರರನ್ನು ಸೃಷ್ಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂಬ ಅಭಿಪ್ರಾಯವನ್ನು ಶಾಸ್ತ್ರಿಗಳನ್ನು ಹತ್ತಿರದಿಂದ ಬಲ್ಲವರಾದ ಶ್ರೀ ಬುದ್ಧಿವಂತಶೆಟ್ಟರು, ಶ್ರೀ ವಸಂತ ಕುಷ್ಟಗಿ, ಶ್ರೀ ಎ. ಕೃಷ್ಣಸುರಪುರ, ಪಿ.ಎಮ್. ಗಲಗಲಿ, ಜಿ.ಕೆ. ಕುಲಕರ್ಣಿ ಮುಂತಾದವರು ತಮ್ಮ ಅನಿಸಿಕೆಗಳನ್ನು ಹಾಗೂ ನೆನಪುಗಳನ್ನು ತೋಡಿಕೊಂಡಿದ್ದಾರೆ.

ಶಾಸ್ತ್ರಿಗಳು ರಾಜ ಮನೆತನದ ಅರಮನೆಯಲ್ಲಿ ಶನಿವಾರಕೊಮ್ಮೆ 'ಸಂಗೀತ ಕಛೇರಿ'ಗಳನ್ನು ನಡೆಸುತ್ತಿದ್ದರು. ಇವರು ಅರಸುಗಳ ಸಹಾಯದಿಂದ ದತ್ತ ಮ್ಯೂಸಿಕ್ ಸರ್ಕಲ್ ಹುಟ್ಟು ಹಾಕಿದ್ದರು. ಇದರ ಮೂಲಕ ಶ್ರೀಮತಿ ಗಂಗೂಬಾಯಿ ಹಾನಗಲ್ ಬಡೋಪೆಕರ್ ಶ್ರೀಮತಿ ಹೀರಾಬಾಯಿ. ಶ್ರೀ ಭೀಮಸೇನ ಜೋಷಿ, ಶ್ರೀ ವಿ.ಜಿ. ಜೋಗ, ಶ್ರೀ ಪರ್ವತೀಕರ್ ಮುಂತಾದವರು ಸಂಗೀತವನ್ನು ಜನರಿಗೆ ಸವಿಯಲು ಅನುವುಮಾಡಿಕೊಟ್ಟರು.

ರಂಗಂಪಟೆಯ ಕನ್ನಡ ಸಾಹಿತ್ಯ ಸಂಘವು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುವಲ್ಲಿ ಶ್ರೀ ಅಷ್ಟವದಾನಿ ನರಸಿಂಹಶಾಸ್ತ್ರಿಗಳ ಸೇವೆ ಅಪಾರವಾದದ್ದು. ಸಂಘದ ಸಂಸ್ಥಾಪನೆ ಯಿಂದ ಹಿಡಿದು ಸಂಘವು ಬೆಳೆದು ಉನ್ನತಮಟ್ಟವನ್ನು ತಲುಪವವರೆಗೆ ಅವರು ಸೇವೆಯನ್ನು ಸಲ್ಲಿಸಿದ್ದಾರೆ.

ಇವರಿಗೆ ಹತ್ತಿರವಾಗಿ ಸ್ನೇಹಿತರಾಗಿ ಇದ್ದಂತವರು ಶ್ರೀ ಕಪಟರಾಳ ಕೃಷ್ಣರಾವ್ ನಾನಪ್ಪ ದೇಸಾಯಿ, ಎ. ಕೃಷ್ಣ ಸುರಪುರ, ಜಯತೀರ್ಥಚಾರ್ಯ ಮಣ್ಣೂರು ಶೇಷಾಶಾಸ್ತ್ರಿ ಹೆಬ್ಬಾಳ್ ಬುದ್ಧಿವಂತ ಶೆಟ್ಟರು, ಶ್ರೀ ರಾಮಣ್ಣ ಬೋಡಾ, ಸಗರ ಕೃಷ್ಣಚಾರ್ಯ ಮುಂತಾದ ಸ್ನೇಹಿತರಿದ್ದರು. ಈ ಸ್ನೇಹಿತರ ಬಳಗವೇ ಕನ್ನಡ ಸಾಹಿತ್ಯ ಸಂಘದ ಉಗಮಕ್ಕೆ ನಾಂದಿ ಹಾಡಿದರು ಎನ್ನಬಹುದು.

ಶಾಸ್ತ್ರಿಗಳಿಗೆ ಅಧ್ಯಯನ, ಅಧ್ಯಾಪನ, ಜೀವನದ ಉಸಿರಾಗಿದ್ದವು. ಆಕಾಶವಾಣಿಯ ಮೂಲಕ ಬಿತ್ತರವಾದ ವಿಚಾರದೀಪಿಕೆ, ಚಿಂತನ, ಭಾಷಣಗಳು ಜನರ ಮನಸ್ಸು ಸೊರೆಗೊಳ್ಳುವಂತಹವು. ಅವರ ಗರುಡಿಯಲ್ಲಿಯೇ ಒಳ್ಳೆಯ ಬರಹಗಾರರನ್ನು ಸೃಷ್ಟಿಸಿದ್ದಾರೆ ಎಂದು ತಿಳಿದುಬರುತ್ತದೆ.

“ಸುರಪುರದಲ್ಲಿ ಆಯೋಜಸಿದ್ದ ಕವಿಗೋಷ್ಠಿಯ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವಹಿಸಿ ಮಾತನಾಡುತ್ತಾ “ಜೀವನ ಸುಸಂಸ್ಕೃತವಾಗಬೇಕಾದರೆ ಜ್ಞಾನಾರ್ಜನೆಯ ಹಂಬಲ ಬೆಳೆಯಬೇಕು. ಪ್ರಗತಿಯತ್ತ ಸಾಗಬೇಕಾದರೆ ಪ್ರಾಚೀನ ಸಾಹಿತ್ಯವನ್ನು ಸಂಸ್ಕೃತಿಯನ್ನು ಅವಲೋಕಿಸಬೇಕು. ಹಾಗಾದಾಗ ಮಾತ್ರ ಮುನ್ನಡೆಯುವುದು ಸಾಧ್ಯ. ಕರ್ನಾಟಕದಲ್ಲಿ ಸಗರನಾಡು ಒಂದು ನಾಡಾಗಿ ಬೆಳಗಿದೆ ಎಂಬುದನ್ನು ಮರೆಯಬಾರದು. ಒಂದು ಕಾಲಕ್ಕೆ ಸುರಪುರವು ಸಾಹಿತ್ಯ ಸಂಗೀತದ ತವರುಮನೆ ಯಾಗಿತ್ತೆಂದು ಯಾವ ಆಧಾರದ ಮೇಲೆ ಮುಂದಿನ ಪೀಳಿಗೆಗೆ ನಾವು ತಿಳಿಸಬಲ್ಲೆವು. ಅದಕ್ಕಾಗಿ ಯಾದರು ನಾವು ಬೆಳೆಯಬೇಕು. ಬೆಳೆಯುವ ಮಕ್ಕಳಿಗೆ ಮಾದರಿಯಾಗಬೇಕು ಇವು ಶಾಸ್ತ್ರಿಗಳಿಗೆ ಈ ನಾಡಿನ ಬಗ್ಗೆ ಇದ್ದ ಅಭಿಮಾನ ಮತ್ತು ಆತಂಕಗಳು”[೬].

ಸಾಹಿತ್ಯ ಸಂಗೀತ ಮಹಾಸೇವೆಗಾಗಿ ರಾಜ್ಯ ಸರ್ಕಾರದಿಂದ ಮಾಶಾಸನ ದೊರೆತಿದೆ. ಹಾಗೆ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘವನ್ನು ಬೆಳೆಸುವಲ್ಲಿ ಅಷ್ಟವದಾನಿ ನರಸಿಂಹ ಶಾಸ್ತ್ರಿಗಳು ತುಂಬಾ ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಶ್ರೀ ಬೋಡಾ ರಾಮಣ್ಣ (ಕ್ರಿ.ಶ. ೧೮೯೦-೧೯೮೫)

೧೮೨ ವರ್ಷ ಇತಿಹಾಸ ಹೊಂದಿರುವ ರಂಗಂಪೇಟೆ ಐತಿಹಾಸಿಕ ಅದೊಂದು ಅಗ್ರಹಾರ. ಸಗರನಾಡಿಗೆ ಹೆಸರುವಾಸಿಯಾದ ಮನೆತನ ಎಂದರೆ ‘ಬೋಡಾ’ ಮನೆತನ ಶ್ರೀಮಂತಿಕೆಯಿಂದಲೂ ಸಮಾಜ ಸೇವೆಯಿಂದಲೂ ಧಾನ-ಧರ್ಮದಲ್ಲಿ ಎತ್ತಿದ ಕೈ ಇವರದು. ೧೯೪೩ರಲ್ಲಿ ರಾಮಣ್ಣ ಬೋಡರವರು ಆ ಊರಿನ ಹಿರಿಯರು ಹಾಗೂ ರಾಜಕೀಯ ಮುಖಂಡರಾಗಿದ್ದರು.

ಇವರು ಹುಟ್ಟಿದ್ದು ರಂಗಂಪೇಟೆಯಲ್ಲಿ ಅಗರ್ಭ ಶ್ರೀಮಂತ ಮನೆತನದಲ್ಲಿ ಜನಸಿದ ಶ್ರೀ

ರಾಮಣ್ಣ ಬೋಡಾರವರು ಒಳ್ಳೆಯ ಸಮಾಜ ಸುಧಾರಕರು ಕೂಡ ಹೌದು. ಇವರು ಬೆಳೆದದ್ದು ಸಾಹಿತ್ಯಾಸಕ್ತರ, ಕನ್ನಡಾಭಿಮಾನಿಗಳ ಬಳಗದಲ್ಲಿ ಸ್ನೇಹಿತರ ಬಳಗದಿಂದ ಇವರಲ್ಲಿ ಸಾಹಿತ್ಯ ಆಸಕ್ತಿ ಮೂಡಿತು. ಡಿ. ಗೋವಿಂದಪ್ಪ ಶ್ರೀ ಬುದ್ಧಿವಂತಶೆಟ್ಟಿ ಬಂಡಿಗುರಾಚಾರ್ಯರು ಸಗರ ಕೃಷ್ಣಾಚಾರ್ಯರು. ಮುಮ್ಮಡಿ ಶಿವಣ್ಣ ಮುಂತಾದ ಸ್ನೇಹಿತರೊಂದಿಗೆ ಸೇರಿಕೊಂಡು ಕನ್ನಡ ಸಾಹಿತ್ಯ ಸಂಘವನ್ನು ಸ್ಥಾಪಿಸಿದಲ್ಲಿ ಇವರ ಶ್ರಮ ಅಪಾರ.

ಸಂಘ ಇವರ ಹಿರಿತನ, ಪ್ರಾಮಾಣಿಕತನ, ನಾಯಕತ್ವದ ಗುಣಗಳಿಗೆ ಹೆಸರಾದ ಇವರನ್ನು ಸಂಸ್ಥಾಪನಾ ಅಧ್ಯಕ್ಷರನ್ನಾಗಿ ಮಾಡಿದರು. ಸತತ ೧೯೮೫ರವರೆಗೆ ಅಂದರೆ ೪೨ ವರ್ಷಗಳ ಕಾಲ ಅವರ ಜೀವಮಾನ ಇರುವವರೆಗೆ ಅವರು ಸಂಘದ ಅಧ್ಯಕ್ಷರಾಗಿದ್ದರು. ಸಾಹಿತ್ಯಸಂಘವು ಇಂದು 'ವಜ್ರಮಹೋತ್ಸವ ಆಚರಿಸಿಕೊಂಡು ಉನ್ನತ ಮಟ್ಟದಲ್ಲಿದೆ ಎಂದರೆ ಅದರ ಹಿಂದೆ ಅವರ ಬದ್ರವಾದ ನಾಯಕತ್ವ ಫಲ ಎಂದು ಹೇಳಿದರೆ ತಪ್ಪಾಗದು. ಅದರ ಜೊತೆಗೆ ಸಂಘದ ಸದಸ್ಯರ ಪರಿಶ್ರಮವು ಕೂಡ ಇದೆ.

ಇವರ ಅಧ್ಯಕ್ಷ ಅವಧಿಯಲ್ಲಿಯೇ ಹಲವಾರು ಸಾಹಿತ್ಯ ಮಾಲೆಗಳನ್ನು ಆರಂಭಿಸಲಾಯಿತು. ಇವರು ಸುರಪುರ ಪುರಸಭೆಯ ಅಧ್ಯಕ್ಷರಾಗಿ ಕೆಲಮಾಡಿದ್ದಾರೆ. ಹಲವಾರು ದೇವಾಲಯ, ಸಮಾಜದ ಬಡವರಿಗೆ ಸಹಾಯಹಸ್ತವನ್ನು ನೀಡಿದ್ದಾರೆ. ರಾಜ್ಯದ ಯಾವುದೇ ಸಂಘದಲ್ಲಿಯೂ ಸತತ ೪೨ವರ್ಷಗಳ ಅಧ್ಯಕ್ಷರಾಗಿದ್ದ ಉದಾಹರಣೆಗಳಿಲ್ಲ. ಇವರು ಸುರಪುರ ಅರಸು ಮನೆತನದೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದರು ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ಆಪ್ತಮಿತ್ರರು ಆಗಿದ್ದರು.

ಹೀಗೆ ಸಾಹಿತ್ಯ, ಸಮಾಜ, ರಾಜಕಾರಣಗಳಂಥ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕೇವಲ ಈ ನಾಲ್ಕು ಜನ ಸಂಘವನ್ನು ಬೆಳಸುವಲ್ಲಿ ಪ್ರಮುಖಪಾತ್ರವಹಿಸದೆ ಅನೇಕ ಸದಸ್ಯರ ಸೇವೆಯೂ ಅಮೂಲ್ಯವಾಗಿತ್ತು. ಅಂತಹ ಸದಸ್ಯರುಗಳನ್ನು ಈ ಕೆಳಗಿನಂತೆ ನೋಡಬಹುದು.

ಆರ್. ರುದ್ರಸ್ವಾಮಿಗಳು, ಬಂಡಿ ಗುರಾಚಾರ್ಯರು, ಡಿ. ಗೋವಿಂದಪ್ಪ, ಶ್ರೀನಿವಾಸಚಾರ್ಯ ಜಾಗೀರದಾರ, ಮುಮ್ಮಡಿ ಶಿವಣ್ಣನವರು, ಶಂಕರಭಟ್ಟರು, ನಾರಾಯಣಚಾರಿ ಅನ್ವರಿ, ಪ್ರಧಾನಪ್ಪ ಪಾಣಿಭಾತೆ, ಮಾರ್ಥಂಡರಾವ್ ಹಳಿಜೋಳ, ಯಲ್ಲಪ್ಪ ಸಿಂದಿಗಿ, ಶಿವಣ್ಣ ಅರಿಕೇರಿ, ಸದಾಶಿವ ಭಟ್ಟರಾಜಜೋಷಿ, ಗುಲಾಂ ರಸೂಲ್ ಪುರಾಣಿವಾನೆ, ಗಿರಣಯ್ಯ ಕಡಬೂರ, ರುದ್ರಪ್ಪ ಆವಂತೆ, ಅಡಿವೆಪ್ಪಗೋಲಗೇರಿ ಹಾಗೂ ಇತರ ಸ್ನೇಹಿತರು ಮತ್ತು ಗ್ರಾಮಸ್ತರು.

ಎರಡನೇ ಹಂತದಲ್ಲಿ ಸಂಘವನ್ನು ಬೆಳಸಿದವರು ಜನಾರ್ಧನರಾವ್ ಹಳಿಜೋಳ, ರಾಮಬಟ್ಟರಾಯ ಜೋಷಿ, ಚಂದ್ರಶೇಖರಪ್ಪ ಸಜ್ಜನ, ಬಸವನಾಥಗುಳಿಗಿ ಸುಬ್ಬಣ್ಣ ಕಡೆಚೂರ ಹಾಗೂ ಇತರ ಸದಸ್ಯರು ಮತ್ತೆ ಗ್ರಾಮಸ್ತರು.

ಪ್ರಸ್ತುತವಾಗಿ ನಾಗಪ್ಪ ತ್ರಿವೇದಿ, ಶಾಂತಪ್ಪಬೂದಿಹಾಳ, ತಿರುಮಲರಾವ್ ಸೋಮಶೆಖರ ಸುಂಕದ, ಅಯ್ಯಣ್ಣ ಚನ್ನಪ್ಪಗೊಳ, ಪ್ರಹ್ಲಾದರಾವ್ ಕುಳಗೇರಿ ಜನಾರ್ಧನರಾವ್ ವಿಭೂತೆ, ದತ್ತುರಾವ್ ಮಹೇಂದ್ರಕರ್ ಮಾಣಿಕರಾವ್ ಬೋಡಾ ಸುರೇಶ್, ಸಜ್ಜನ. ಲಕ್ಷ್ಮಯ್ಯ ಕಲ್ಕೊಂಡ, ಬಾಗಪ್ಪ ಬಿಲ್ಲವ, ಸುಬಣ್ಣಯ್ಯ ಕಡಬೂರು, ಸುರೇಂದ್ರನಾಥ ಸಜ್ಜನ, ಶ್ರೀ ಶಿವರಾಜಪ್ಪ ಗೋಲಗೇರಿ ಮತ್ತು ಇತರ ಸದಸ್ಯರು ಹಾಗೂ ಆಝಾದ ಯುವಕ ಸಂಘದ ಸದಸ್ಯರು ಸಂಘವನ್ನು ಮುನ್ನಡೆಸಿ ಕೊಂಡು ಹೋಗುತ್ತಿದ್ದಾರೆ.

ಬ. ವಾರ್ಷಿಕ ಆಚರಣೆಗಳು ಕಾರ್ಯಕ್ರಮಗಳು

೨೦೦೪ರಲ್ಲಿ ವಜ್ರಮಹೋತ್ಸವವನ್ನು ಆಚರಿಸಿಕೊಂಡು ಕನ್ನಡ ಸಾಹಿತ್ಯ ಸಂಘ ತನ್ನ ವಾರ್ಷಿಕ ಆಚರಣೆಗಳ ಮೂಲಕ ಹೈದ್ರಾಬಾದ್ ಕರ್ನಾಟಕದಲ್ಲಿ ಅಲ್ಲದೆ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ವಾರ್ಷಿಕ ಆಚರಣೆಗಳಲ್ಲಿ ಸಾಹಿತ್ಯದ ರಸದೌತಣವನ್ನೆ ಉಣಬಡಿಸಿದ್ದಾರೆ. ಅಂತಹ ವಾರ್ಷಿಕ ಆಚರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

೧. ಕನ್ನಡ ರಾಜ್ಯೋತ್ಸವ

ಸುಮಾರು ಎರಡುವರೆ ಸಾವಿರ ಸಂವತ್ಸರಗಳಷ್ಟು ಪ್ರಾಚೀನ ಯುಗದಿಂದ ಕನ್ನಡ ಜ್ಯೋತಿ ಝಗಝಗಿಸುತ್ತ ಅಖಂಡವಾಗಿ ಬೆಳಗುತ್ತಿದೆ. ಕನ್ನಡ ನಾಡಿನ ಕೋಟಿಕೋಟಿ ಚಿನ್ನದ ಮಕ್ಕಳು ತಮ್ಮ ಅಮರ ಆತ್ಮದ ಚೈತನ್ಯ ತೈಲವನ್ನು ಎರೆದು ಹೊತ್ತಿಸಿರುವದರಿಂದ ಈ ಜ್ಯೋತಿಯ ಪ್ರಕಾಶವು ಕುಂದದೆ ನಂದದೆ ದೇದಿಪ್ಯಮಾನವಾಗಿ ಬೆಳಗುತ್ತದೆ. ಭಾರತ ರಾಷ್ಟ್ರಮಾತೆಯೆ ಪವಿತ್ರ ಮಂದಿರದಲ್ಲಿ ಹಲವು ನಾಡುಗಳ ಹಲವು ಜ್ಯೋತಿಗಳು ನಿರಂತರ ಜಾಜ್ವಲ್ಯದಾಮಾನವಾಗಿದೆ. ಅವುಗಳ ಮಾಲಿಕೆಯಲ್ಲಿ ಈ ಕನ್ನಡ ಜ್ಯೋತಿ ತನಗಾಗಿ ಒಂದು ಅಚಲ ಸ್ಥಾನವನ್ನು ಕಲ್ಪಿಸಿ ಕೊಂಡಿದೆ. ನಾಗರೀಕತೆ, ರಾಜ್ಯ ನಿರ್ಮಾಣ, ಭಾಷೆ, ಸಾಹಿತ್ಯ, ವಿದ್ಯೆ, ವಿಜ್ಞಾನ, ಧರ್ಮ ಹಾಗೂ ಕಲೆ ಇತ್ಯಾದಿ. ನಾನಾ ರಂಗಗಳಲ್ಲಿನ ವಿಶೇಷ ಸಾಧನೆಗಳಿಂದಾಗಿ ಈ ಜ್ಯೋತಿ ವರ್ಣಮಯ ಕಾಂತಿಯಿಂದ ರಾರಾಜಿಸುತ್ತಿದೆ.

ಇಂತಹ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕನ್ನಡ ನಾಡಿನ ಉತ್ಸವವನ್ನು ಕರ್ನಾಟಕ ರಾಜ್ಯೋತ್ಸವ ಅಥವಾ ಕನ್ನಡ ರಾಜ್ಯೋತ್ಸವವನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ೧೯೫೬ರಿಂದ ಆಚರಿಸಿಕೊಂಡು ಬರುತ್ತಿದೆ. ಈ ಆಚರಣೆಯ ಮೂಲಕ ಕನ್ನಡನಾಡಿನ ಗತ ವೈಭವವನ್ನು ಹೆಚ್ಚಿಸುವಂತ ಕಾರ್ಯಕ್ರಮಗಳನ್ನು ಇಂದಿಗೂ ಆಚರಿಸುತ್ತಾ ಬಂದಿದೆ. ಕವಿಗಳು, ಸಾಹಿತಗಳು, ಗಣ್ಯವ್ಯಕ್ತಿಗಳನ್ನು ಕರೆಯಿಸಿ ಉಪನ್ಯಾಸಗಳನ್ನು ಏರ್ಪಡಿಸುವುದೇ ಮೂಲ ಜನರಲ್ಲಿ ನಾಡಿನ ಬಗ್ಗೆ ದೇಶಿಭಕ್ತಿಯನ್ನು ಹೆಚ್ಚಿಸುವಂತ ಕೆಲಸ ಮಾಡುತ್ತಿದೆ.

೨. ನಾಡಹಬ್ಬ ಉತ್ಸವ

"ಸುರಪುರದ 'ನಾಡಹಬ್ಬ ಉತ್ಸವ' ಸಗರನಾಡಿಗೆ ಹೆಸರುವಾಸಿಯಾಗಿದೆ. ಇಲ್ಲಿನ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ೧೯೪೩ರಿಂದಲೆ ನಾಡಹಬ್ಬ ಉತ್ಸವವನ್ನು ಐದು ದಿನಗಳಕಾಲ ವಿಜೃಂಬಣೆಯಿಂದ ಆಚರಿಸುತ್ತಾ ಬಂದಿದೆ. ಮೊದಲನೆಯ ದಿನ ನಾಡ ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರವನ್ನು ಗಲ್ಲಿ ಗಲ್ಲಿಯಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಗುತ್ತದೆ. ಉತ್ಸವದ ಸಂದರ್ಭದಲ್ಲಿ ಗಾಂಧೀ ಸ್ವಯಂ ಸೇವಾ ಸಂಘ ಹಾಗೂ ಆಝಾದ ಯುವಕರ ಸಂಘಗಳು ಸಮಾರಂಭವನ್ನು ಸುವ್ಯವಸ್ಥಿತವಾಗಿ ನಡೆಯುವಂತೆ ಇವತ್ತಿಗೂ ಕೂಡ ಜವಬ್ದಾರಿಯುತ ಕಾರ್ಯವನ್ನು ಮಾಡುತ್ತಿವೆ. ಮೆರವಣಿಗೆಯುದ್ದಕ್ಕೂ ಶಿಸ್ತು ಕಾಪಾಡುವುದು, ಕವಾಯತ್, ದೈಹಿಕ ಕಸರತ್ತು, ಬಡಿಗೆ ತಿರಿಗಿಸುವುದು ಈ ಭಾಗದ ಉತ್ಸವಗಳಲ್ಲಿನ ವಿಶೇಷತೆ"[೭].

ಈ ಕಾರ್ಯಕ್ರಮಕ್ಕೆ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಜನರು ಸಾಗರೋಪಾದಿಯಲ್ಲಿ ಹರಿದು ಬಂದು ಸೇರುತ್ತಾರೆ.

ನಾಡಿನ ಪ್ರಸಿದ್ಧ ಸಾಹಿತಗಳು, ಕವಿಗಳು, ಗಣ್ಯವ್ಯಕ್ತಿಗಳನ್ನು ಆಹ್ವಾನಿಸಲಾಗುತ್ತದೆ. ಐದು ದಿನಗಳವರೆಗೂ ಭಾಷಣಗಳು, ಹಾಡುಗಳು, ಮೂಕಾಭಿನಯ, ಹೆಣ್ಣುಮಕ್ಕಳಿಂದ ನೃತ್ಯ ಕಾರ್ಯಕ್ರಮ ಗಳನ್ನು ಏರ್ಪಡಿಸಲಾಗುತ್ತದೆ. ಈ ಸಮಾರಂಭದಲ್ಲಿ ಸಾಹಿತ್ಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿ ಗಳಿಗೆ ಪ್ರಶಸ್ತಿ ಹಾಗೂ ಸನ್ಮಾನವನ್ನು ಮಾಡಿ ಗೌರವಿಸಲಾಗುತ್ತಿದೆ. ನಾಡಹಬ್ಬದಲ್ಲಿ ಸುತ್ತಲಿನ ಗ್ರಾಮಗಳಿಂದ ಹೆಣ್ಣುಮಕ್ಕಳು ಗಂಡಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಾತ್ರೆಗಳಲ್ಲಿ ಭಾಗವಹಿಸಿದಂತೆ ಸೇರುತ್ತಾರೆ. ಇಂತಹ ಕಾರ್ಯಕ್ರಮಗಳನ್ನು ಆಚರಿಸಿಕೊಂಡು ಬಂದಂತ ಸಾಹಿತ್ಯ ಸಂಘ ೨೦೦೪ರಲ್ಲಿ ತನ್ನ 'ವಜ್ರಮಹೋತ್ಸವ'ವನ್ನು ಆಚರಿಸಿಕೊಂಡಿತು.

೩. ಸ್ಮಾರಕ ಉಪನ್ಯಾಸ ಮಾಲೆಗಳು

ಸಾಹಿತ್ಯಕ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಕನ್ನಡ ಸಾಹಿತ್ಯ ಸಂಘ ವಿವಿಧ ಸ್ಮಾರಕ ಉಪನ್ಯಾಸಮಾಲೆಗಳನ್ನು ಆರಂಭಿಸಿ ಅವುಗಳನ್ನು ವಾರ್ಷಿಕವಾಗಿ ಆಚರಣೆಗಳಾಗಿ ರೂಪಿಸಿ ಕೊಂಡಿತು.

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭವಾದದ್ದೆ ಕನ್ನಡ ಬದ್ಧತೆಯ ಮೇಲೆ ಉರ್ದು ಮಯವಾಗಿದ್ದ ಅಂದಿನ ಹೈದ್ರಾಬಾದ್ ಕರ್ನಾಟಕದಲ್ಲಿ ತುಳಿತಕ್ಕೊಳಗಾಗಿದ್ದ ಕನ್ನಡವನ್ನು ಮೇಲುಕೆತ್ತುವುದು. ಅಲ್ಲದೆ ಜನರನ್ನು ಸ್ವಾತಂತ್ರ್ಯದತ್ತ ಮುನ್ನುಗ್ಗುಲು ಜನರನ್ನು ಪ್ರೇರೆಪಿಸಬೇಕಾಗಿತ್ತು. ಇಂತಹ ಜವಬ್ದಾರಿಗಳನ್ನು ಹೊತ್ತುಕೊಂಡು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತನ್ನ ಗುರಿಯನ್ನು ಮುಟ್ಟಬೇಕಾಗಿತ್ತು ಆ ಕಾರಣಕ್ಕಾಗಿಯೇ ಈ ಕೆಳಗಿನ ಸ್ಮಾರಕ ಉಪನ್ಯಾಸ ಮಾಲೆಗಳನ್ನು ಆರಂಭಿಸಿತು.

೧. ಗ್ರೀಷ್ಮ ಭಾಷಣ ಮಾಲೆ

ಉರ್ದುವಿನ ಕಪಿಮುಷ್ಟಿಯಿಂದ ಕನ್ನಡ ಭಾಷೆಯನ್ನು ಬಿಡಿಸಿಕೊಳ್ಳುವ ಹಿನ್ನಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಅವುಗಳಲ್ಲಿ ಈ ಸ್ಮಾರಕೋಪನ್ಯಾಸ ಮಾಲೆಗಳು ಜನರ ಮೇಲೆ 'ಸ್ವಾತಂತ್ರ್ಯ ಹಾಗೂ ಸ್ವಾಭಿಮಾನ'ದ ಪರಿಣಾಮವನ್ನು ಬಿರಿದವು. ಸಂಘದ ಮೊಟ್ಟಮೊದಲ ಭಾಷಣ ಮಾಲೆಯನ್ನು ೨೯ನೇ ಆಗಸ್ಟ ೧೯೫೪ರಂದು ಆರಂಭಿಸಲಾಯಿತು. 'ಗ್ರೀಷ್ಮ ಭಾಷಣ ಮಾಲೆಯು ಶ್ರೀ ರಾಮಣ್ಣ ಬೋಡಾರವರ ಅಧ್ಯಕ್ಷತೆಯಲ್ಲಿ ಆರಂಭಿಸಲಾಯಿತು ಗ್ರೀಷ್ಮ ಭಾಷಣ ಮಾಲೆಯ ಸರಣಿಯಲ್ಲಿ ಉಪನ್ಯಾಸಗಳು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಮಹಿಳೆಯರ ಅಭಿವೃದ್ಧಿಗೋಸ್ಕರ ಪ್ರತ್ಯೇಕವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿತ್ತು. ಇಂತಹ ಕಾರ್ಯಕ್ರಮ ಗಳನ್ನು ಕನ್ನಡ ಸಾಹಿತ್ಯ ಸಂಘ ಅವಿರತವಾಗಿ ನಡೆಸುತ್ತಾ ಬಂದಿದೆ.

೨. ಶರತ್ ಸಾಹಿತ್ಯ ಸಪ್ತಾಹ

"ನೀನು ಬದುಕುವುದರ ಜೊತೆಗೆ ಇತರರನ್ನು ಬದುಕಿಸು" ಎನ್ನುವಂತೆ 'ರಂಗಂಪೇಟೆ ಕನ್ನಡ ಸಾಹಿತ್ಯ' ಸಂಘ ಕೇವಲ ಕನ್ನಡದ ಅಭಿವೃದ್ಧಿಗೆ ಶ್ರಮಿಸದೆ ಅದರ ಜೊತೆಗೆ ಹೈದ್ರಾಬಾದ್ ಕರ್ನಾಟಕದ ಇತರ ಭಾಷೆಗಳಾದ ತೆಲಗು, ಮರಾಠಿ, ಉರ್ದು, ಹಿಂದಿ ಮತ್ತು ಸಂಸ್ಕೃತ ಭಾಷೆ ಗಳಲ್ಲಿನ ಸಾಹಿತ್ಯವನ್ನು ಬೆಳೆಸುವ ಉದ್ದೇಶದಿಂದ 'ಶರತ್ ಸಾಹಿತ್ಯ ಸಪ್ತಾಹ' ಎನ್ನುವ ಈ ಮಾಲೆಯನ್ನು ಆರಂಭಿಸಲಾಯಿತು. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕಾರ್ಯಕ್ರಮಗಳಲ್ಲಿನ ವಿಶೇಷತೆ ಎಂದರೆ ಪ್ರತಿ ಕಾರ್ಯಕ್ರಮದಲ್ಲಿಯು ಒಂದು ದಿನ ಮಹಿಳೆಯರಿಗಾಗಿ ಮಿಸಲಿಟ್ಟಿದನ್ನು ಕಾಣುತ್ತೇವೆ. ಹಾಗಾಗಿ ಮಹಿಳೆಯರ ಬಗ್ಗೆ ಸಂಘ ಹೊಂದಿದ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಈ ಸಪ್ತಾಹವನ್ನು ಶ್ರೀ ರಾಮಣ್ಣ ಬೋಡಾರವರು ಅಧ್ಯಕ್ಷರಾಗಿದ್ದಾಗಲೇ ನವೆಂಬರ್ ೦೪, ೧೯೫೪ರಿಂದ ಎಂಟು ದಿನಗಳವರೆಗೆ ನಡೆಸಲಾಗಿತ್ತು. ಪ್ರಾರಂಭದ ವರ್ಷದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಶ್ರೀ ಬುದ್ಧಿವಂತಶೆಟ್ಟಿ, ಸಂಸ್ಕೃತ ಸಾಹಿತ್ಯ ಪೆರುಮಾಳ ಗುಂಡಾಚಾರ್ಯ, ತೆಲುಗು ಸಾಹಿತ್ಯ ಶ್ರೀ ಭಾರತಿ ಕಸ್ತೂರಿ, ಮರಾಠಿ ಸಾಹಿತ್ಯ ಸಗರ ಕೃಷ್ಣಾಚಾರ, ಉರ್ದು ಸಾಹಿತ್ಯ ಖಾಜಾಪೀರ್ ಸಾಬ ಗೋಗಿ, ಹಿಂದಿ ಸಾಹಿತ್ಯ ಕೃಷ್ಣಮಾಚಾರ್ಯ, ಮಹಿಳಾ ಸಾಹಿತ್ಯ ಸಗರ ಗಂಗಾದೇವಿ, ಈ ರೀತಿಯಾಗಿ ಎಲ್ಲ ಭಾಷೆಯ ಸಾಹಿತ್ಯಕ್ಕಾಗಿ ಒಂದೊಂದು ದಿನದ ಕಾರ್ಯಕ್ರಮನ್ನು ನಡೆಸ ಲಾಯಿತು. ಈ ರೀತಿ ಆರಂಭವಾದ ಶರತ್ ಸಾಹಿತ್ಯ ಸಪ್ತಾಹ ಹೈದ್ರಾಬಾದ್ ಕರ್ನಾಟಕದ ಅನ್ಯ ಭಾಷಾ ಸಾಹಿತ್ಯದ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

೩. ಹೇಮಂತ ಭಾಷಣ ಮಾಲೆ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಹನ್ನೊಂದನೆ ವರ್ಷದ ವಾರ್ಷಿಕೋತ್ಸವ ಆಚರಿಸಿ ಕೊಳ್ಳುವ ಸಂದರ್ಭದಲ್ಲಿ ಆರಂಭಿಸಲಾಯಿತು. ಶ್ರೀ ರಾಮಣ್ಣ ಬೋಡಾರವರು ಸಂಘದ

ಅಧ್ಯಕ್ಷರಾದರೂ ಶ್ರೀ ಸಗರ ಕೃಷ್ಣಾಚಾರ್ಯ ಅವರ ನೇತೃತ್ವದಲ್ಲಿ ಡಿಸೆಂಬರ್ ೦೧, ೧೯೫೭ ರಂದು ಹೇಮಂತ ಭಾಷಣ ಮಾಲೆಯನ್ನು ಆರಂಭಿಸಲಾಯಿತು.

ಈ ಕಾರ್ಯಕ್ರಮವನ್ನು ಏಳುದಿನಗಳವರೆಗೆ ಹಮ್ಮಿಕೊಳ್ಳಲಾಗುತ್ತದೆ. ಆರು ದಿವಸಗಳವರೆಗೆ ವಿಶೇಷ ಉಪನ್ಯಾಸಗಳಿದ್ದರೆ ಒಂದು ದಿವಸ ಮಹಿಳೆಯರಿಗಾಗಿ ಮಿಸಲಿಡಲಾಗುತ್ತಿತ್ತು. ಆರಂಭಿಕ ಕಾರ್ಯಕ್ರಮದಲ್ಲಿ 'ಕವಿ ಮತ್ತು ಕಾವ್ಯ' ಕುರಿತು ಅಷ್ಟವಧಾನಿ ನರಸಿಂಹಶಾಸ್ತ್ರೀಗಳು, 'ಪ್ರಕೃತಿ ಮತ್ತು ಪುರಷ' ವಿಷಯ ಕುರಿತು ರುದ್ರಸ್ವಾಮಿಗಳು, 'ಜನ್ನನ ಯಶೋಧರ ಚರಿತೆ' ಕುರಿತು ಶ್ರೀ ಬುದ್ಧಿವಂತಶೆಟ್ಟರು, 'ವಾಲ್ಮೀಕಿ ರಾಮಾಯಣದಲ್ಲಿ ಆದರ್ಶ ಪಾತ್ರಗಳು' ರಘೋತ್ತಮಚಾರ್ಯ, ಪಂಚವಾರ್ಷಿಕ ಯೋಜನೆ ಬಂಡಿಗುರಾಚಾರ್ಯ, ಹರಿಹರನ ಬಸವರಾಜ ದೇವರ ರಗಳೆ ಕುರಿತು ಸಗರ ಕೃಷ್ಣಚಾರಿ, 'ವಚನಸಾಹಿತ್ಯ'ವನ್ನು ಕುರಿತು ರುದ್ರಸ್ವಾಮಿಗಳು ಮಾತನಾಡಿದರು ಕೊನೆಯದಿನ 'ಜನಪದ ಸಾಹಿತ್ಯ' ಕುರಿತು ಮುಮ್ಮಡಿ ಶಿವಣ್ಣನವರು ಮಾತನಾಡಿದರು. ಮಹಿಳಾದಿನದಂದು 'ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಸ್ಥಾನ' ಕುರಿತು ಮಾತನಾಡಿದರು. ಹೀಗೆ ವಿಶೇಷವಾದ ಕಾರ್ಯ ಕ್ರಮವನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಸಂಘಟಿಸುತ್ತಾ ಬರುತ್ತಿದೆ.

೧೯೫೭ರ ಹೇಮಂತಮಾಸದಲ್ಲಿ ಆರಂಭದ 'ಹೇಮಂತ ಭಾಷಣ ಮಾಲೆಯ ಅಡಿಯಲ್ಲಿ ಇಂದಿಗೂ ಕೂಡ ಸಗರನಾಡಿನ ಸಾಹಿತ್ಯಸಕ್ತರಿಗೆ ಕಾಮದೇನುವಿನಂತೆ ಕೆಲಸಮಾಡುತ್ತಿದೆ. ಪ್ರತಿ ವರ್ಷವು ಹೊಸ ಹೊಸ ಮುಖಗಳನ್ನು ಪರಿಚಯಿಸುವ ಗುರಿಯನ್ನು ಹೊಂದಿದೆ.

ಹೀಗೆ ಹಲವಾರು ಗ್ರಂಥಮಾಲೆ, ಸಾಹಿತ್ಯ ಉಪನ್ಯಾಸಮಾಲೆಗಳನ್ನು ಆರಂಭಿಸುವದರೊಂದಿಗೆ ಈ ಎಲ್ಲ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ತಪ್ಪದೆ ಅವಕಾಶಮಾಡಿಕೊಟ್ಟಿತು. ಹೀಗೆ ಸ್ಮಾರಕ ಉಪನ್ಯಾಸ ಮಾಲೆಗಳಲ್ಲಿ ಉಪನ್ಯಾಸ ಭಾಷಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬರಲಾಗುತ್ತಿದೆ.

೩. ವಾರ್ಷಿಕೋತ್ಸವ

ರಂಗಂಪೇಟೆ ಕನ್ನಡ ಸಾಹಿತ್ಯಸಂಘ ಸ್ಥಾಪನಾದಿನವನ್ನು ವಾರ್ಷಿಕೊತ್ಸವದಿನವನ್ನಾಗಿ ಆಚರಿಸ ಲಾಗುತ್ತಿದೆ. ಒಂದು ವರ್ಷದ ಸಾಧನೆಯನ್ನು ಮೆಲಕುಹಾಕುವುದರ ಜೊತೆಗೆ ಮುಂದಿನ ಗುರಿ ಮತ್ತು ಉದ್ದೇಶಗಳನ್ನು ನಿರ್ಣಯಿಸಲಾಗುತ್ತದೆ. ಜೊತೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗುತ್ತದೆ. ಈ ಕಾರ್ಯಕ್ರಮವನ್ನು ವಾರ್ಷಿಕ ಆಚರಣೆಯ ರೂಪದಲ್ಲಿ ಆಚರಿಸಲಾಗುತ್ತದೆ.

೪. ಗಜಾನನ ಉತ್ಸವ

ಗಜಾನನ ಉತ್ಸವವನ್ನು ರಾಷ್ಟ್ರಮಟ್ಟದಲ್ಲಿ ಮೊಟ್ಟಮೊದಲ ಬಾರಿಗೆ ಹುಟ್ಟುಹಾಕಿದವರು ಬಾಲಗಂಗಾಧರ ತಿಲಕರು. ಇವರು ಸ್ವಾತಂತ್ರ್ಯದ ಕಹಳೆಯನ್ನು ಊದಲು ಗುಪ್ತವಾಗಿ ಜನರನ್ನು ಒಂದಡೆ ಸೇರಿಸುವುದು ಮತ್ತು ಆ ಮೂಲಕ ರಾಷ್ಟ್ರೀಯ ಏಕತೆಯನ್ನು ಸಾಧಿಸುವುದಾಗಿತ್ತು. ಹೀಗಾಗಿ

ಇದನ್ನು ರಾಷ್ಟ್ರೀಯ ಹಬ್ಬವೆಂದು ಆಚರಿಸಲಾಗುತ್ತಿತ್ತು. ಮುಂದೆ ಇದರ ಪ್ರಭಾವವೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಮೇಲೆ ಬೀರಿತು. ಹೀಗಾಗಿ ಇಲ್ಲಿಯು ನಿಜಾಮನ ವಿರುದ್ಧ ಭಾಷೆ ಹಾಗೂ ಸಂಸ್ಕೃತಿಯ ದರ್ಪವನ್ನು ತೊಡೆದುಹಾಕಿ ಸ್ವಾತಂತ್ರ್ಯದತ್ತ ಮುನ್ನುಗ್ಗಲು ಈ ಗಜಾನನ ಉತ್ಸವವನ್ನು ಆರಂಭಿಸಲಾಯಿತು. ಎಲ್ಲಾ ಕನ್ನಡ ಪರ ಹೋರಾಟಗಾರರು ಒಂದಡೆ ಸೇರಿಸುವುದೆ ಇದರ ಉದ್ದೇಶವಾಗಿತ್ತು. ಈ ಗಜಾನನ ಉತ್ಸವವನ್ನು ಶ್ರೀ ಎಂ.ಆರ್. ಬುದ್ಧಿವಂತಶೆಟ್ಟರ ನೇತೃತ್ವದಲ್ಲಿ ಆರಂಭಿಸಲಾಯಿತು.

೫. ಕವಿಗೋಷ್ಠಿ ಸಾಹಿತ್ಯಗೋಷ್ಠಿ, ಸಂಗೀತ ಗೋಷ್ಠಿಗಳು

ಈ ಕಾರ್ಯಕ್ರಮ ಸಾಹಿತ್ಯಸಂಘದ ಆಚರಣೆಗಳಲ್ಲಿಯೇ ವಿಶೇಷತೆಯನ್ನು ಪಡೆದುಕೊಂಡಿದೆ. ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವೆಂದು ಹಣೆಪಟ್ಟಿ ಹೊಂದಿದ್ದರು ಇಲ್ಲಿ ಪ್ರತಿಭೆಗಳಿಗೆ ಭರವಿಲ್ಲ. ಆ ಪ್ರತಿಭೆಗಳನ್ನು ಪುರಸ್ಕರಿಸುವಂತ ಮನಸ್ಸುಗಳ ಕೊರತೆ ಇತ್ತು. ಆ ಕೊರತೆಯನ್ನು ತುಂಬುವ ಸಲುವಾಗಿಯೇ ಈ ಭಾಗದ ಕವಿಗಳನ್ನು, ಸಾಹಿತಿಗಳನ್ನು, ಸಂಗೀತಗಾರರನ್ನು ಕರೆಯಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಅವರಲ್ಲಿ ಅಡಗಿರುವ ಸುಪ್ತವಾದ ಪ್ರತಿಭೆಯನ್ನು ಬಡಿ ದೆಬ್ಬಿಸಲು ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮಗಳನ್ನು ಆರಂಭಿಸುವಲ್ಲಿ ಸಂಘದ ಅಷ್ಟದಾನಿ ನರಸಿಂಹಶಾಸ್ತ್ರಿಗಳು, ಶ್ರೀ ಬುದ್ಧಿವಂತಶೆಟ್ಟರ ಪಾತ್ರ ಮಹತ್ತರ ವಾದುದ್ದಾಗಿದೆ.

ಹೀಗೆ ಈ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಕರೆಯಿಸಿ ಪ್ರಶಸ್ತಿ ನೀಡಿ ಸನ್ಮಾನಿಸುವುದು ಒಂದು ಸುತ್ತ್ಯರ್ಹ ಕಾರ್ಯವಾಗಿದೆ.

೬. ನಾಟಕೋತ್ಸವ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದವರು ಹಲವಾರು ದಶಕಗಳಿಂದಲೂ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಸ್ವತಃ ಸಂಘದ ಸದಸ್ಯರುಗಳೆ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಸಾಮಾಜಿಕ ನಾಟಕ, ಪೌರಾಣಿಕ ನಾಟಕ, ಐತಿಹಾಸಿಕ ನಾಟಕ, ಏಕಾಂಕನಾಟಕ ಹೀಗೆ ವಿವಿಧ ರೀತಿಯ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ.

ಒಟ್ಟಿನಲ್ಲಿ ಈ ನಾಟಕಗಳ ಉದ್ದೇಶ ನೈಜಾಂ ಸರ್ಕಾರದ ವಿರುದ್ಧ ಹಾಗೂ ಕನ್ನಡ ಪರವಾಗಿ ಹೋರಾಡಲು ಜನರನ್ನು ಸಜ್ಜುಗೊಳಿಸುವಂತ ಕಥಾವಸ್ತುವನ್ನೆ ಆಯ್ಕೆಮಾಡಿಕೊಳ್ಳಲಾಗುತ್ತಿತ್ತು. ಈಗ ಕಾಲ ಬದಲಾದಂತೆ ಕಥಾವಸ್ತುವಿನಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಹೀಗಾಗಿ ಜನರು ಸಾಗರೋಪಾದಿಯಲ್ಲಿ ಉತ್ಸಾಹದಿಂದ ಸೇರುತ್ತಿದ್ದರು.

೭. ಗಣ್ಯವ್ಯಕ್ತಿಗಳ ನಾಯಕರ ದಿನಾಚರಣೆಗಳು

ದಿನಾಚರಣೆಗಳನ್ನು ಆಚರಣೆ ಮಾಡುವ ಗಣ್ಯವ್ಯಕ್ತಿಗಳ ಮೂಲಕ ವ್ಯಕ್ತಿತ್ವದ ಪರಿಚಯವನ್ನು ಮಾಡಲಾಗುತ್ತದೆ. ಗಣ್ಯ ವ್ಯಕ್ತಿಗಳ, ನಾಯಕರ ಜೀವನ ಹಾಗೂ ಸಾಧನೆಗಳ ವಿವರವನ್ನು

ನೀಡುವುದರ ಮೂಲಕ ಜನರನ್ನು ಸ್ವಾತಂತ್ರ್ಯದತ್ತ ಪ್ರಚೋದಿಸಲಾಗುತ್ತಿತ್ತು. ವಿದ್ಯಾರ್ಥಿಗಳು ಯುವಕರು ಭಾಷಣಗಳಲ್ಲಿ ಭಾಗವಹಿಸುತ್ತಿದ್ದರು. ಮಹಾನ್ ವ್ಯಕ್ತಿಗಳ ಘೋಷಣೆಗಳನ್ನು ಅವರ ಚಿಂತನೆಗಳನ್ನು ಈ ಸಂದರ್ಭದಲ್ಲಿ ಅನಾವರಣ ಗೊಳಿಸಲಾಗುತ್ತಿತ್ತು. ಆ ಮೂಲಕ ಜನರಲ್ಲಿ ಸದ್ಭಾವನೆಗಳನ್ನು ತುಂಬುವುದರ ಜೊತೆಗೆ ನಾಡಿನ ಸಾಂಸ್ಕೃತಿಕ ಏಳಿಗೆಯಲ್ಲಿ ಮಹತ್ವದ ಪಾತ್ರವಹಿಸುವಂತೆ ಮಾಡುತ್ತಿದ್ದರು.

ಹೀಗೆ ಹಲವಾರು ವಾರ್ಷಿಕ ಆಚರಣೆಗಳನ್ನು ಆಚರಿಸುವುದರ ಮೂಲಕ ಸಾಹಿತ್ಯದ ಚಿಲುಮೆಯನ್ನು ಹರಿಸಲಾಗುತ್ತಿತ್ತು. ಹೀಗಾಗಿ ಹೈದ್ರಾಬಾದ್ ಕರ್ನಾಟಕದ ಪ್ರತಿಷ್ಠಿತ ಸಾಹಿತ್ಯ ಸಂಘಗಳಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ತನ್ನದೆಯಾದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

ಕ. ಸಂಘದ ಸಾಹಿತ್ಯಿಕ ಪ್ರಕಟಣೆಗಳು

ಯಾವುದೇ ಸಾಹಿತ್ಯದ ಬೆಳೆವಣಿಗೆಯಲ್ಲಿ ಮತ್ತು ಅದರ ಪ್ರಸಾರದಲ್ಲಿ ಕೃತಿಗಳು ಇಂದು ಮಹತ್ವದ ಪಾತ್ರವನ್ನು ವಹಿಸುತ್ತವೆ. ಆರಂಭದ ದಿನಗಳಲ್ಲಿ ಪುಸ್ತಕ ಪ್ರಕಟಣೆ ಅದೊಂದು ಸಾಹಿತ್ಯದ ಬೆಳವಣಿಗೆಯ ಒಂದು ಸಾಧನವಾಗಿದ್ದರೆ ಇಂದಿನ ಜಾಗತೀಕರಣ, ವ್ಯಾಪಾರಿಕರಣ, ಕೈಗಾರಿಕರಣ ಯುಗದಲ್ಲಿ ಪ್ರಕಾಶನ ಸಂಸ್ಥೆಗಳು 'ಉದ್ಯಮ'ವನ್ನಾಗಿ ಮಾಡಿಕೊಂಡಿವೆ.

ಹೈದ್ರಾಬಾದ್ ಕರ್ನಾಟಕದ ಭಾಗವು ಸ್ವಾತಂತ್ರ್ಯ ಪೂರ್ವದಲ್ಲಿ ನಿಜಾಂನ ಆಳ್ವಿಕೆಗೆ ಒಳಪಟ್ಟದ್ದರಿಂದ 'ಉರ್ದು ಭಾಷೆ' ರಾಜ್ಯ ಭಾಷೆಯಾಗಿತ್ತು. ಉರ್ದು ಭಾಷೆಯಲ್ಲಿ ಯಾವುದೇ ಪತ್ರಿಕೆಗಳು, ಕೃತಿಗಳನ್ನು ಪ್ರಕಟಿಸಬಹುದಾಗಿತ್ತು. ನಿಜಾಂ ಅವರ ಧಮನಕಾರಿ ನೀತಿಯಿಂದ ಕನ್ನಡದ ಮುದ್ರಣ ಪ್ರಕಟಣೆಗಳು, ಗಣನೀಯವಾಗಿ ಇಳಿಮುಖ ಹೊಂದಿದ್ದವು. ನಿಜಾಂ ಸರ್ಕಾರ ಮುದ್ರಣಕ್ಕೆ ಬೇಕಾದ ಕಾಗದವನ್ನಾಗಲಿ, ಮುದ್ರಣಕಾರ್ಯಕ್ಕಾಗಲಿ ಅನುಮತಿಕೊಡುವಾಗ ಗೃಹ ಸಚಿವಾಲಯ ತಾರತಮ್ಯ ನೀತಿಯನ್ನು ಅನುಸರಿಸುತ್ತಿತ್ತು.

ಇಂತಹ ಕಠಿಣ ಪರಸ್ಥಿತಿಯಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಕನ್ನಡ ಭಾಷೆ, ಸಂಸ್ಕೃತಿ, ರಕ್ಷಣೆಯಲ್ಲಿ ತೊಡಗಿತ್ತು. ಜೊತೆಗೆ ಪ್ರಚಾರ ಮತ್ತು ಪ್ರಸಾರದ ಕಾರ್ಯದಲ್ಲಿ ಮಗ್ನವಾಗಿತ್ತು. ಈ ಭಾಗದ ಸಾಹಿತಿಗಳನ್ನು ಲೇಖಕರನ್ನು, ಕವಿಗಳನ್ನು ಪ್ರೋತ್ಸಾಹಿಸಿ ಬೆಳೆಸುವುದರ ಸಲುವಾಗಿ ಪ್ರಕಟಣೆ ಕಾರ್ಯದಲ್ಲಿ ತೊಡಗಿತ್ತು.

ಈ ಉದ್ದೇಶದಿಂದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ 'ಅರುಣಾಗ್ರಂಥಮಾಲೆ' ಹಾಗೂ 'ಮಿರಿಯಾಲ ರಂಗಯ್ಯ ಸ್ಮಾರಕಮಾಲೆ' ಎಂಬ ಎರಡು ಕಾರ್ಯಕ್ರಮ ಹಮ್ಮಿಕೊಂಡಿತು. ಅರುಣ ಗ್ರಂಥಮಾಲೆಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಆರಂಭಿಸಲಾಯಿತು. ೧೯೪೪ರಲ್ಲಿ 'ಮಧುರ ಮಿಲನ'ದ ಪ್ರಕಟಣೆಯಿಂದ ಆರಂಭಿಸಲಾಯಿತು. ಅರುಣ ಗ್ರಂಥಮಾಲೆಯ ಅಡಿಯಲ್ಲಿ ಎರಡು

ಕೃತಿಗಳನ್ನು ಮುದ್ರಿಸಲಾಯಿತು. ನಂತರದ ದಿನದಲ್ಲಿ 'ಮಿರಿಯಾಲ ರಂಗಯ್ಯ ಸ್ಮಾರಕ ಮಾಲೆಯನ್ನು ಆರಂಭಿಸಿ ಶ್ರೀ ಸೀತಾರಾಮ ಜಾಗೀರದಾರ ಅವರ ಗ್ರಂಥ ಸಂಪಾದನಾಶಾಸ್ತ್ರ ಪರಿಚಯ' ಕೃತಿಯನ್ನು ಮುದ್ರಿಸುವದರೊಂದಿಗೆ ಆರಂಭಿಸಲಾಯಿತು.

ಹೀಗೆ ಕಳೆದ ೬೫ ವರ್ಷಗಳಿಂದ ಯಾವುದೆ ಸರ್ಕಾರದಿಂದ ಅನುದಾನವಿಲ್ಲದೆ ಸ್ವಯಂ ಆಸಕ್ತಿಯಿಂದ ಇಲ್ಲಿಯವರೆಗೆ 'ಹದಿನಾಲ್ಕು' ಕೃತಿಗಳನ್ನು ಪ್ರಕಟಿಸಿದೆ. ಇದುವರೆಗೂ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸಾಧನೆಯನ್ನು ಕರ್ನಾಟಕದ ಸರ್ಕಾರವಾಗಲಿ, ಕನ್ನಡ ಸಾಹಿತ್ಯ ಪರಿಷತ್ ಆಗಲಿ ಗಮನಿಸದೆ ಇರುವುದು ದುರಾದೃಷ್ಟಕರ ವಿಷಯವಾಗಿದೆ.

ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಗಳು

ಹೀಗೆ ಒಟ್ಟು ಹದಿನಾಲ್ಕು ಕೃತಿಗಳನ್ನು ಹೊರತಂದಿದೆ. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ 'ಕವನ ಕುಸುಮ' ಕವನ ಸಂಕಲನವನ್ನು ೧೯೫೫ರಲ್ಲಿ ಪ್ರಕಟಿಸಿ ಹೊರತಂದಾಗ ೧೮.೬.೧೯೫೬ರ ಕರ್ಮವೀರ ಪತ್ರಿಕೆ ಹಾಗೂ ೭.೪.೧೯೫೫ರ ನವಯುಗ ಪತ್ರಿಕೆಯಲ್ಲಿ ಕವನ ಸಂಕಲನವನ್ನು ಕುರಿತ ಲೇಖನಗಳು ಪ್ರಕಟವಾದವು. ಅದರ ಒಂದು ಭಾಗ ಈ ಕೆಳಗಿನಂತಿದೆ.

ಪ್ರಕಟಣೆಗಳು

ಕೃತಿಯ ಹೆಸರು	ಲೇಖಕರು	ಮುದ್ರಣವರ್ಷ
೧. ಮಧುರ ಮಿಲನ (ಕಥಾಸಂಕಲನ)	ಸಂ. ರಂ.ಕ.ಸಾ.ಸು.ವ.	೧೯೪೪
೨. ಜೀವನ ಸಂಸಾರ (ನಾಟಕ)	ಲೇ. ಸಗರಕೃಷ್ಣಚಾರಿ	೧೯೪೬
೩. ಕವನ ಕುಸುಮ (ಕವನ ಸಂಕಲನ) (ಮುನ್ನುಡಿ ಶ್ರೀ ವಿ.ಕೃ. ಗೋಕಾಕ್)	ಸಂ. ಎಂ.ಆರ್. ಬುದ್ಧಿವಂತಶೆಟ್ಟಿ	೧೯೫೫
೪. ಸಾಹಿತ್ಯಸುಧೆ (ಪ್ರಬಂಧ ಸಂಕಲನ) (ಮುನ್ನುಡಿ ಶ್ರೀ ವಿ.ಕೃ. ಗೋಕಾಕ್)	ಸಂ. ರಾಘುವೇಂದ್ರ ಕಟ್ಟಿ	೧೯೬೪
೫. ಬೃಂದಾವನ (ಕವನ ಸಂಕಲನ) (ಮುನ್ನುಡಿ ಡಾ. ರಂ.ಶ್ರೀ. ಮುಗುಳಿ)	ಸಂ. ರಾಘುವೇಂದ್ರಕಟ್ಟಿ	೧೯೬೫
೬. ರಕ್ತಾಭಿಷೇಕ (ಐತಿಹಾಸಿಕ ನಾಟಕ) (ಮುನ್ನುಡಿ ತಿ.ತಾ. ಶರ್ಮಾ)	ಲೇ. ಆರ್. ರೇವಣಸಿದ್ದಯ್ಯ	೧೯೬೯
೭. ಕಾವ್ಯಶ್ರೀ (ಕವನ ಸಂಕಲನ) (ಮುನ್ನುಡಿ ಸಿದ್ಧಯ್ಯ ಪುರಾಣಿಕ)	ಸಂ. ಪ್ರೊ. ವಸಂತ ಕುಷ್ಟಗಿ	೧೯೭೦
೮. ಗುಲಾಬಿ ಗೊಂಚಲು (ಮಕ್ಕಳ ಕವನ ಸಂಕಲನ)	ಪ್ರ.ಕಂ.ಸಾ.ಸಂ.	೧೯೭೩

೯. ಗ್ರಂಥ ಸಂಪಾದನಾಶಾಸ್ತ್ರ ಪರಿಚಯ	ತೇ.ಸೀತಾರಾಮ ಜಾಗೀರದಾರ	೧೯೭೮
೧೦. ಆಧುನಿಕ ಭಾರತದ ಸಪ್ತರ್ಷಿಗಳು	ತೇ ಪಿ.ಎಂ. ಗಲಿಗಲಿ	೧೯೮೦
೧೧. ಮೆಡೋಸ್ ಟೇಲರ್ (ಮುನ್ನುಡಿ ಸೂರ್ಯನಾಥ ಕಾಮತ್)	ಡಾ. ಆರ್.ಎಸ್. ಚುಳಕಿ	೧೯೮೯
೧೨. ಋಣಾನುಬಂಧ (ಏಕಾಂತ ನಾಟಕ)	ಡಾ. ಆರ್.ಎಸ್. ಚುಳಕಿ	೧೯೮೯
೧೩. ಸೊಹರಾಬ್ ಮತ್ತು ರುಸ್ತುಂ (ನಿಗವನ) (ಮುನ್ನುಡಿ ಡಾ. ಎಚ್.ಟಿ ನಾಸನೂರು)	ಡಾ. ಆರ್.ಎಸ್. ಚುಳಕಿ	೧೯೯೦
೧೪. ವಜ್ರದಿಪ್ತಿ (ವಜ್ರಮಹೋತ್ಸವ ಸ್ಮರಣ ಸಂಚಿಕೆ)	ಸಂ. ನಾಗಪ್ಪ ತ್ರಿವೇದಿ	೨೦೦೪

"ಚೆಲ್ಲಾ ಪಿಲ್ಲಿಯಾಗಿ ಬಿದ್ದಂತಿರುವ ಕನ್ನಡನಾಡಿನ ಪ್ರದೇಶಗಳು ಇಷ್ಟರಲ್ಲಿಯೇ ಒಂದೇ ರಾಜ್ಯವಾಗಿ ರೂಪಗೊಳ್ಳಲಿರುವಾಗ ಆಯಾ ಪ್ರದೇಶದ ಜನರು ಸಾಹಿತ್ಯ ಸೇವೆಯಲ್ಲಿ ಎಷ್ಟು ಮುನ್ನುಡೆದಿದ್ದಾರೆ. ಎನ್ನುವ ವಿಷಯ ಅಂದಿನ ದಿನಮಾನಗಳಲ್ಲಿ ವಿಶೇಷ ಜಿಜ್ಞಾಸೆಗೆ ಕಾರಣ ವಾಗಬಹುದು. ಉತ್ತರ ಕರ್ನಾಟಕ ಮೈಸೂರು ಕರ್ನಾಟಕ ಮತ್ತು ಪಡು ಕರಾವಳಿಯ ದಕ್ಷಿಣ ಕನ್ನಡಗಳು ಕನ್ನಡ ಸಾಹಿತ್ಯ ಕ್ಷೇತ್ರ ಹೊಂದಿರುವಷ್ಟು ಪ್ರಗತಿ ಹೈದ್ರಾಬಾದ್ ಕನ್ನಡ ಪ್ರದೇಶಗಳು ಹೊಂದಿವೆಯೇ ಎಂಬ ಅನುಮಾನ ನಮ್ಮ ಹೈದ್ರಾಬಾದ್ ಕರ್ನಾಟಕದ ಜನರಲ್ಲಿ ಇತ್ತು. ಅಂದಿನ ಹೈದ್ರಾಬಾದ್‌ನಲ್ಲಿರುವ ಕನ್ನಡಿಗರ ಚಟುವಟಿಕೆಯು ರಾಯಚೂರಿನಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನ' ಆಗ ನಡೆಸಿದ್ದರು. ಅದಕ್ಕೆ ಹಿಂದೆ ಅಥವಾ ಆ ಬಳಿಕ ಉಳಿದೆಡೆಯ ಕನ್ನಡಿಗರ ಗಮನಕ್ಕೆ ಹೆಚ್ಚಾಗಿ ಬಂದಂತಿರಲಿಲ್ಲ. ಆದರೆ ಅದಕ್ಕೆ ವ್ಯತಿರಿಕ್ತವೆನ್ನುವಂತೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕನ್ನಡ ಅಭಿಮಾನಿಗಳ ಬಳಗ ಅಲ್ಲಿನ ಕನ್ನಡ ಬಂಧುಗಳ ಉತ್ತೇಜನದೊಂದಿಗೆ ಬುದ್ಧಿವಂತ ಶೆಟ್ಟರು ೨೪ ಕವನಗಳನ್ನು ಹೊಂದಿರುವ 'ಕವನ ಕುಸಮ' ಎಂಬ ಶಿರೋನಾಮದ ಕವನ ಸಂಕಲನ ಪ್ರಕಟವಾಯಿತು.

ಈ ಕವನ ಸಂಕಲನದಲ್ಲಿ ಒಟ್ಟು ೨೪ ಕವನಗಳು ಇದ್ದು ಇದರಲ್ಲಿಯ ಕವಿತೆಗಳಲ್ಲಿ ಪ್ರತಿಯೊಂದು ರಸೋಪೀತವಾಗಿದೆ. ಭಾವಪೂರ್ಣವಾಗಿದೆ. ಕೆಲವಡೆ ಶೈಲಿಯು ವಿದ್ಯುಲತೆಯಂತೆ ಮಿಂಚಿ ಹರಿಯುತ್ತದೆ. ಮತ್ತು ಕೆಲವಡೆ ಗಂಭೀರವಾಗಿ ನಡೆದಿದೆ. ಕನ್ನಡಿಗರ ಹಂಬಲ ಮತ್ತೆ ಹೃದ್ಗತಗಳೂ ಇಲ್ಲಿ ಅಲ್ಲಲ್ಲಿ ಸೊಗಸಾಗಿ ಮೂಡಿಬಂದಿದೆ. ಕವಿಗಳ ಪರಿಚಯವು ಪ್ರತಿ ಕವಿತೆಯ ಕೊನೆಯಲ್ಲಿದ್ದು ಇದನ್ನು ಸಂಪರ್ಕ ಸ್ಥಾಪನೆಗೆ ನಾವೆಲ್ಲರು ಬಳಸಿಕೊಳ್ಳಬಹುದು"[೮]. ಸತತ ೬೫ ವರ್ಷಗಳಿಂದ ಯಾವುದೇ ಸರ್ಕಾರದ ಸಹಾಯವಿಲ್ಲದೆ, ಸ್ವಯಂ ಆಸಕ್ತಿಯಿಂದ, ಸ್ವಯಂ ಶಕ್ತಿಯಿಂದ ಇಡೀ ಹೈದ್ರಾಬಾದ್ ಕರ್ನಾಟಕಕ್ಕೆ ಒಂದು ಮಾಧರಿ 'ಕನ್ನಡ ಸಾಹಿತ್ಯ ಸಂಘ'ವಾಗಿ ಕಾರ್ಯ ನಿರ್ವಹಿಸುತ್ತಿರುವುದು ಅದರ ಅನನ್ಯತೆಯನ್ನು ಎತ್ತಿ ತೋರಿಸುತ್ತದೆ. ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ

ಆರಂಭವಾದ 'ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ' ಇದುವರೆಗೂ 'ಹದಿನಾಲ್ಕು' ಕೃತಿಗಳನ್ನು ಹೊರತಂದಿದೆ. ಈ ಸಾಹಿತ್ಯ ಸಂಘ ಪ್ರಕಟಿಸಿದ ಎರಡು ಕೃತಿಗಳು ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಹೆಸರುಗಳಿಸಿವೆ ಎಂದರೆ ಈ ಸಂಘದ ಕಾರ್ಯ ಸಾಧನೆ ನಮಗೆ ಅರಿವಿಗೆ ಬಾರದೆ ಇರದು.

ಒಂದನೇಯದಾಗಿ: "೧೯೮೦ರಲ್ಲಿ ಪಿ.ಎಂ. ಗಲಗಲಿ ಅವರ "ಆದುನಿಕ ಭಾರತದ ಸಪ್ತರ್ಷಿ ಗಳು" ಪುಸ್ತಕವು ಈಗ ದೆಹಲಿಯ ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಸಮಿತಿ (ಸಿ.ಬಿ.ಎಸ್ಸಿ) ಈ ಕೃತಿಯನ್ನು ೧೦ನೇ ತರಗತಿಯ ಉಪಪಠ್ಯ ಪುಸ್ತಕವೆಂದು ನೇಮಿಸಿದೆ"[೬].

ಎರಡನೇಯದಾಗಿ: ೧೯೭೮ರಲ್ಲಿ ಸೀತಾರಾಮ ಜಾಗೀರದಾರ ರವರ "ಗ್ರಂಥ ಸಂಪಾದನ ಶಾಸ್ತ್ರ ಪರಿಚಯ" ಕೃತಿಯನ್ನು ಮುದ್ರಿಸಲಾಯಿತು. ಈ ಕೃತಿಯು ಕರ್ನಾಟಕದ ಎಲ್ಲಾ ವಿಶ್ವ ವಿದ್ಯಾಲಯಗಳ ಎಂ.ಎ. ಕನ್ನಡ ಸ್ನಾತಕೊತ್ತರ ಪದವಿಗೆ ಪಠ್ಯಪುಸ್ತಕವಾಗಿದೆ.

ಮೂರನೇಯದಾಗಿ: ೧೯೪೩ರಲ್ಲಿ ಸ್ಥಾಪನೆಯಾದಾಗಿನಿಂದ 'ಅರುಣಾ' ಕೈ ಬರಹದ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿತ್ತು. ಸ್ವಾತಂತ್ರ್ಯ ಪೂರ್ವ ಹಾಗೂ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸಾಹಿತ್ಯಿಕ ಸಾಂಸ್ಕೃತಿಕವಾಗಿ ಕನ್ನಡವನ್ನು ಉಳಿಸಿ ಬೆಳೆಸಿದ ವಿಷಯವನ್ನು ತಿಳಿದುಕೊಂಡರೆ ಈ ಸಂಘ ಕನ್ನಡದ ಪ್ರಸಾರ ಮತ್ತು ಪ್ರಚಾರ ಕಾರ್ಯದಲ್ಲಿನ ಸಾಧನೆಯನ್ನು ಎತ್ತಿ ತೋರಿಸುತ್ತದೆ. ಈ ಮೂಲಕ ಸಾಹಿತ್ಯ ಸಂಘವು ಕೇವಲ ಒಂದು ಪ್ರಾಂತೀಯ ಮಟ್ಟದಲ್ಲಿ ಅಲ್ಲದೆ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಹಿತ್ಯಕವಾಗಿ ಪ್ರತಿಬಿಂಬಿತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಅಡಿಟಿಪ್ಪಣಿಗಳು

೧. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೧೧೧ ಹಾಗೂ ತರಂಗ ಮಾಸ ಪತ್ರಿಕೆ. ೧೯೯೪ ಜುಲೈ ೧೦ ಲೇಖನ: ನಿಸ್ವಾರ್ಥ ಸೇವೆಯ ನೆನಪು: ಪಾಟೀಲ ಪುಟ್ಟಪ್ಪ.

೨. ಸಗರ ಕೃಷ್ಣಾಚಾರ್ಯ., 'ನನ್ನನಾನು ಕಂಡೆ' ಸಂಪುಟ-೨ ೧೯೯೫ ಪು. ೨೦೩

೩. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೬೯

೪. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೧೪೧

೫. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೧೪೨

೬. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೧೪೫

೭. ನಾಗಪ್ಪ ತ್ರಿವೇದಿ., 'ವಜ್ರದೀಪ್ತಿ' ೨೦೦೪ ಪು. ೧೦೩

೮. ಕರ್ಮವೀರ ಪತ್ರಿಕೆ ೧೮.೬.೧೯೫೬ ನವಯುಗ ೭.೪.೧೯೫೫

ಅಧ್ಯಾಯ ೫

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಯ ತಾತ್ವಿಕತೆ / ಆಶಯ ಗುರಿಗಳು

೧. ಸಾಂಸ್ಕೃತಿಕ ಪುನರುತ್ಥಾನದ ಗುರಿ

೨. ಸಮಾಜದಲ್ಲಿ ತಾತ್ವಿಕ ಮೌಲ್ಯಗಳನ್ನು ಬೆಳೆಸುವುದು

೩. ಕನ್ನಡ ಭಾಷೆ ಸಾಹಿತ್ಯ ಪ್ರಜ್ಞೆಯನ್ನು ಮೂಡಿಸುವುದು

೪. ದೇಶಪ್ರೇಮ ಮತ್ತು ಸ್ವಾಭಿಮಾನ ಬೆಳೆಸುವುದು

೫. ಈ ಭಾಗದ ಸಾಹಿತಿಗಳನ್ನು ಪರಿಚಯಿಸುವುದು

೬. ಸಾಮಾಜಿಕ ಮೌಲಿಕತ್ವವನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸುವುದು

೭. ಈ ಭಾಗದ ಸಾಹಿತ್ಯಿಕ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು

೮. ಸಾಹಿತಿಗಳಲ್ಲಿ ಏಕತೆಯನ್ನು ಮೂಡಿಸುವುದು

೯. ನಾಡಿನ ಏಕತೆಯನ್ನು ಸಾರುವುದು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಯ ತಾತ್ವಿಕತೆ / ಆಶಯ ಗುರಿಗಳು

ಯಾವುದೇ ಸಂಘ-ಸಂಸ್ಥೆಗಳು ಸ್ಥಾಪನೆಯಾಗಬೇಕಾದರೆ ಹಲವಾರು ಗುರಿ ಉದ್ದೇಶಗಳನ್ನು ಹಾಕಿಕೊಂಡೆ ಸ್ಥಾಪನೆಯಾಗುತ್ತವೆ. ಹಾಗೆಯೇ ಗುರಿ-ಉದ್ದೇಶಗಳು ಕೆಲವೊಂದು ಸಲ ಕಾಲಕ್ಕೆ ತಕ್ಕಂತೆ ಬದಲಾಗಬಹುದು. ಕೆಲವೊಂದು ಸಲ ಹೊಸ ಗುರಿ/ಆಶಯಗಳು ಕೂಡ ಸಂಘಕ್ಕೆ ಬಂದೊದಗ ಬಹುದು ಇದು ಸಹಜವು ಕೂಡ. ಆಡಳಿತಾತ್ಮಕ ದೃಷ್ಟಿಯಿಂದ ಅನೇಕ ಗುರಿಗಳನ್ನು ಹಾಕಿಕೊಂಡರೆ ಇತರೆ ಕಾರ್ಯಚಟುವಟಿಕೆಗಳಿಗಾಗಿ ಮತ್ತು ಪ್ರಚಾರ ಹಾಗೂ ಪ್ರಸಾರಕ್ಕಾಗಿ ಕೆಲವು ಆಶಯ/ ಗುರಿಗಳನ್ನು ಇಟ್ಟುಕೊಂಡಿರುತ್ತವೆ. ಕರ್ನಾಟಕದ ಅನೇಕ ಕನ್ನಡಪರ ಸಂಘಟನೆಗಳು ಈ ರೀತಿಯಾದ ಗುರಿ-ಉದ್ದೇಶಗಳೊಂದಿಗೆ ಅಸ್ತಿತ್ವಕ್ಕೆ ಬಂದಿವೆ. ಅಂತಹ ಸಂಘ-ಸಂಸ್ಥೆಗಳಲ್ಲಿ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಸುರುಪುರದ 'ರಂಗಂಪೇಟೆ' "ಕನ್ನಡ ಸಾಹಿತ್ಯ ಸಂಘವು" ಒಂದು. ಇದು ತನ್ನದೆಯಾದ ಬದ್ಧತೆಗಳನ್ನು ಇಟ್ಟುಕೊಂಡು ಅಸ್ತಿತ್ವಕ್ಕೆ ಬಂದಿತು. ೧೯೪೩ರಲ್ಲಿ ಆರಂಭವಾದ ಈ ಸಾಹಿತ್ಯ ಸಂಘಕ್ಕೆ ಕನ್ನಡ ಭಾಷೆ ಮತ್ತು ಸಂಸ್ಕೃತಿ ರಕ್ಷಣೆಯೇ ಪ್ರಮುಖ ಬದ್ಧತೆಯಾಗಿತ್ತು. 'ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವ ಗುರಿಯೊಂದಿಗೆ ಅಸ್ತಿತ್ವಕ್ಕೆ ಬಂದಿತು. ಅಂತೆಯೆ ಕನ್ನಡ ಭಾಷೆ, ಸಾಹಿತ್ಯವನ್ನು ಬೆಳಸಲು ಅನೇಕ ಕಾರ್ಯ ಕ್ರಮಗಳನ್ನು ಹಾಕಿಕೊಂಡಿತು. ಅವುಗಳಲ್ಲಿ 'ಕೃತಿಗಳ ಪ್ರಕಟಣೆ'ಯೂ ಒಂದಾಗಿತ್ತು. ಅನೇಕ ಗುರಿ/ಆಶಯಗಳೊಂದಿಗೆ ಸಾಹಿತ್ಯ ಸಂಘವು 'ಪ್ರಕಟಣೆ ಮತ್ತು ಪ್ರಸಾರ' ಕಾರ್ಯವನ್ನು ಹಮ್ಮಿಕೊಂಡಿತು. ಅಂತಹ ಆಶಯ/ಗುರಿಗಳನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

ಸಾಂಸ್ಕೃತಿಕ ಪುನರುತ್ಥಾನದ ಗುರಿ

ಸಾಹಿತ್ಯ ಪ್ರಚಾರ ಗ್ರಂಥಕರ್ತರ ಕಲ್ಯಾಣ ದೃಷ್ಟಿಯೊಂದರಿಂದಲೇ ಅವಶ್ಯಕವಾದುದೆಂದು ಯಾರೂ ತಿಳಿಯಬಾರದು. ಜನರಿಗೆ ನೂತನ ಸಂಸ್ಕೃತಿಯ ಜ್ಞಾನ ಉಂಟಾಗಬೇಕಾದರೆ ಆ

ಸಂಸ್ಕೃತಿಯನ್ನೊಳಗೊಂಡ ಸಾಹಿತ್ಯ ಅವರಲ್ಲಿ ಹರಡಬೇಕು. ಅದರಿಂದಲೇ ದೇಶದ ಅಭ್ಯುದಯ ಸಾಧ್ಯ. ಜಪಾನ ಚೀನಾ, ರಷ್ಯಾ ಮುಂತಾದ ದೇಶಗಳಲ್ಲಿ ಆಗಿರುವ ಪರಿವರ್ತನೆಗೆ ಅಲ್ಲಿ ಹರಿದುಬಂದ ಸಾಹಿತ್ಯ ಕ್ಷೇತ್ರದ ಪ್ರಗತಿಯೇ ಕಾರಣ. ಯಾವಾಗ ನವ ದೃಷ್ಟಿಯ ಸಾಹಿತ್ಯ ಜನ ಸಾಮಾನ್ಯರ ಜನಮಾನಸದಲ್ಲಿ ಪ್ರಚುರವಾಗುವುದೋ ಆಗಲೇ ರಾಜ್ಯ, ದೇಶಗಳು ಪ್ರಗತಿಯತ್ತ ಸಾಗುವುವು. ಕೇವಲ ವಿಶ್ವವಿದ್ಯಾಲಯಗಳಿಂದಲೂ, ಉಪನ್ಯಾಸ ಮಂದಿರಗಳಿಂದಲೂ ಅದು ಸುಲಭ ಸಾಧ್ಯವಿಲ್ಲ. ಹೈದ್ರಾಬಾದ ಕರ್ನಾಟಕದ ಪ್ರದೇಶದ ಅಂದಿನ ಐವತ್ತರ ದಶಕದ ಸಮಯದಲ್ಲಂತೂ ಋಜುದೃಷ್ಟಿಯ ಸಾಹಿತ್ಯ ಪ್ರಚಾರವಂತೂ ಅತ್ಯವಶ್ಯಕವಾಗಿತ್ತು. ಅಂದಿನ ಸಂದರ್ಭದಲ್ಲಿ ದೇಶಾಭಿಮಾನಿಗಳೆಲ್ಲರಿಗೂ ಸಾಹಿತ್ಯ ಪ್ರಚಾರವಾಗಲೇಬೇಕಾಗಿತ್ತು. ಆ ಉದ್ದೇಶದಿಂದಲೇ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸಾಹಿತ್ಯಿಕ ಪ್ರಕಟಮೆಯಂಥ ಕಾರ್ಯಕ್ಕೆ ಕೈಹಾಕಿತು.

ಕನ್ನಡ ಎನ್ನುವ ಪರಿಕಲ್ಪನೆಯನ್ನು 'ಭಾಷೆ ಸಾಹಿತ್ಯ ಬದುಕು ಮತ್ತು ಅದನ್ನು ಉಳಿಸಿ ಜನಮಾನಸದಲ್ಲಿ ನೆಲೆಯೂರುವಂತೆ' ಮಾಡಿ ಮತ್ತೆ ಅದನ್ನು ಕಟ್ಟಿಬೆಳಸಿ ರಕ್ಷಿಸುವಂತಹ ಗುರುತರ ವಾದ ಜವಬ್ದಾರಿ ಅಂದಿನ ಕನ್ನಡ ಪರ ಸಂಘಟನೆಗಳ ಮೇಲೆ ಇತ್ತು. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಅಂತಹ ಜವಬ್ದಾರಿಯನ್ನು ಹೊತ್ತು ಸಾಹಿತ್ಯ ಪ್ರಸಾರದ ಸೇವೆಗೆ ಮುಂದಾಗಿ ಮುದ್ರಣ ಕೈಂಕರ್ಯಕ್ಕೆ ತೊಡಗಿದ್ದು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ.

ಆತ್ಮ ಸಂಸ್ಕಾರಕ್ಕೆ ಸಾಹಿತ್ಯದಿಂದ ಆಗುವಷ್ಟು ಸಹಾಯ ಕೆಲವು ಸಲ ಮತಪ್ರಚಾರದಿಂದಲೂ ಆಗುವುದಿಲ್ಲ. ಆ ಕಾರಣಕ್ಕಾಗಿ ಪ್ರಾದೇಶಿಕ ಸಂಸ್ಕೃತಿಯನ್ನು ಕವನಗಳಲ್ಲಿ ಪ್ರಬಂಧಗಳಲ್ಲಿ ಹಾಗೂ ನಾಟಕಗಳಲ್ಲಿ ಹಿಡಿದಿಡುವ ತಾತ್ವಿಕ ಹಿತಾಸಕ್ತಿಯು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಯ ಆಶಯವಾಗಿದೆ. ಇಂತಹ ನಾಡು-ನುಡಿಯ ಶ್ರೀಮಂತಿಕೆಯನ್ನು ಸಾಹಿತ್ಯ ಪ್ರಕಟಣೆ ರೂಪದಲ್ಲಿ ಹಿಡಿದಿಡುವ ಹಂಬಲವು ಕೂಡ ಈ ಸಾಹಿತ್ಯ ಸಂಘದ್ದಾಗಿತ್ತು.

೨. ಸಮಾಜದಲ್ಲಿ ತಾತ್ವಿಕ ಮೌಲ್ಯಗಳನ್ನು ಬೆಳೆಸುವುದು

ಶ್ರೇಣಿಕೃತ ಸಮಾಜದಲ್ಲಿ ಕಟ್ಟಳೆಗಳು ನೀತಿ-ನಿಯಮಗಳು ಇರುವುದು ಸಹಜ. ಉತ್ತಮ ಸಮಾಜ ನಿರ್ಮಾಣಕ್ಕೆ ಮೌಲ್ಯಯುತ ಶಿಕ್ಷಣ ತುಂಬಾ ಅತ್ಯವಶಕ. ಸಮಾಜಕ್ಕೆ ಅಗತ್ಯವಿರುವ ಮೌಲ್ಯಗಳನ್ನು ಪ್ರಸಾರಮಾಡುವ ಮಾಧ್ಯಮಗಳಲ್ಲಿ ಸಾಹಿತ್ಯವು ಒಂದಾಗಿದೆ. ಅಂತಹ ಮೌಲ್ಯಯುಕ್ತ ವಾದ ಸಾಹಿತ್ಯಿಕ ಬರವಣಿಗೆಯನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಮೂಲಕ ಪ್ರಕಟಿಸುವ ಗುರಿ ಕೂಡ ಸಂಘದ ತಾತ್ವಿಕ ಗುರಿಗಳಲ್ಲೊಂದಾಗಿತ್ತು. ರಂಗಂಪೇಟಡೆ ಕನ್ನಡ ಸಾಹಿತ್ಯ ಸಂಘದ ನಾಲ್ಕನೇ ಪ್ರಕಟಣೆಯಾದ 'ಸಾಹಿತ್ಯಸುಧೆ' ಪ್ರಬಂಧ ಸಂಕಲನ ಇದಕ್ಕೆ ಮುಂಚಿನ 'ಮಧರ ಮಿಲನ' 'ಕವನ ಕುಸುಮ' ಕಥೆ ಹಾಗೂ ಕವನ ಸಂಕಲನಗಳಲ್ಲಿ ಅನೇಕ ಮೌಲ್ಯಯುಕ್ತ ಕವನ, ಕಥೆಗಳು ಪ್ರಕಟವಾದವು. ರಂಗಂಪೇಟೆ ಸಾಹಿತ್ಯ ಸಂಘದ ನಾಲ್ಕನೇ ಪ್ರಕಟಣೆಯಾದ ಸಾಹಿತ್ಯ ಸುಧೆ ಪ್ರಬಂಧ ಸಂಕಲದಲ್ಲಿ 'ಅರಿಸ್ಟಾಟಲ್‌ನ ಕಾವ್ಯ ವಿಮರ್ಶೆ, ರವೀಂದ್ರರ ವಚನಗಳ ಪ್ರಸ್ತಾಪ, ವಿನೋಭಾ

ಭಾವೆಯವರ ಸಾಹಿತ್ಯ, 'ಗೀತಗೋವಿಂದ ವಿಮರ್ಶೆ'ಯೂ ಕೂಡ ಇದೆ. ಅತಿಮುಖ್ಯವಾಗಿ ಕನ್ನಡ ಸಾಹಿತ್ಯಕ್ಕೆ ಜೈನರು ನೀಡಿದ ಕಾಣಿಕೆಯನ್ನು ಇಲ್ಲಿ ಪ್ರಮುಖವಾಗಿ ಕಾಣಬಹುದಾಗಿದೆ. 'ಕಾವ್ಯಶ್ರೀ' ಕವನ ಸಂಕಲನದಲ್ಲಿ 'ರಾಷ್ಟ್ರೀಯ ಮೌಲ್ಯಗಳನ್ನು ಎತ್ತಿತೋರಿಸುವ ಕವನಗಳು ತುಂಬಾ ಮಾರ್ಮಿಕ ವಾಗಿವೆ. 'ಸೊಹರಾಬ್ ಮತ್ತು ರುಸ್ತುಂ' ಅನುವಾದದ ನಿಳ್ಗವನದಲ್ಲಿ ಡಾ. ಆರ್.ಎಸ್. ಚುಳಿಕಿ ಯವರು ಮಹಾಕಾವ್ಯದ ಅನುವಾದವು. ರಸಸ್ವಾದನೆ ಹಾಗೂ ಕಾವ್ಯ ಸೌಂದರ್ಯವನ್ನು ಪ್ರದರ್ಶಿಸುತ್ತದೆ. ಮತ್ತು ಮ್ಯಾಥ್ಯು ಆರ್ನ್ಯಾಲ್ಡ್‌ರ 'ಸಾಹಿತ್ಯ ಆನಂದಾನುಭೂತಿ' ಕನ್ನಡಿಗರಿಗೆ ನೀಡಿದ ಕೀರ್ತಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಸೇರುತ್ತದೆ. ೧೮೫೭ರ ಸಂದರ್ಭದಲ್ಲಿ ಸುರಪುರಕ್ಕೆ ಆಗಮಿಸಿದ ಬ್ರಿಟೀಷ್ ಅಧಿಕಾರಿ ಕರ್ನಲ್ ಮಡೋಸ್ ಟೇಲರ್‌ನ ಜೀವನ ಹಾಗೂ ಕೃತಿಗಳ ಕುರಿತು ಸಂಶೋಧನಾ ಗ್ರಂಥದ ಭಾಗವನ್ನು ಕೃತಿ ರೂಪದಲ್ಲಿ ಬರೆದ ಕೀರ್ತಿ ಆರ್.ಎಸ್. ಚುಳುಕಿ ಯವರದು. ಜೊತೆಗೆ ಅವರು ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆಯನ್ನು ಕೂಡ ಇಲ್ಲಿ ಸ್ಮರಿಸಬಹುದು. ಸೀತಾರಾಮ ಜಾಹಾಗೀರದಾರ ಅವರ 'ಗ್ರಂಥ ಸಂಪಾದನೆ ಶಾಸ್ತ್ರೀ ಪರಿಚಯ' ಕೃತಿಯನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸುವುದರ ಮೂಲಕ ವಿಶ್ವವಿದ್ಯಾಲಯ ಮಟ್ಟದ ಸಂಶೋಧನೆಗೆ ಅನುವುಮಾಡಿಕೊಟ್ಟಿದ್ದಾರೆ. ಹೀಗೆ 'ರಕ್ತಾಭಿಷೇಕ' 'ಋಣಾನುಬಂಧ' 'ಜೀನನ ಸಂಸಾರ' ಎಂಬ ನಾಟಕಗಳ ಮೂಲಕ ಜನರಿಗೆ ಸಾಮಾಜಿಕ ವಸ್ತು ವಿಷಯವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಪ್ರಯತ್ನವನ್ನು ಮಾಡಲಾಗಿದೆ. ಹೀಗೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಸಾಹಿತ್ಯಿಕ ಪ್ರಕಟಣೆಯ ಮೂಲಕ ಸಾಮಾಜೀಕ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿತು.

ಸಾಹಿತ್ಯ ಪ್ರಜ್ಞೆಯನ್ನು ಮೂಡಿಸುವುದು/ಬೆಳೆಸುವುದು

ಸುರಪುರ ಪ್ರದೇಶವು ಹೈದ್ರಾಬಾದ ನಿಜಾಂನ ಆಳ್ವಿಕೆಗೆ ಒಳಪಟ್ಟ ಮೇಲೆ ಕನ್ನಡಿಗರ ಸ್ಥಿತಿ ಹೇಳತೀರದಂತಾಯಿತು. ಸಂಸ್ಥಾನದ ಇಪ್ಪತ್ತು ಲಕ್ಷ ಕನ್ನಡಿಗರ ಸಮಸ್ಯೆಗಳು ಅಪಾರವಾಗಿದ್ದವು. ಕೇವಲ ಪತ್ರಿಕೆಗಳು ಈ ಭಾಗದಲ್ಲಿ ಭಾಷೆ ಸಾಹಿತ್ಯ ಹೀಗೆ ಸಾಂಸ್ಕೃತಿಕ ಪರಿಸರವನ್ನು ಬಲಪಡಿಸುವುದಕ್ಕೆ ಹೆಣಗುತ್ತಿದ್ದಕಾಲವದು. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭವಾಗುವ ಹೊತ್ತಿಗೆ ಪ್ರಭಾನ್ವಿತ ಕಲಾವಿದರಿಗೆ/ಸಾಹಿತಿಗಳಿಗೆ ಅವಕಾಶಗಳಿಲ್ಲದೆ ತಮ್ಮ ಪ್ರತಿಭೆಯನ್ನು ವ್ಯಕ್ತ ಪಡಿಸಲು ಅಸಹಾಯಕರಾಗಿದ್ದರು. ಸಾಹಿತ್ಯ ಸಂಘ ಆರಂಭವಾದ ಮೇಲೆ ಈ ಭಾಗದ ಪ್ರತಿಭಾವಂತರಿಗೆ ಮೊದಲು 'ಅರುಣಾ' ಕೈಬರಹ ಪತ್ರಿಕೆಯ ಮೂಲಕ ಅವಕಾಶಗಳನ್ನು ನೀಡಿತು. ನಂತರ ಅವರ ಬರಹಗಳನ್ನು ಕೃತಿಗಳ ರೂಪದಲ್ಲಿ ಪ್ರಕಟಿಸುವುದರ ಮೂಲಕ ಕನ್ನಡ ಭಾಷೆ ಸಾಹಿತ್ಯವನ್ನು ಬೆಳೆಸುವ ಕಾರ್ಯದಲ್ಲಿ ನಿರತವಾಯಿತು. ಉರ್ದು ಮತ್ತು ಮರಾಠಿ ಭಾಷೆಗಳ ವಿರುದ್ಧ 'ಕನ್ನಡ' ಸೆಡ್ಡು ಹೊಡೆದು ನಿಲ್ಲುವಂತ ಎಲ್ಲ ಪ್ರಯತ್ನಗಳು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದಿಂದ ನಡೆದವು. ಕತೆ, ಕವನ ಮತ್ತು ನಾಟಕಗಳನ್ನು ಬರೆಯಿಸಿ ಅವರಲ್ಲಿ ಸಾಹಿತ್ಯಿಕ ಆಸಕ್ತಿಯನ್ನು ಬೆಳೆಸಿದರು. ಸಂಘದ ಪ್ರಕಟಣೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಪ್ರಾದೇಶಿಕ

ಮಟ್ಟದಲ್ಲಿ ಪ್ರಚುರಪಡಿಸಿದರು. ನಿಜಾಂ ಸರ್ಕಾರದ ಸಂದರ್ಭದಲ್ಲಿ ಪ್ರಕಟಣೆಗೆ ಅಷ್ಟೊಂದು ಪ್ರೋತ್ಸಾಹ ಮತ್ತು ಅವಕಾಶವಿರದಿದ್ದರೂ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಪ್ರಕಟಣೆ ಮೂಲಕ ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಯಿತು. ಅಲ್ಲದೆ ಸಾಮಾಜಿಕ ಸಾಮರಸ್ಯವನ್ನು ಮೂಡಿಸುವಲ್ಲಿ ಕಾರ್ಯ ಪ್ರವೃತ್ತವಾಯಿತು. ಸಾಹಿತ್ಯ ಸಂಘದ ಕಾರ್ಯಕರ್ತರು ಕನ್ನಡದ ಕರಪತ್ರಗಳನ್ನು ಮನೆಮನೆಗೆ ಹಂಚುತ್ತಿದ್ದರು. ಆರಂಭದದಿನಗಳಲ್ಲಿ 'ಅರುಣಾ' ಪತ್ರಿಕೆಯನ್ನು ಪ್ರಕಟಿಸುವುದರ ಮೂಲಕ ಲೇಖನಗಳನ್ನು ಪ್ರಕಟಿಸಿ ಆ ಮೂಲಕ ಹಳ್ಳಿ ಹಳ್ಳಿಗೆ ತಲುಪಿಸುವ ಕೆಲಸಮಾಡಿತು.

೪. ದೇಶಪ್ರೇಮ ಮತ್ತು ಸ್ವಾಭಿಮಾನ ಬೆಳೆಸುವುದು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭವಾದ ಕಾಲ ಅದು ಸ್ವಾತಂತ್ರ್ಯ ಹೋರಾಟದ ಪರ್ವಕಾಲ. ಒಂದು ಕಡೆ ಬ್ರಿಟಿಷರ ಕಪಿಮುಷ್ಠಿಯಿಂದ ಭಾರತ ದೇಶವನ್ನು ಮುಕ್ತಗೊಳಿಸುವುದಾದರೆ, ಇನ್ನೊಂದು ಕಡೆ ಕನ್ನಡವನ್ನು ಮರಾಠಿ ಮತ್ತು ಉರ್ದು ಭಾಷೆಗಳ ಪ್ರಾಬಲ್ಯದಿಂದ ಮುಕ್ತಗೊಳಿಸಿ ಹೈದ್ರಾಬಾದ ನಿಜಾಂನಿಂದ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಂಕಷ್ಟದ ಕಾಲ. ಇವೆರಡು ಸಂದರ್ಭಗಳ ನಡುವೆ ಕನ್ನಡ ಸಾಹಿತ್ಯವನ್ನು ಕೃತಿರೂಪದಲ್ಲಿ ಮುದ್ರಿಸಿ ಪ್ರಕಟಿಸುವವರೊಂದಿಗೆ ಜನರಲ್ಲಿ ದೇಶಪ್ರೇಮ, ಸ್ವಾಭಿಮಾನವನ್ನು ಬೆಳೆಸುವ ಗುರಿ-ಉದ್ದೇಶ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ್ದು. ಕವನ ಕಥೆ ಪ್ರಬಂಧ ಮತ್ತು ನಾಟಕಗಳ ಮೂಲಕ ಅಂತಹ ಮೌಲ್ಯಗಳನ್ನು ಬೆಳೆಸುವ ಕಾರ್ಯವನ್ನು ಮಾಡಿತು. 'ಬೃಂದಾವನ' ಕವನ ಸಂಕಲನದಲ್ಲಿ 'ವೀರಗೀತೆ' ಕವನದ ಸಾಲುಗಳು.

"ಓನನ್ನ ವೀರರೇ. ಓ | ನನ್ನ ಧೀರರೆ ಕರುನಾಡ ತರುಣರೇ!
ಏಳಿ ಎದ್ದೇಳಿ! ಕಾಳಗದ ಕಹಳೆಯನ್ನು ಕೇಳಿ ಕೇಳಿ!!
ಕುಹಕಿಗಳು ನುಗ್ಗಿಹರು ಕಾಶ್ಮೀರ ಜಗ್ಗಿಹರು ಆ ನೀಚ ಶತೃವನ್ನು
ಬಗ್ಗಿ ಸೀಳಿ ಹಾಕಿ ಅವರನ್ನು ನೂರು ನೂರು ಸೀಳಿ"[೧೧]

ಎನ್ನುವಂತಹ 'ಈಶ್ವರಿತನಯ'ರ ಕವನಗಳಂತ ನೂರಾರು ಕವನಗಳು ಎಂತಹ ಮುಗ್ದರಲ್ಲಿಯು ರೋಷ ಉಕ್ಕಿಸುವಂತಿವೆ. ಈ ರೀತಿಯಾಗಿ 'ಎಚ್ಚರ'- ಚನ್ನವೀರ ಕಣವಿಯವರ ಕವನ, 'ಸುರಪುರ' ಎನ್ನುವ ಕವನ 'ಸುರಪುರ ಸಂಸ್ಥಾನ' ಇಂಗ್ಲಿಷರ ವಿರುದ್ಧ ಹೋರಾಡಿದ ನೆನಪನ್ನು ತರುತ್ತದೆ.

ಈ ಪ್ರದೇಶದಲ್ಲಿ ಹೋರಾಟ ಮನಭಾವನೆ ರೂಪಿಸುವ ಸಂಸ್ಥೆಯಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಹೊರಹೊಮ್ಮಿತು ಎಂದರೆ ತಪ್ಪಾಗದು. ಸೃಜನಶೀಲತೆಗೂ ಪ್ರಾದೇಶಿಕತೆಗೂ ಸಂಬಂಧ ಇರುವುದರಿಂದಲೇ ಈ ಪ್ರದೇಶದ ಅಂದಿನ ಪ್ರಕ್ಷುಬ್ಧಕಾಲಘಟ್ಟದ ಅನುಭವಗಳು ಯಾವತ್ತು ಸಾಹಿತ್ಯಕ್ಕೆ ಹೇಳಿಮಾಡಿಸಿದಂತಹ ಚಿತ್ರಣಗಳು ಸಾಹಿತಿಗಳಲ್ಲಿ ಕಾವ್ಯ ಕಥೆ ನಾಟಕ ರೂಪದಲ್ಲಿ

ಜೀವಂತಿಕೆಯನ್ನು ಪಡೆಯುತ್ತಾವೆ. ಈ ಮೂಲಕವಾಗಿ ಅಂದಿನ ಕಾಲಮಾನದ ತುಡಿತಗಳು ಹಂಬಲಗಳು ನಿರಾಶೆಗಳು ಸಾಹಿತ್ಯದಲ್ಲಿ ವ್ಯಕ್ತವಾಗಿವೆ.

೫. ಈ ಭಾಗದ ಸಾಹಿತಿಗಳನ್ನು ಪರಿಚಯಿಸುವುದು

ಮೈಸೂರು ಕರ್ನಾಟಕ, ಕರಾವಳಿ ಕರ್ನಾಟಕ, ದಕ್ಷಿಣ ಕನ್ನಡದ ಭಾಗಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಂದಿರುವಷ್ಟು ಪ್ರಗತಿ ಹೈದ್ರಾಬಾದ ಕರ್ನಾಟಕ ಪ್ರದೇಶವು ಹೊಂದಿದೆಯೇ ಇಲ್ಲವೋ ಎನ್ನುವ ಅನುಮಾನದಲ್ಲಿರುವ ಅಂದಿನ ನಮ್ಮ ಜನಗಳಿಗೆ 'ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಪ್ರಕಟಣೆಗಳು ಸಾಕ್ಷಿಯಾಗಿ ನಿಂತವು ಈ ಸಾಹಿತ್ಯ ಸಂಘದ ಪ್ರಕಟಣೆಗಳು ತೆರೆಮರೆಯಲ್ಲಿದ್ದ ಬರಹಗಾರರಿಗೆ ಪ್ರೇರಣೆಯಾದವು. ಸಂಘ ಬೆಳೆದಂತೆಲ್ಲಾ ಈ ಭಾಗದ ಸಾಹಿತಿಗಳ 'ಬರಹ'ವನ್ನು ಮುಂಚೂಣಿಗೆ ತರುವಂತ ಮನಸ್ಸು ಮಾಡಿದ್ದರಿಂದ ಈ ಭಾಗದಲ್ಲಿ ಸಾಹಿತಿಗಳು ಮುಖ್ಯವಾಹಿನಿಗೆ ಬರಲು ಸಹಕಾರಿಯಾಯಿತು. ಸಾಹಿತ್ಯ ಸಂಘದ ಪ್ರಥಮ ಪ್ರಯತ್ನದಲ್ಲಿ 'ಮಧುರಮಿಲನ' ಎನ್ನುವ ಹೆಸರಿನ ಕಥೆಗಳ ಸಂಗ್ರಹವನ್ನು ಮಾಡಿ ಮುದ್ರಿಸಿ ಹೊರತಂದಿತು. ಈ ಮೂಲಕ ಸಾಹಿತಿಗಳನ್ನು, ಬರಹಗಾರರನ್ನು ಸಾಹಿತ್ಯ-ಬರಹವನ್ನು ಪ್ರಕಟಿಸುವುದರ ಮೂಲಕ ಅವರಿಗೆ ಒಂದು ವೇದಿಕೆಯನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಒದಗಿಸಿಕೊಟ್ಟಿತು ಎನ್ನುವುದು ಒಂದು ಗಮನಾರ್ಹ ವಿಷಯವಾಗಿದೆ.

ಹೀಗೆ ಕಥೆ, ಕವನ, ನಾಟಕ, ಪ್ರಬಂಧ ವಿವಿಧ ರೀತಿಯ ಕೃತಿಗಳನ್ನು ಮುದ್ರಿಸುವ ಮೂಲಕ ವಿವಿಧ ಕಾಲಘಟ್ಟದಲ್ಲಿ ವಿವಿಧ ರೀತಿಯ ಬರಹಗಾರರನ್ನು ಈ ಭಾಗಕ್ಕೆ ಪರಿಚಯಿಸುವ ಕೆಲಸ ಸಾಹಿತ್ಯ ಸಂಘ ಮಾಡಿತು. ಸೃಜನಶೀಲ ಹಾಗೂ ಸೃಜನೇತರ ಕೃತಿಗಳನ್ನು ಪ್ರಕಟಿಸುವದರ ಮೂಲಕ ಬರಹಗಾರರನ್ನು ಲೇಖಕರನ್ನು ಪರಿಚಯಿಸುವಲ್ಲಿ ಎಂ.ಆರ್. ಬುದ್ಧಿವಂತ ಶೆಟ್ಟರ ಶ್ರಮ ಅಪಾರವಾದದು.

೬. ಸಾಮಾಜಿಕ ಮೌಲಿಕತ್ವವನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸುವುದು

ಸಾಹಿತ್ಯ ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬ ಎನ್ನುವ ಮಾತಿನಂತೆ ಸಮಾಜದಲ್ಲಿನ ವಿವಿಧ ವರ್ಗಗಳ ವಿವಿಧ ಜಾತಿ, ಜನಾಂಗಗಳ ಸಾಂಸ್ಕೃತಿಕ ಜೀವನವನ್ನು ವಿವಿಧ ಆಯಾಮಗಳ ಮೂಲಕ ಚಿತ್ರಿಸುವ ಪ್ರಯತ್ನ ಇಲ್ಲಿನ ಸಾಹಿತ್ಯೀಕ ಪ್ರಕಟಣೆಗಳಲ್ಲಿ ನಡೆದಿದೆ. ಈ ಭಾಗದ ಸಂಸ್ಕೃತಿಯನ್ನು ಸಾಹಿತ್ಯದಲ್ಲಿ ಹಿಡಿದಿಡುವ ಒಂದು ಪ್ರಯತ್ನವು ಕೂಡ ಇಲ್ಲಿ ಮಾಡಲಾಗಿದೆ. ಸಗರನಾಡನ್ನು ಪ್ರತಿನಿಧಿಸುವ ಸಾಂಸ್ಕೃತಿಕ ಹಿರೆಮೆಗಳನ್ನು ಕೂಡ ಪ್ರಬಂಧ, ಕವನ, ಕತೆಗಳಲ್ಲಿ ಸೆರೆಹಿಡಿಯುವ ನೈಜ ಪ್ರಯತ್ನ ಮಾಡಲಾಗಿದೆ. ಆ ಮೂಲಕವಾಗಿ ಈ ಭಾಗದ ಸಾಂಸ್ಕೃತಿಕ ಪರಿಸರವನ್ನು ಶ್ರೀಮಂತಿಗೊಳಿಸುವ ಕಾರ್ಯವು ಕೂಡ ಸಾಹಿತ್ಯ ಸಂಘದ ಪ್ರಕಟಣೆಗಳಲ್ಲಿ ನಡೆದಿದೆ ಎಂದು ಹೇಳಬಹುದು.

'ಬೃಂದಾವನ' ಕವನ ಸಂಕಲನವು ೨೪ ಕವನ ಸಂಕಲನಗಳ ಸಂಗ್ರಹದ್ದಾಗಿದೆ. ಚನ್ನವೀರ ಕಣವಿಯವರ 'ಎಚ್ಚರ' ಕವನದಲ್ಲಿ ಕಣವಿಯವರ

"ನಾಡಿನ ಗಡಿಯಲಿ ನಮ್ಮದೆ ಗುಡಿಯಲಿ, ನುಡಿಯಲಿ
ವೀರಧ್ವನಿ ಗುಡುಗಿನ ಮಿಂಚಿನ ಮುಂಗಾರ ಮಳೆಯಲಿ
ಸ್ವಾರ್ಥದ ಸೀರುಹನಿ (ಎಚ್ಚರ)"

ಮಾನವನು ತನ್ನ ದೌರ್ಬಲ್ಯವನ್ನು ತ್ಯೇಜಿಸಿ ಕೆಚ್ಚೆದೆಯನ್ನು ಮರೆಸಬೇಕು. ಎಂಬ ಆಶಾವಾದನ್ನು ನೀಡಿದ್ದಾರೆ. 'ದೇವಗೀರಿ ಕೋಟೆ' ಪದ್ಯದಲ್ಲಿ ವಿನಾಯಕರು ಮಾನವನ ಅವಿವೇಕತನವನ್ನು ಹೊರ ಸೆಳೆದಿದ್ದಾರೆ. ಶಿವಲೆಂಕರರು 'ಯುಗಾದಿ' ಕವನದಲ್ಲಿ ಸ್ವಾರ್ಥ ಜಾತಿ-ಮತ್ಸರದ ಕಹಿಚಿಗುರು ಬೇವು-ಬೆಲ್ಲವಾಗಿ 'ಯುಗಾದಿ'ಯ ಹಬ್ಬವಾಗಲೆಂದು ಕವಿಯ ಹಾರೈಕೆ ಉದಾತ್ತವಾದದ್ದು. ಬಿ.ಹೆಚ್. ಶ್ರೀಧರ 'ದೃಷ್ಟಿಯಿಲ್ಲದ ಸೃಷ್ಟಿ'ಯಲ್ಲಿ ಆಧುನಿಕ ಜೀವನದ ದೃಶ್ಯವನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಉಪಾಧ್ಯಾಯರ

"ದುಡಿವ ಜನರ ಜೊತೆಯಲ್ಲಿ ಬೆರೆತು ಸೊಗಬಾಳಿ ಕಟ್ಟಬೇಕು. ಗುಣವ ಕಂಡು ಮನ ಹರುಷಗೊಂಡು ಮುದ್ದಾಡಿ ನಲಿಯಬೇಕು ಸಮರಸದ ಬಾಳ ಝುರಿ ಜೀವ ಲಹರಿ ಸುಖ ಸೂಸಿ ಹರಿಯಬೇಕು. ಅಮೃತ ಇಲ್ಲಿಯೇ ಎರಡು ನರ ನರನು ನಾಕ ಮರೆಯಬೇಕು(ನಾಕಮರೆಯಬೇಕು). ಮನುಷ್ಯನು ಜನರ ಜೊತೆ ಹೇಗೆ ಬೆರೆಯಬೇಕು. ದುಡಿವ ವರ್ಗದವರ ಜೊತೆ ಹೇಗಿರಬೇಕು. ನೋವು ನರಳಿಕೆಗೆ ದೇಹ ಬಳಲಿಕೆಗೆ ಬಿಸಿ ನೀರು ಸುರಿಯಬೇಕು"[೩] ಎನ್ನುವ ನೀತಿಯನ್ನು ಕವನಗಳಲ್ಲಿ ಕಾಣಬಹುದು. 'ಕಾವ್ಯಶ್ರೀ' ಕವನ ಸಂಕಲನ ಇಡೀ 'ಸಗರನಾಡು' ಪರಿಸರವನ್ನು ಕಣ್ಣಿಗೆ ಕಟ್ಟುವಂತೆ ರಮಣೀಯ ಕವನಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಸೃಜನಶೀಲ ಕೃತಿಗಳಲ್ಲಿ ಸಮಾಜದ ವಿವಿಧ ಮುಖಗಳು ಪ್ರತಿಬಿಂಬಿತವಾಗುವಂತಹ ಬರಹಗಳು ಪ್ರಕಟವಾಗಿವೆ.

೭. ಈ ಭಾಗದ ಸಾಹಿತ್ಯಿಕ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು

ಪ್ರಾಚೀನ ಕಾಲದಿಂದಲೂ ಈ ಪ್ರದೇಶ ಸಾಹಿತ್ಯಿಕವಾಗಿ ತನ್ನದೆಯಾದ ಪ್ರಭುದ್ಧತೆಯನ್ನು ಪಡೆದುಕೊಂಡಿದೆ. ಲಕ್ಷ್ಮೀಶನ ಕಾಲದಿಂದ ಹಿಡಿದು ವಚನಕಾರರ ಕಾಲದಲ್ಲಿ ವಚನಕಾರರು ಹಾಗೂ ದಾಸರ ಕಾಲದಿಂದಲೂ ಇಂದಿನವರೆಗೂ ಸಾಹಿತ್ಯಿಕವಾಗಿ ತನ್ನದೆಯಾದ ಹೆಸರುಗಳಿಸಿದೆ. ೧೯೪೦-೫೦ರ ದಶಕದಲ್ಲಿ ಈ ಭಾಗ ಸಂಪೂರ್ಣವಾಗಿ ಒಂದು ಕಡೆ ಉರ್ದುಮಯವಾಗಿದ್ದರೆ, ಇನ್ನೊಂದು ಕಡೆ ಮರಾಠಿಯಿಂದ ಆವೃತ್ತವಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯವು ಈ ಭಾಗದಲ್ಲಿ ಸಂಪೂರ್ಣವಾಗಿ ಕುಂಠಿತವಾಗಿತ್ತು. ಕನ್ನಡ ಭಾಷೆಯೇ ತುಳಿತಕ್ಕೊಳಗಾದಾಗ ಸಾಹಿತ್ಯವೆಲ್ಲಿ ಬೆಳೆಯಲೇಕು? ಇಂತಹ ಸಂದರ್ಭದಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಯ ಪುನರುತ್ಥಾನದ ಗುರಿಯೊಂದಿಗೆ ಆರಂಭವಾಯಿತು. ಹೈದ್ರಬಾದ ಕರ್ನಾಟದಲ್ಲಿ

ರಾಷ್ಟ್ರೀಯ ಚಳುವಳಿ ಉಗ್ರರೂಪತಾಳಿತ್ತು. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭವಾಗುವುದರೊಂದಿಗೆ ಈ ಭಾಗದ ಸಾಹಿತಿಗಳು ಯುವ ಬರಹಗಾರರಿಗೆ ಒಂದು ವೇದಿಕೆ ಸಿಕ್ಕಂತಾಯಿತು. ಮೊದಮೊದಲು 'ಅರುಣಾ' ಕೈ ಬರಹದ ಪತ್ರಿಕೆಯ ಮೂಲಕ ಸಾಹಿತ್ಯವನ್ನು ಪ್ರಕಟಿಸುವ ಅಳಿಲು ಸೇವೆ ಆರಂಭವಾಗಿತ್ತು. ನಂತರ ಈ ಭಾಗದ ಸಂಸ್ಕೃತಿ, ಕಲೆ ಸಾಹಿತ್ಯವನ್ನು ಕವನ ಕತೆ, ಪ್ರಬಂಧಗಳಲ್ಲಿ ಹಿಡಿದಿಡುವ ಪ್ರಯತ್ನದಿಂದ ಕವನ ಕಥಾ ಸಂಕಲನ ಪ್ರಬಂಧ ಸಂಕಲನಗಳೆಂಬ ಸೃಜನಶೀಲ ಪ್ರಕಾರಗಳಲ್ಲಿ ಕೃತಿಗಳನ್ನು ಮುದ್ರಿಸಿ, ಸಾಹಿತ್ಯದ ಪ್ರಚಾರ ಕೈಗೊಳ್ಳುವುದರ ಜೊತೆಗೆ ಬರಹಗಾರರನ್ನು ನಾಡಿಗೆ ಪರಿಚಯಿಸಿತು. ೧೯೪೪ರಲ್ಲಿಯೇ 'ಮಧುರ ಮಿಲನ' ಕಥಾ ಸಂಗ್ರಹ ಪ್ರಕಟವಾದಾಗ ಸಂಘಕ್ಕೆ ಇನ್ನು ಕೇವಲ ಒಂದು ವರ್ಷವಯಸ್ಸಾಗಿತ್ತು. ಒಂದು ಕಡೆ ಸ್ವಾತಂತ್ರ್ಯದ ಹಂಬಲ ಒಂದು ಕಡೆಯಾದರೆ ಕನ್ನಡವನ್ನು ರಕ್ಷಿಸಿ ಪೋಷಿಸಿ ತಿಳಿಸುವ ಗುರುತರವಾದ ಜವಬ್ದಾರಿ ಇನ್ನೊಂದು ಕಡೆ ಹಾಗಾಗಿ ಕನ್ನಡವನ್ನು ಬೆಳೆಸುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆಗೆ ಸಾಹಿತ್ಯಿಕ ಪ್ರಕಟಣೆಗಳನ್ನು ಹೊರತರುವುದರ ಮೂಲಕ ಸಾಹಿತ್ಯ ಕ್ಷೇತ್ರವನ್ನು ಬೆಳೆಸುವ, ನಿಟ್ಟಿನಲ್ಲಿ ತನ್ನ ಸೇವೆಯನ್ನು ಇಂದಿಗೂ ಮುಂದುವರಿಸಿಕೊಂಡು ಬರುತ್ತಿರುವುದು ಒಂದು ಪ್ರಶಂಸನಾರ್ಹವಾದದ್ದು.

೮. ಸಾಹಿತಿಗಳಲ್ಲಿ ಏಕತೆಯನ್ನು ಮೂಡಿಸುವುದು/ಮುಖ್ಯವಾಹಿನಿಗೆ ತರುವುದು

ಒಂದು ಸಂಘವೆಂದಾಗ ಅಲ್ಲಿ ಹಲವು ಜನ ಲೇಖಕರು ಸಾಹಿತಿಗಳು ಚಿಂತಕರು ಇರುತ್ತಾರೆ. ಪ್ರತಿಯೊಬ್ಬರು ತನ್ನದೆ ಆದ ಚಿಂತನೆಗಳು ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ಏಕತೆ ಎನ್ನುವುದು ಬಹುಮುಖ್ಯ ಪಾತ್ರದವಹಿಸುತ್ತದೆ. ಚಿಂತಕರು ಯಾವುದೇ ನಿರ್ಣಯ ಕೈಗೊಳ್ಳಬೇಕಾದ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಿ ಹಾಗೂ ಸುಲಲಿತವಾದ ಎಲ್ಲರೂ ಒಪ್ಪುವಂತ ಒಂದು ನಿರ್ಣಯಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಅದನ್ನೆ 'ಏಕತೆ' ಎಂಬ ವಿಶಾಲ ಪರಿಕಲ್ಪನೆಯಲ್ಲಿ ಅರ್ಥೈಸಲಾಗುತ್ತಿದೆ. ಹೀಗಾಗಿ ಈ ಪ್ರದೇಶದ ಸಾಹಿತಿಗಳ ಚಿಂತಕರ ವಿಚಾರಧಾರಗಳನ್ನು ಒಗ್ಗೂಡಿಸಲು ಅವರ ಸಾಹಿತ್ಯದ ನಿಲುವುಗಳನ್ನು ಒಗ್ಗೂಡಿಸಿ ಕ್ರೂಡಿಕರಿಸಿಕೊಂಡು ಸಾಹಿತ್ಯದ ಕೃತಿಗಳ ಮೂಲಕ ಪ್ರಕಟಿಸುವುದರೊಂದಿಗೆ ಆ ಮೂಲಕ ಸಾಹಿತಿಗಳ ವಿಚಾರ ಧಾರೆಗಳನ್ನು ಜನರಲ್ಲಿ ಮೂಡಿಸಲು ಅನುಕೂಲವಾಗುತ್ತದೆ.

ತೆರೆಮರೆಯಲ್ಲಿರುವ ಎಷ್ಟೋ ಯುವ ಬರಹಗಾರರು ಸಾಹಿತಿಗಳಿಗೆ ಒಂದು ವೇದಿಕೆಯನ್ನು ಒದಗಿಸಿ ಅವರಲ್ಲಿ ಸೂಪ್ತವಾಗಿದ್ದ ಸಾಹಿತ್ಯವನ್ನು ಜನರಿಗೆ ಮುಟ್ಟುಂತೆ ಮಾಡಲು ಪ್ರಕಟನೆಯನ್ನು ಕೈಗೊಳ್ಳುತ್ತಾ ಬಂದಿತು. ಸರ್ಕಾರದ ಯಾವುದೇ ಸಹಾಯ ಧನವಿಲ್ಲದೆ ಹೀಗೆ ಪ್ರಕಟಣಾ ಕಾರ್ಯದಲ್ಲಿ ತೊಡಗಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಈ ಭಾಗದ ಸಾಹಿತಿಗಳಿಗೆ ಒಂದು ವರದಾನವೆಂದೆ ಹೇಳಬಹುದು.

೯. ನಾಡಿನ ಏಕತೆಯನ್ನು ಸಾರುವುದು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಭಾರತ ಸ್ವಾತಂತ್ರ್ಯ ಪಡೆಯುವದಕ್ಕಿಂತ ಮುಂಚೆಯೇ ಆರಂಭವಾಗಿದ್ದರಿಂದ ಈ ಭಾಗದಲ್ಲಿ 'ಸ್ವಾತಂತ್ರ್ಯದಡೆಗೆ ಜನರನ್ನು' ಎತ್ತಿ ಕಟ್ಟುವ ಅನೇಕ ಸಂಘಟನೆಗಳಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಒಂದಾಗಿತ್ತು. ಹೈದ್ರಾಬಾದ ನಿಜಾಂನ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶ ನಿಜಾಂ ಸರ್ಕಾರದ 'ರಜಾಕಾರರ ದಬ್ಬಾಳಿಕೆಗೆ ಒಳಗಾಗಿತ್ತು. ಇಷ್ಟೆಲ್ಲಾ ನೋವು ಸಂಕಟಗಳಿಗೆ ಸಿಲುಕಿದ ಈ ಪ್ರದೇಶಕ್ಕೆ ಸ್ವಾಭಿಮಾನಿ ಸ್ವಾತಂತ್ರ್ಯ ಹೋರಾಟಗಾರರ ಅವಶ್ಯಕತೆಯಿತ್ತು ಜೊತೆಗೆ ಕನ್ನಡವನ್ನು ಉಳಿಸಿಬೆಳೆಸುವಂತ ಮನಸ್ಸುಗಳ ಸೃಷ್ಟಿಯಾಗುವುದು ಮುಖ್ಯವಾಗಿತ್ತು. ಮೊಟ್ಟಮೊದಲು 'ಅರುಣಾ' ಕೈ ಬರಹ ಪತ್ರಿಕೆ ಮೂಲಕವೇ ನಾಡಿನ ಏಕತೆಯನ್ನು ಮೂಡಿಸಲು ಜನರನ್ನು ಹುರಿದುಂಬಿಸಿತ್ತು. ಅನೇಕ ಕ್ರಾಂತಿಕಾರಿ ಲೇಖನಗಳು ಪ್ರಕಟಿಸಿತು. ಸ್ವತಃ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಅನೇಕ ಸ್ವಾಭಿಮಾನಿ ಹೋರಾಟಗಾರರು ಬಂದನಕ್ಕೊಳಗಾದರು. ಇಂಥದ್ದರ ನಡುವೆಯು ಕಥಾ ಸಂಕಲನ, ಕವನ, ಸಂಕಲನ, ಪ್ರಬಂಧ, ಸಂಕಲನಗಳನ್ನು ಪ್ರಕಟಿಸಿ ಜನರಲ್ಲಿ ನಾಡಿನ ಬಗೆಗೆ ಅಭಿಮಾನ ಹುಟ್ಟುವಂತೆ ಪ್ರರೆಪಿಸಿತು. ೧೯೫೬ರಲ್ಲಿ ಕರ್ನಾಟಕ ಏಕೀಕರಣ ಸಂದರ್ಭದಲ್ಲಂತೂ ವರಕವಿ ಬೇಂದ್ರೆಯವರನ್ನು ಕರೆಯಿಸಿ ಅದ್ದೂರಿಯಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾಹಿತ್ಯ ಕೃತಿಗಳ ಪ್ರಕಟಣೆಗಾಗಿ 'ಸಾಹಿತ್ಯಮಾಲೆ'ಯನ್ನು ಆರಂಭಿಸಿತು. ಹೀಗಾಗಿ ನಿರಂತರವಾಗಿ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಜನರಲ್ಲಿ ದೇಶಾಭಿಮಾನ, ಸ್ವಾಭಿಮಾನ ರಾಷ್ಟ್ರೀಯ ಏಕತೆಯನ್ನು ಜನರಲ್ಲಿ ಬಿತ್ತುವ ಕೆಲಸಮಾಡಿತು. 'ಕಾವ್ಯಶ್ರೀ' ಕವನ ಸಂಕಲದಲ್ಲಿ 'ಹೇರೂರದತ್ತ' ಬರೆದ 'ನನ್ನ ಕನ್ನಡ' ಕವನ

"ಕನ್ನಡದ ಬಿಸಿರಗುತ ಕಾಯದಲ್ಲಿ ಕುದಿಯುತಿರೆ
ಕನ್ನಡದ ಜ್ಯೋತಿ ತಲೆಗುಮ್ಮಟದಿ ಬೆಳಗುತಿರೆ
ಕನ್ನಡವೇ ಹರಣಾಗಿ ಹೃದಯದಲಿ ನಲಿಯುತಿರೆ
ಕನ್ನಡಕೆ ಕೊರಗದಾ ಕುನ್ನಿಯುವ ಮಾನವನೆ?"[೪]

ಎನ್ನುವಂತಹ ಕನ್ನಡದ ಕುರಿತು ಜನರಿಗಿರಬೇಕಾದ ಕಾಳಜಿಯನ್ನು ಎತ್ತಿ ತೋರಿಸುವಂತಿವೆ. ಈ ರೀತಿಯ ಸುಮಾರು ಕವನಗಳು ಈ ಸಾಹಿತ್ಯ ಸಂಘದಿಂದ ಪ್ರಕಟವಾಗಿವೆ. ಬೃಂದಾವನ ಕವನ ಸಂಕಲನ ಬಹಳ ಪ್ರಸಿದ್ಧಿಪಡೆದಿದೆ. ವಿ.ಕೃ ಗೋಕಾಕ್‌ರ 'ದೇವಗಿರಿ ಕೋಟೆ'ಯಿಂದ

"ಬೌದ್ಧ ಪ್ರಚಾರದಷ್ಟು ಪುರಾತನ ಕೋಟೆಯಿದು
ರಾಷ್ಟ್ರಕೂಟರಿಲ್ಲಿ ರಾಷ್ಟ್ರವರ್ಧನರಾದರು
ಮಹಾರಾಷ್ಟ್ರದ ಸಾಹಿತ್ಯಗಂಗೆ
ಈ ಕೋಟೆಯ ಮೂರ್ದ ಗಂಗೆ ಯಾಯಿತು"[೫]

ನಾಡಿನ ಐಕ್ಯತೆ ಸಾರುವ ಸಂದೇಶ ಈ ಮೇಲಿನ ಕವನದಲ್ಲಿದೆ. ಹೀಗೆ ಕವನ ಸಂಕಲನಗಳಲ್ಲಿ

ಮುಖ್ಯವಾಗಿ ಸಾಂಸ್ಕೃತಿಕ ಸಾಮರಸ್ಯ, ನಾಡಿನ ಐಕ್ಯತೆ, ದೇಶಭಕ್ತಿ ಕುರಿತು ತುಂಬಾ ರಮಣೀಯವಾದ ಕವನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು ಈ ಪ್ರದೇಶದ ಸಾಹಿತ್ಯಿಕ ಹಿರಿಮೆಯನ್ನು ಪ್ರತಿಬಿಂಬಿಸುತ್ತದೆ.

೧೦. ಸಾಮಾಜಿಕ ಮೌಢ್ಯವನ್ನು ತೊಡೆದು ಹಾಕುವುದು

ಸಾಹಿತ್ಯ ಸಮಾಜದ ಗತಿಬಿಂಬ ಎಂದಾಗ ಸಮಾಜದ ವಿವಿಧ ಮಜಲುಗಳು ಸಾಹಿತ್ಯದಲ್ಲಿ ಪ್ರತಿಬಿಂಬವಾಗುತ್ತವೆ. ಆ ಕಾರಣಕ್ಕಾಗಿ ಈ ಭಾಗದ ಬರಹಗಾರರು, ಚಿಂತಕರು, ಸಾಹಿತಿಗಳು ಸಮಾಜದಲ್ಲಿರುವ ಮೂಢನಂಬಿಕೆಗಳ, ಅಂದಕಾರ, ಜಾತಿಬೇದ, ಮೇಲುಕೀಳು, ಇಂತವುಗಳನ್ನು ಒಡೆದು ಹಾಕಲು ಸಾಹಿತ್ಯ ಸೃಷ್ಠಿ ಮಾಡಿದರು. ನಾಟಕಗಳ ಮೂಲಕ ಸಾಮಾಜೀಕ ಮೌಲ್ಯಗಳನ್ನು ನೀಡಲು ಪ್ರಯತ್ನಿಸಿದರು. ಅಂತಹ ಬರಹಗಳನ್ನು ಸಾಹಿತ್ಯ ಸಂಘವು ಪ್ರಕಟಿಸುವುದರ ಮೂಲಕ ಜನರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಿತು ಎಂದು ಹೇಳಿದರೆ ತಪ್ಪಾಗದು. ಹೀಗೆ ಅನೇಕ ಗುರಿಗಳನ್ನು ಇಟ್ಟುಕೊಂಡು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಪ್ರಕಟಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

೧೧. ಇತರರಿಗೆ ಮಾದರಿ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಹೈದ್ರಾಬಾದ್ ಕರ್ನಾಟಕದ ಕನ್ನಡ ಸಂಘಗಳಲ್ಲಿಯೇ ಪ್ರಮುಖವಾದುದು. ತನ್ನ ಕಾರ್ಯಚಟುವಟಿಕೆಯನ್ನು ವಿವಿಧ ಕವಲುಗಳಲ್ಲಿ ಸಾಗಿಸಿ ಇತರರಿಗೆ ಮಾದರಿಯಾಯಿತು. ತಾನು ಕೃತಿಗಳನ್ನು ಮುದ್ರಿಸಿ ಪ್ರಕಟಿಸುವುದರ ಮೂಲಕ ಇತರ ಪ್ರಾದೇಶಿಕ ಕನ್ನಡ ಪರ ಸಂಘಗಳಿಗೆ ಅದು ದಾರಿ ಮಾಡಿಕೊಟ್ಟಿತು. ತಾನು ಹಾಕಿಕೊಳ್ಳುವ ಕಾರ್ಯಕ್ರಮಗಳ ಮೂಲಕವು ಮಾರ್ಗಸೂಚಿಯಂತಾಯಿತು.

ಅಡಿಟಿಪ್ಪಣಿಗಳು

೧. ರಾಘುವೇಂದ್ರ ಕಟ್ಟಿ., ಬೃಂದಾವನ, ೧೯೬೫, ಪು.೪೪
೨. ರಾಘುವೇಂದ್ರ ಕಟ್ಟಿ., ಬೃಂದಾವನ, ೧೯೬೫, ಪು.೧
೩. ರಾಘುವೇಂದ್ರ ಕಟ್ಟಿ., ಬೃಂದಾವನ, ೧೯೬೫, ಪು.೧೬
೪. ಪ್ರೊ. ವಸಂತ ಕುಷ್ಟಗಿ., ಕಾವ್ಯಶ್ರೀ, ೧೯೭೦, ಪು.೫೦
೫. ರಾಘುವೇಂದ್ರ ಕಟ್ಟಿ., ಬೃಂದಾವನ, ೧೯೬೫, ಪು.೧೦

ಅಧ್ಯಾಯ ೬

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಮತ್ತು ವರ್ತಮಾನ

೧. ಪ್ರಸ್ತುತ ಸಮಸ್ಯೆ ಮತ್ತು ಸವಾಲುಗಳು

೨. ಪರ್ಯಾಯ ಮತ್ತು ಹೊಸ ಸಾಧ್ಯತೆಗಳು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಮತ್ತು ವರ್ತಮಾನ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಹಲವು ದಶಕಗಳಿಂದ ರಾಜಕೀಯೇತರ ಸಂಸ್ಥೆಯಾಗಿ ಈ ಭಾಗದಲ್ಲಿ ಸಾಹಿತ್ಯಿಕ ಬದ್ರುಬುನಾದಿಯನ್ನು ಹಾಕಿತು. ಪ್ರಸ್ತುತ ದಿನಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕನ್ನಡ ಸಾಹಿತ್ಯ ಸಂಘ-ಸಂಸ್ಥೆಗಳನ್ನಾಗಲಿ, ಕನ್ನಡಪರ ಸಂಘಟನೆಗಳನ್ನು ನಾವು ವೀಕ್ಷಣೆ ಮಾಡಿದಾಗ ಯಾವುದೇ ಸಂಘಗಳು, ಸಂಘಟನೆಗಳು, ರಾಜಕೀಯ ಪ್ರಭಾವವಿಲ್ಲದೆ ಮುಂದೆ ಬರಲು ಸಾಧ್ಯವಾಗದಿರುವುದು ಕಂಡುಬರುತ್ತದೆ. ಹಲವಾರು ಸಂಘ-ಸಂಸ್ಥೆಗಳು ಜಾತಿ ಆಧಾರಿತವಾಗಿ ಬಲಪಡಿಸಿ ಕೊಳ್ಳುವ ಹವಣಿಕೆಯಲ್ಲಿರುವುದನ್ನು ಕೂಡ ನೋಡಬಹುದು. ಉದಾ. ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆ ಕೆಲವೇ ವರ್ಷಗಳಲ್ಲಿ ಕನ್ನಡ ನಾಡು-ನುಡಿ ಹಾಗೂ ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ರಾಜಕೀಯ ಸಹಭಾಗಿತ್ವವನ್ನು ಪಡೆದುಕೊಂಡು ಒಂದು ಪ್ರಬಲವಾದ ಸಂಘಟನಾತ್ಮಕ ಶಕ್ತಿಯಾಗಿ ಬೆಳೆದಿರುವುದನ್ನು ನಾವು ಕಾಣುತ್ತೇವೆ. ಅದೇ ರೀತಿ ದಕ್ಷಿಣ ಕನ್ನಡದ ಭಾಗಗಳಲ್ಲಿ ಸಂಘ-ಸಂಸ್ಥೆಗಳು, ಜಾತಿ ಲೆಕ್ಕಾಚಾರದಲ್ಲಿ ಅವುಗಳಲ್ಲಿ ಆಳ್ವಾಸ ಸಂಸ್ಥೆ ಪ್ರಮುಖವಾದದ್ದು. ಹಾಗೇಯೆ ಬೆಂಗಳೂರಿನ ಕ್ರೈಸ್ತ ಸಂಸ್ಥೆ, ಮುಂಬೈ ಕನ್ನಡ ಸಂಘ ಹೀಗೆ ಹಲವಾರು ಸಂಘ-ಸಂಸ್ಥೆಗಳು ತುಂಬಾ ಹೆಸರು ಮಾಡಿರುವುದನ್ನು ನಾವು ಕಾಣುತ್ತೇವೆ.

ಉತ್ತರ ಕರ್ನಾಟಕದಲ್ಲಿ ಹಲವಾರು ಕನ್ನಡಪರ ಸಂಘ-ಸಂಸ್ಥೆಗಳು ಕೂಡ ತುಂಬಾ ಹೆಸರು ಪಡೆದುಕೊಂಡಿವೆ. ಧಾರವಾಡದ 'ಗೆಳೆಯರ ಬಳಗ', 'ಕರ್ನಾಟಕ ವಿದ್ಯಾವರ್ಧಕ ಸಂಘ' ರಾಯಚೂರಿನ ಕರ್ನಾಟಕ ಸಂಘ, ಹೈದ್ರಾಬಾದ್‌ನ ಕನ್ನಡ ಸಂಘ, ಹೀಗೆ ಅನೇಕ ಸಂಘ-ಸಂಸ್ಥೆಗಳು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಸಮಕಾಲೀನದಲ್ಲಿಯೇ ಹುಟ್ಟಿ ಬೆಳೆದು ಹೆಸರುವಾಸಿಯಾದವು. ಆದರೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಯಾಕೆ? ಸಂಘಟನಾತ್ಮಕ ಶಕ್ತಿಯಾಗಿ ಬೆಳೆಯುವಲ್ಲಿ ವಿಫಲವಾಯಿತು? ರಾಜ್ಯದಲ್ಲಿನ ಅನೇಕ ಸಂಘ-ಸಂಸ್ಥೆಗಳನ್ನು ಗಮನಿಸಿದಾಗ ಬಹುತೇಕ ಸರ್ಕಾರದ

ಆಶ್ರಯವನ್ನು ಪಡೆದುಕೊಂಡದ್ದನ್ನು ಕಾಣಬಹುದು. ಕೆಲವು ಸಂಘಟನೆಗಳಿಗೆ ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಕಟಣೆ ಅಥವಾ ಇತರ ಸಂದರ್ಭದಲ್ಲಿ ಸಹಾಯ ಹಸ್ತ ಹಾಗೂ ಧನ ಸಹಯಾದಂತಹ ಕೊಡುಗೆಗಳು ದೊರೆತಿರುವುದು ಗಮನಿಸಬಹುದು. ಆದರೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಕರ್ನಾಟಕ ಸರ್ಕಾರವಾಗಲಿ, ಕನ್ನಡ ಪರಿಷತ್ ಆಗಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈ ಕನ್ನಡ ಸಾಹಿತ್ಯ ಸಂಘದ ಕಾರ್ಯಚಟುವಟಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರುವುದು ಸರ್ಕಾರದ ನಿರ್ಲಕ್ಷ್ಯವೆಂದೆ ಹೇಳಬಹುದು.

"೧೯೪೨ರ ಸಂದರ್ಭದಲ್ಲಿ ಅನೇಕ ಸಂಘ-ಸಂಸ್ಥೆಗಳು ಹೈದ್ರಾಬಾದ್ ಕರ್ನಾಟಕದಲ್ಲಿ ಆರಂಭವಾದವು. ೧೯೪೨ರಲ್ಲಿ ಸುರಪುರದ ಕನ್ನಡ ಸಾಹಿತ್ಯ ಸಂಘ ಆರಂಭವಾದರೆ, ಅದಕ್ಕಿಂತಮುಂಚೆ ೧೯೪೧ರಲ್ಲಿ ಗುಲ್ಬರ್ಗಾ ಹಾಗೂ ಶಹಾಬಾದಗಳಲ್ಲಿ ಕನ್ನಡ ಸಾಹಿತ್ಯ ಸಂಘಗಳು ಆರಂಭವಾಗಿದ್ದವು. ಈ ಸಂಘ-ಸಂಸ್ಥೆಗಳು ತಮ್ಮದೆ ಆಗಿರುವಂತಹ ಸುಸಜ್ಜಿತವಾದ ಕಟ್ಟಡವನ್ನು ಹೊಂದಿವೆ. ಸ್ವಂತ ಆರ್ಥಿಕ 'ಬಲದ' ಮೇಲೆ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾಬಂದಿವೆ. ಆದರೆ ೧೯೪೩ರಲ್ಲಿ ಹೈದ್ರಾಬಾದ್ ನಿಜಾಮನ ವಿರುದ್ಧ ಬಂಡಾಯದ 'ಸಮರ'ವನ್ನು ಸಾರಿ ಕನ್ನಡದ ಬೆಳವಣಿಗೆಯ ಕಾರ್ಯಚಟುವಟಿಕೆಗಳಲ್ಲಿ ನಿರಂತರ ಸೇವೆ ಸಲ್ಲಿಸುತ್ತಾಬಂದಿದೆ. ಸುಮಾರು ಆರು ದಶಕಗಳಲ್ಲಿ ಜನರು ಮುಚ್ಚುವಂತ ಸಾಹಿತ್ಯಿಕ ಕ್ಷೇತ್ರದಲ್ಲಿ ಕೃಷಿಯನ್ನು ಮಾಡಿದೆ. ಆದರೂ ಕೂಡ ಇತರ ಸಂಸ್ಥೆಗಳು ಗಳಿಸಿದ ಮಾನ್ಯತೆಯನ್ನು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಪಡೆದುಕೊಳ್ಳುವಲ್ಲಿ ವಿಫಲವಾಗಿದೆ ಎಂದರೆ ತಪ್ಪಾಗಲಾರದು. ಕಾರಣ ಈ ಸಂಘಕ್ಕೆ ಇದ್ದ ಹಲವಾರು ಸಮಸ್ಯೆಗಳು"[೧].

ಅ. ಪ್ರಸ್ತುತ ಸಂದರ್ಭದ ಸಮಸ್ಯೆ ಮತ್ತು ಸವಾಲುಗಳು

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವನ್ನು ರಾಜಕೀಯ ಹಿತಾಸಕ್ತಿಗಾಗಿ, ಪ್ರಾದೇಶಿಕ ಹಿತಾಸಕ್ತಿಗಾಗಿ, ವೈಯಕ್ತಿಕ ಹಿತಾಸಕ್ತಿಗಾಗಿ ಬಳಸಿಕೊಂಡಿದ್ದರೆ ೬೫ ವರ್ಷಗಳ ತನ್ನ ಸುದೀರ್ಘ ಕಾರ್ಯವೈಖರಿಗಳಿಂದ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಬಹುದಾಗಿತ್ತು. ದೇಶಾಭಿಮಾನ, ರಾಜ್ಯಾಭಿಮಾನ, ಭಾಷೆ, ಸಂಸ್ಕೃತಿಯಂಥ ಕಾರ್ಯಗಳಲ್ಲಿ ಸ್ವಾರ್ಥವಿಲ್ಲದೆ ಸೇವೆಸಲ್ಲಿಸಿತು. ಯಾವುದೇ ಸರ್ಕಾರವಾಗಲಿ, ಕನ್ನಡ ಸಾಹಿತ್ಯ ಪರಿಷತ್ ಆಗಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಸಹಾಯಹಸ್ತ ನೀಡುವುದಿರಲಿ ಅಭಿಮಾನದ ಮಾತುಗಳನ್ನೂ ಆಡಲಿಲ್ಲ ಎಂಬುವುದು ಒಂದು ವಿಪರ್ಯಾಸದ ಸಂಗತಿಯೇ ಸರಿ. ಇಂದು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಅನೇಕ ಸಮಸ್ಯೆಗಳ ಗೂಡಿನಂತಾಗಿ ಅವಸಾನದ ಅಂಚಿನಲ್ಲಿದೆ. ಸಂಘವು ಹಲವಾರು ಭೌತಿಕ ಸಮಸ್ಯೆಗಳನ್ನು, ಸಾಂಸ್ಕೃತಿಕ ಸಮಸ್ಯೆಗಳನ್ನು ಹಾಗೂ ಆರ್ಥಿಕ ಸಮಸ್ಯೆಗಳಂಥ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿವೆ.

೧. ಸಾಹಿತ್ಯ ಸಂಘಕ್ಕೆ ಸ್ವಂತ ಕಟ್ಟಡ ಇಲ್ಲದಿರುವುದು

ಯಾವುದೇ ಒಂದು ಸಂಘ-ಸಂಸ್ಥೆಯು ಅಭಿವೃದ್ಧಿಗೆ ಭೌತಿಕ ಸೌಕರ್ಯಗಳು ಮುಖ್ಯಪಾತ್ರ ವಹಿಸುತ್ತದೆ. ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲು ಸುಸಜ್ಜಿತವಾದ ಸಭಾಂಗಣ, ಸುಸಜ್ಜಿತವಾದ ಪೀಠೋಪಕರಣಗಳು ಇಲ್ಲದೆ ಹೋದರೆ ಹಲವಾರು ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಹೀಗಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಇದಕ್ಕೆ ಹೊರತಾಗಿಲ್ಲ. ಹೀಗಾಗಿ ಈ ಭಾಗದಲ್ಲಿನ ಸಾಹಿತ್ಯ ಕ್ಷೇತ್ರಕ್ಕೆ ತೀವ್ರವಾದ ಹಿನ್ನಡೆಯಾದಂತಾಗಿದೆ. ಹಲವಾರು ಸಾಹಿತ್ಯ ವಿದ್ವನ್ಮಣಿಗಳು ಈ ಭಾಗದಲ್ಲಿ ಜನಿಸಿದರೂ ಈ ಸಂಘ ದುರ್ಬಲ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿರುವುದು ಒಂದು ದುರಂತವೆಂದರೆ ತಪ್ಪಾಗಲಾರದು. ಜೊತೆಗೆ ಈ ಭಾಗದ ಗಣ್ಯವ್ಯಕ್ತಿಗಳು ಹಣವನ್ನು ಹಾಗೂ ಕಟ್ಟಡ ಕಟ್ಟಿಕೊಳ್ಳಲು ತುಂಡು ಭೂಮಿಯನ್ನು ಉದಾರವಾಗಿ ನೀಡದಿರುವುದು ಈ ಸಂಘಕ್ಕೆ ಇನ್ನೊಂದು ಹಿನ್ನಡೆಯಾಗಿದೆ. ಹೀಗಾಗಿ ವಿಧಿಯಿಲ್ಲದೆ ರಂಗಂಪೇಟೆಯ ನಗರೇಶ್ವರ ದೇವಾಲಯದ ಹಳೆಯ ಕೋಣೆಯೊಂದರಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದೆ. ಸರ್ಕಾರದ ಯಾವುದೇ ಆರ್ಥಿಕ ಸಹಾಯವಿಲ್ಲ. ಊರಿನ ನಾಗರೀಕರ ಔದಾರ್ಯವೇ ಈ ಸಂಘಕ್ಕೆ ಶ್ರೀರಕ್ಷೆಯಾಗಿದೆ.

"ಬಹಳ ಹಿಂದೆಯೇ ಹೈದ್ರಾಬಾದ್ ನಿಜಾಂ ಸರ್ಕಾರದ ಪರವಾಗಿ ಮಾನ್ಯಮಂತ್ರಿ ಡಾ. ಮೇಲ ಕೋಟಿಯವರು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕಟ್ಟಡ ನಿರ್ಮಾಣಕ್ಕಾಗಿ 'ಮೂರು ಸಾವಿರ' ರೂಪಾಯಿಗಳನ್ನು ಒದಗಿಸುವುದಾಗಿ ಆಶ್ವಾಸನೆ ನೀಡಿದ್ದರು. ಅದು ಕೇವಲ ಆಶ್ವಾಸನೆಯಾಗಿಯೇ ಉಳಿಯಿತು. ಡಾ. ಸಿದ್ದಯ್ಯ ಪುರಾಣಿಕರು ಹೈದ್ರಾಬಾದ್ ನಿಜಾಂ ಸರ್ಕಾರದಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಈ ಭಾಗದ ಪ್ರಸಿದ್ಧ ಕವಿಯು ಕೂಡ ಆಗಿದ್ದರು. ಅವರು ಕಟ್ಟಡಕ್ಕೆ ಸಹಾಯಧನ ನೀಡುವುದಾಗಿ ತಿಳಿಸಿದ್ದರೂ ಯಾವುದೇ ಫಲನೀಡಲಿಲ್ಲ"[೨]. ಇಲ್ಲಿಯವರೆಗೂ ಕರ್ನಾಟಕ ಸರ್ಕಾರದಿಂದ ಹೈದ್ರಾಬಾದ್ ನಿಜಾಂ ಸರ್ಕಾರದಿಂದ ಅನೇಕ ಮಂತ್ರಿ ಮಹೋದಯರು ಬಂದಿದ್ದು ಕರ್ನಾಟಕ ಸರ್ಕಾರದ ಹಲವಾರು ಮುಖ್ಯಮಂತ್ರಿಗಳು ರಂಗಂಪೇಟಡೆ ಕನ್ನಡ ಸಾಹಿತ್ಯ ಸಂಘದ ನಾಡಹಬ್ಬ ಹಾಗೂ ಇತರೆ ಉತ್ಸವಗಳಲ್ಲಿ ಭಾಗವಹಿಸಿದರೂ ಇಂದಿಗೂ ಕಟ್ಟಡದ ಬಗೆಗೆ ಯಾವುದೇ ಮಾತನಾಡದಿರುವುದು ಒಂದು ಸೋಜಿಗದ ಸಂಗತಿಯೇ ಸರಿ. ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನೇಕ ಕಾರ್ಯಧ್ಯಕ್ಷರುಗಳು ಈ ಸಂಘಕ್ಕೆ ಬೇಟಿ ನೀಡಿದರೂ ಸಹ ಯಾವುದೇ ಫಲಕಾರಿಯಾಗಿಲ್ಲ. ಸಂಘದ ಸದಸ್ಯರು ಹರಸಾಹಸಮಾಡಿ ಸಂಘದ ಕಟ್ಟಡಕ್ಕಾಗಿ ನಿವೇಶನವನ್ನು ಖರೀದಿಸಿದ್ದಾರೆ. ಆದರೆ ಇನ್ನೂ ಕಟ್ಟಡದ ಕೆಲಸ ಆರಂಭವಾಗಿಲ್ಲ.

೨. ಸರ್ಕಾರದ ನಿರ್ಲಕ್ಷ್ಯ ಧೋರಣೆ

ಯಾವುದೇ ಸಂಘ-ಸಂಸ್ಥೆಗಳು ಉನ್ನತವಾಗಿ ಬೆಳೆಯಬೇಕಾದರೆ ಸರ್ಕಾರದ ಸಹಾಯಬೇಕೆಬೇಕು. ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯಕ್ಕಾಗಿ ಹೈದ್ರಾಬಾದ್ ನಿಜಾಂನ ವಿರುದ್ಧ ಮತ್ತು ಕರ್ನಾಟಕ ಏಕೀಕರಣ ಹೀಗೆ ಹಲವಾರು ಮಹತ್ವದ ಹಂತಗಳಲ್ಲಿ ಸಾಹಿತ್ಯ ಸಂಘವು ನಿರಂತರವಾಗಿ ಹಗಲು ರಾತ್ರಿಯನ್ನದೆ ತನ್ನ ಕಾರ್ಯಚಟುವಟಿಕೆಯಲ್ಲಿ ನಿರತವಾಗಿತ್ತು. ಸತತ ಆರು ದಶಕಗಳವರೆಗಿನ ಕಾರ್ಯಚಟುವಟಿಗಳನ್ನು ಗಮನಿಸಿದ ಸರ್ಕಾರಗಳು ಇದುವರೆಗೂ ಯಾವುದೇ ಸಹಾಯಧನವನ್ನು ನೀಡಿಲ್ಲ. ಕರ್ನಾಟಕದ ವಿವಿಧ ಭಾಗಗಳಲ್ಲಿನ ಅನೇಕ ಸಂಘ-ಸಂಸ್ಥೆಗಳಿಗೆ ಸರ್ಕಾರ ಅನುದಾನ ನೀಡಿದ ಸಾಕಷ್ಟು ಉದಾಹರಣೆಗಳಿವೆ. ಹಿಂದುಳಿದ ಪ್ರದೇಶವೆಂದೆ ಹೈದ್ರಾಬಾದ್ ಕರ್ನಾಟಕಕ್ಕೆ ಹಣೆಪಟ್ಟಿ ಇದೆ. ಸರ್ಕಾರ ಸಾಹಿತ್ಯ ಸಂಘದ ಕಾರ್ಯಚಟುವಟಿಕೆಗಳನ್ನು ಗಮನಿಸದೆ ಮಲತಾಯಿ ಧೋರಣೆಯನ್ನು ತೋರಿದೆ.

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ನಾಡಹಬ್ಬ ಕರ್ನಾಟಕ ರಾಜ್ಯೋತ್ಸವಗಳನ್ನು ಆಚರಿಸಬೇಕಾದರೆ ರಂಗಂಪೇಟೆಯಲ್ಲಿ ಹಣವನ್ನು ಸಂಗ್ರಹಿಸುತ್ತಾರೆ. ಇದಕ್ಕಾಗಿ 'ಛಂದಾವಸೂಲಿ' ಮಾಡಲಾಗುತ್ತದೆ. ಆಸಕ್ತರಿಂದ ಸಂಘದ ಸದಸ್ಯತ್ವಕ್ಕೆ ಆಗಿನ ಸಂದರ್ಭದಲ್ಲಿ ಇಪ್ಪತ್ತೈದು ಪೈಸೆ, ಐವತ್ತು ಪೈಸೆ, ಒಂದು ರೂಪಾಯಿಯನ್ನು ತಿಂಗಳಿಗೆ ಸಂಗ್ರಹಿಸಲಾಗುತ್ತಿತ್ತು. ನಾಡಹಬ್ಬಕ್ಕಾಗಿ ಗಣ್ಯವ್ಯಕ್ತಿಗಳಲ್ಲಿ, ನಾಗರೀಕರಲ್ಲಿ, ಐದು, ಹತ್ತು, ಇಪ್ಪತ್ತು ರೂಪಾಯಿಗಳನ್ನು ಸಂಗ್ರಹಿಸಲಾಗುತ್ತದೆ. ಸಂಗ್ರಹಿಸಿದ ಹಣದಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ"[೨]. ಇಂತಹ ಸಂದರ್ಭಗಳನ್ನು ಎದುರಿಸುತ್ತಾ ತನ್ನ ಸಾಂಸ್ಕೃತಿಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಚರಿಸುತ್ತಾ ಬಂದ ಕನ್ನಡ ಸಾಹಿತ್ಯ ಸಂಘಕ್ಕೆ ಯಾವುದೇ ಮೂಲದಿಂದ ಆದಾಯವಿಲ್ಲ ಮತ್ತು ಸರ್ಕಾರವು ಸಾಹಿತ್ಯ ಸಂಘದ ಮೇಲೆ ಕಣ್ಣುತೆರೆಯುವಲ್ಲಿ ಮನಸ್ಸುಮಾಡಿಲ್ಲ.

೩. ಕನ್ನಡ ಸಾಹಿತ್ಯ ಪರಿಷತ್ತಿನ ಅಸಹಕಾರ

೧೯೧೫ರಲ್ಲಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳನ್ನು ಪೋಷಿಸಿ ಬೆಳೆಸುವ ಹಲವಾರು ಗುರಿ-ಉದ್ದೇಶಗಳನ್ನು ಇಟ್ಟಕೊಂಡು ಕನ್ನಡ ಸಾಹಿತ್ಯ ಪರಿಷತ್ ಅಸ್ತಿತ್ವಕ್ಕೆ ಬಂದಿತು. ಅದರಂತೆ ೧೯೪೩ರಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಅನೇಕ ಗುರಿಗಳನ್ನು ಇಟ್ಟುಕೊಂಡು ಅಸ್ತಿತ್ವಕ್ಕೆ ಬಂದಿತು. ಕನ್ನಡ ಸಾಹಿತ್ಯ ಪರಿಷತ್ ಮಾಡುವ ಕೆಲಸ ಕಾರ್ಯಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಮಾಡುತ್ತಾ ಬಂದಿದೆ.

೧೯೭೦ರಲ್ಲಿ ಜಿ. ನಾರಾಯಣರು ಕನ್ನಡ ಸಾಹಿತ್ಯ ಪರಿಷತ್‌ನ ಕಾರ್ಯಧ್ಯಕ್ಷರಾದ ಬಳಿಕ ಪರಿಷತ್ ಕಾರ್ಯವ್ಯಾಪ್ತಿಯನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಿಗೂ ವಿಸ್ತರಿಸಿಕೊಂಡು ಕನ್ನಡದ ಕೆಲಸವನ್ನು ಮಾಡಲು ನಿರ್ಧರಿಸಿತು. ಇಂಥಹ ಕನ್ನಡದ ಕಾರ್ಯಗಳನ್ನು ೧೯೭೦ಕ್ಕಿಂತ ಮುಂಚೆಯೇ

ಹೈದ್ರಾಬಾದ್ ಕರ್ನಾಟಕ ಪ್ರವೇಶದಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಮಾಡುತ್ತಾ ಬಂದಿದೆ. ಆದರೆ ಇಂತಹ ಅರ್ಥಪೂರ್ಣ ಕೆಲಸಗಳನ್ನು ಮಾಡುತ್ತಾ ಬಂದ ಸಾಹಿತ್ಯ ಸಂಘಕ್ಕೆ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು ಕೂಡ ಯಾವುದೇ ಸಹಾಯವನ್ನು ಇದುವರೆಗೂ ನೀಡಿಲ್ಲ.

೪. ಪ್ರಭಾವಿ ನಾಯಕತ್ವದ ಕೊರತೆ

ಯಾವುದೇ ಸಂಘ-ಸಂಸ್ಥೆಗಳು ಪ್ರೌಢಮಟ್ಟಕ್ಕೆ ತಲುಬೇಕಾದರೆ ಅಲ್ಲಿ ನಾಯಕತ್ವವು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತವೆ. ಯಾವ ಸಂಘಕ್ಕೆ ಆದಾಯಾದ ಮೂಲ ಹೆಚ್ಚಾಗಿರುತ್ತದೆಯೋ ಅಲ್ಲಿ ನಾಯಕತ್ವದ ಪಟ್ಟಕ್ಕಾಗಿ ತೀವ್ರ ಪೈಪೋಟಿ ಇರುತ್ತದೆ.ಆದರೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ೬೫ ವರ್ಷಗಳಲ್ಲಿ ಕೇವಲ ಮೂರು ಜನ ಅಧ್ಯಕ್ಷರನ್ನು ಕಂಡಿದ್ದು ಈಗ ನಾಲ್ಕನೇಯ ಅಧ್ಯಕ್ಷರಾಗಿ ಬುದ್ಧಿವಂತಶೆಟ್ಟರು ಕಾರ್ಯನಿರ್ವಹಿಸುತ್ತಿದ್ದಾರೆ. ಆರಂಭದಲ್ಲಿ ಶ್ರೀರಾಮಣ್ಣ ಬೋಡಾರವರು 'ನವತ್ತೆರಡು' ವರ್ಷಗಳು ಕಾಲ ಅಧ್ಯಕ್ಷರಾಗಿದ್ದುದು ಗಮನಾರ್ಹ ಸಂಗತಿ. ಕರ್ನಾಟಕದ ಯಾವುದೇ ಸಂಘ-ಸಂಸ್ಥೆಗಳಲ್ಲಿ ಇಷ್ಟು ದೀರ್ಘ ಅವಧಿಯವರೆಗೂ ಅಧ್ಯಕ್ಷರಾದ ಉದಾಹರಣೆಗಳು ಅಪರೂಪ. ಸಂಘ ಸಂಸ್ಥಾಪನಾ ಸದಸ್ಯರೆಲ್ಲರೂ ನಿಸ್ವಾರ್ಥದಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ಈಗಿನ ಅಧ್ಯಕ್ಷರಾದ ಶ್ರೀ ಎಂ.ಆರ್. ಬುದ್ಧಿವಂತಶೆಟ್ಟರು ಈಗ ೮೭ ವರ್ಷದ ವಯೋವೃದ್ಧರು. ಅವರು ತಿರುಗಾಡುವ ಅವಸ್ಥೆಯಲಿಲ್ಲ. ಹೀಗಾಗಿ ಯಾವುದೇ ಕಾರ್ಯಕ್ರಮಗಳನ್ನು ನಡೆಸಬೇಕಾದರೆ ಒಬ್ಬ ಸಮರ್ಥ ನಾಯಕನ ಅವಶ್ಯಕತೆಯಿದೆ.

ನಾಯಕರಾದವರು ಸಂಘದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸುಸಜ್ಜಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೊಂದಿರಬೇಕು. ನಿಷ್ಠೆಯಿಂದ ಪ್ರಮಾಣಿಕ ಸೇವೆಯನ್ನು ಸಲ್ಲಿಸುವಂತ ನಾಯಕರ ಕೊರತೆಯನ್ನು ಇಂದು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಎದುರಿಸುತ್ತಿದೆ.

೫. ಮಹಿಳಾ ಸಹಭಾಗಿತ್ವದ ಕೊರತೆ

ಎಪ್ಪತ್ತರ ದಶಕದ ನಂತರ ಸಾಹಿತ್ಯವನ್ನು ಸಮಾಜದ ವಿಭಿನ್ನ ನೆಲೆಗಳಿಂದ ಗ್ರಹಿಸುವ ವಿಧಾನ ಮೋದಲಾಯಿತು. ಅದರ ಜೊತೆಗೆ ಜಾತಿ ಶ್ರೇಣಿಕರಣ ಮತ್ತು ಜಾತಿ ಅಸಮಾನತೆ, ಲಿಂಗ ಅಸಮಾನತೆ, ವರ್ಗ ಅಸಮಾನತೆಯ, ನೆಲೆಗಳಿಂದ ಸಾಹಿತ್ಯವನ್ನು ಗ್ರಹಿಸುವ ಮುಖ್ಯವಿಧಾನಗಳು ಮುಂಚೂಣಿಗೆ ಬಂದವು. ಸ್ತ್ರೀ-ವಾದಿ ದೃಷ್ಟಿಕೋನ, ದಲಿತ ದೃಷ್ಟಿಕೋನ ಮುಂತಾದ ಪರಿಕಲ್ಪನೆಯಲ್ಲಿ ಸಾಹಿತ್ಯವನ್ನು ನೋಡುವುದು ಆರಂಭವಾಯಿತು.

ಆದರೆ ರಂಗಂಪೇಟೆ ಕನ್ನಡ ಸಹಾತ್ಯ ಸಂಘವು ಪ್ರತಿಯೊಂದು ಸ್ಮಾರಕ ಉಪನ್ಯಾಸಮಾಲೆಗಳಲ್ಲಿ

ಮಹಿಳಾ ದೃಷ್ಟಿಕೋನದಲ್ಲಿ ಸಾಹಿತ್ಯವನ್ನು ಗ್ರಹಿಸುವ ಕಾರ್ಯವನ್ನು ೧೯೪೩ರಿಂದಲೇ ಆರಂಭಿಸಿತು ಎಂದು ಹೇಳಿದರೆ ಅತಿಶಯೋಕ್ತಿಯಾಗಿರಲಾರದು. ಪ್ರತಿಯೊಂದು ಸ್ಮಾರಕ ಉಪನ್ಯಾಸ ಮಾಲೆಗಳಲ್ಲಿ ಮಹಿಳೆಯರಿಗಾಗಿ ಒಂದು ದಿನ ಕಾರ್ಯಕ್ರಮವನ್ನು ಆಯೋಜಿಸುವುದು ಈ ಸಾಹಿತ್ಯ ಸಂಘದ ಇನ್ನೊಂದು ವಿಶೇಷತೆ.

ಮಹಿಳೆಯರಿಗಾಗಿ ಇಷ್ಟೆಲ್ಲಾ ಸಮಾರಂಭಗಳನ್ನು ಆಯೋಜಿಸಿದ್ದರು ಕೂಡ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಹೆಚ್ಚಿನ ಅಂತರ ಕಂಡುಬರುತ್ತಿತ್ತು. ಅರವತ್ತೈದು ವರ್ಷಗಳ ಇತಿಹಾಸದಲ್ಲಿ ಯಾವೊಬ್ಬ ಮಹಿಳಾ ಸದಸ್ಯರನ್ನು ನಾವು ಕಾಣುವುದಿಲ್ಲ. ಹೀಗೆ ಮಹಿಳೆಯ ಸಹಭಾಗಿತ್ವವು ಕೂಡ ಇಂದಿನ ಸಾಹಿತ್ಯ ಸಂಘಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ.

೬. ಈ ಭಾಗದ ಸಾಹಿತಿಗಳ ನಿರ್ಲಕ್ಷ್ಯ

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸಾಹಿತಿಗಳ ಸಂಖ್ಯೆಗೆ ಯಾವುದೇ ಕೊರತೆಯಿಲ್ಲ. ಆದರೆ ಯಾವುದೇ ಒಬ್ಬ ಜನಪ್ರಿಯ ಸಾಹಿತಿ ರಂಗಂಪೇಟೆ ಸಾಹಿತ್ಯ ಸಂಘದ ಕಾರ್ಯಗಳನ್ನು ಶ್ಲಾಘಿಸಿದ್ದು ನಮಗೆ ಕಂಡುಬರುವುದಿಲ್ಲ. ಸ್ವತಃ ರಂಗಂಪೇಟೆಯವರಾದ ಕೆ. ಮುದ್ದಣ್ಣ, ವಸಂತ ಕುಷ್ಟಗಿ, ಶಾಂತರಸ, ಚನ್ನಣ್ಣವಾಲೀಕಾರ, ಬಸವರಾಜ ಸಬರದ, ಡಾ. ವಿರಣ್ಣದಂಡೆ, ಪ್ರೊ. ಬಂಡೋಲೂ, ಡಿ.ಬಿ. ನಾಯ್ಕೆ, ಟಿ.ಎಂ. ಬಾಸ್ಕರ್, ಎಸ್.ಎಮ್. ಹೀರೆಮಠ ಗೀತಾನಾಗಭೂಣ. ಹೀಗೆ ಹಲವಾರು ಸಾಹಿತಿಗಳ ದಂಡೆ ಇದ್ದರು ಯಾರೂ ಕೂಡ ಈ ಸಾಹಿತ್ಯ ಸಂಘದ ಕುರಿತು ಅಲ್ಲಿಯ ಕಾರ್ಯಚಟುವಟಿಕೆಗಳನ್ನು ಈ ಮೇಲಿನ ಯಾರೊಬ್ಬರೂ ಕುರಿತಂತೆ ತೃಪ್ತಿಕರವಾದ ಅಭಿಪ್ರಾಯವನ್ನು ಹೊಂದಿಲ್ಲ. ಇಷ್ಟೊಂದು ಐತಿಹಾಸಿಕ ಹೆಸರನ್ನು ಪಡೆದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಈ ಭಾಗದ ಸಾಹಿತಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಲು ಅನೇಕ ಕಾರಣಗಳು ಉಂಟು.

೧. "ಈ ಭಾಗದ ಸಾಹಿತಿಗಳನ್ನು ಆಹ್ವಾನಿಸದೆ ಬೇರೆ ಕಡೆಯಿಂದ ಸಾಹಿತಿಗಳನ್ನು ಕರೆಯಿಸಿ ಉತ್ಸವಗಳಲ್ಲಿ ಭಾಗವಹಿಸುವಂತೆ ಮಾಡುತ್ತಾರೆ.

೨. ಕೇವಲ ಬಾಯಿಮಾತಿನಲ್ಲಿಯೆ ನಾವು ಸುರಪುರ ರಂಗಂಪೇಟೆ ಒಂದೇ ಎಂದು ಹೇಳುವ ರಂಗಂಪೇಟೆ ಸಾಹಿತ್ಯ ಸಂಘದ ಸಂದಸ್ಯರು ಕಾರ್ಯಕ್ರಮಗಳಿಗೆ ಸುರಪುರದ ಜನರನ್ನು ಆಹ್ವಾನಿಸುವದಿಲ್ಲ"[೪].

೩. ಸುರಪುರದಲ್ಲಿಯೇ ಇರುವ ಸಾಹಿತ್ಯ ಸಂಘದೊಂದಿಗೆ ಸರಿಯಾದ ಬಾಂಧವ್ಯ ಹೊಂದಿಲ್ಲದಿರುವುದು.

ಹೀಗಾಗಿ ಕೇವಲ ಹೊರಗಡೆಯಿಂದ ಸಾಹಿತಿಗಳನ್ನು ಕರೆಯಿಸಲಾಗುತ್ತದೆ. ಎನ್ನುವ ಅಸಮಾಧಾನ ಹೊಗೆ ಕಾಣಿಸುತ್ತಿದೆ.

೭. ಸಾಹಿತ್ಯ ಆಸಕ್ತಿಯ ಕೊರತೆ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಆರಂಭವಾದಾಗಿನ ಸಮಯದಲ್ಲಿದ್ದ ಸಾಹಿತ್ಯ ಆಸಕ್ತರಿಗೂ ಇಂದಿನ ಸಮಯದ ಸಾಹಿತ್ಯ ಆಸಕ್ತರಿಗೂ ತುಂಬಾ ವ್ಯತ್ಯಾಸವಿದೆ. ಅದರಲ್ಲೂ ಆಧುನಿಕ ಯುಗದಲ್ಲಿ ಯುವಕರಿಗೆ ಸಾಹಿತ್ಯದ ಆಸಕ್ತಿಯು ಕಡಿಮೆಯಾಗಿದೆ. ಮೊದಲಿನಂತೆ ಈಗಿನ ಯುವಕರು ಸಾಹಿತ್ಯಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ತೀರ ವಿರಳವಾಗಿದೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಹಾಗೂ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಯುವಕರ ಸೈನ್ಯವೇ ಸಾಹಿತ್ಯ ಸಂಘದ ಸಮಾರಂಭಗಳಲ್ಲಿ ತುಂಬಿ ತುಳುಕುತ್ತಿತ್ತು. ಇಂದು ಜಾಗತೀಕರಣದ ಪ್ರಭಾವದಿಂದ ವಿಜ್ಞಾನ ತಂತ್ರಜ್ಞಾನದಲ್ಲಿನ ಆಸಕ್ತಿ ಹೆಚ್ಚಾಗುತ್ತಿದೆ. ಸಾಹಿತ್ಯವು ಕೇವಲ ಬೆರಳೆಣಿಕೆಯಷ್ಟು ಯುವಕರಲ್ಲಿ ಮಾತ್ರ ಜೀವಂತವಾಗಿದೆ. ಈಗಿನ ಯುವಜನಾಂಗದ ಆಸಕ್ತಿಯ ಕ್ಷೇತ್ರಗಳೇ ಬೇರೆಯಾಗಿವೆ. ಇಂದು ಸಮೂಹ ಮಾಧ್ಯಮಗಳು ಬಂದ ಮೇಲಂತೂ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಾರುಹೋದ ಜನತೆ ಸಾಹಿತ್ಯವನ್ನು ನಿರ್ಲಕ್ಷಿಸುತ್ತಿದೆ. ಕೇವಲ ಸಾಹಿತ್ಯವನ್ನು ಮನೋರಂಜನೆ ಮತ್ತು ಸಾಂಸ್ಕೃತಿಕ ಮನೋರಂಜನೆಗಾಗಿ ಬಳಸುತ್ತಿರುವುದು ಒಂದು ವಿಷಾದನೀಯ ಸಂಗತಿಯಾಗಿದೆ.

೮. ದಾನಿಗಳ ಮಹಾಪೋಷಕರ ನಿಷ್ಠಾವಂತ ಕಾರ್ಯಕರ್ತರ ಕೊರತೆ

ಯಾವುದೇ ಒಂದು ಸಂಸ್ಥೆ ಬೆಳೆಯಬೇಕಾದರೆ ಅದು ಆರ್ಥಿಕವಾಗಿ ತುಂಬಾ ಬಲಿಷ್ಠವಾಗಿರಬೇಕು. ಈ ಆರ್ಥಿಕ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಸರ್ಕಾರದಿಂದ ಅನುದಾನವಾದರೂ ಪಡೆಯಬೇಕು. ಅದಾಗದಿದ್ದರೆ ಶ್ರೀಮಂತರಿಂದ ಹಣವನ್ನು ದಾನವನ್ನಾಗಿ ಪಡೆಯಬೇಕು. ಇಂದು ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ದಾನಿಗಳ ಮಹಾಪೋಷಕರ ಕೊರತೆ ಎದ್ದು ಕಾಣುತ್ತಿದೆ. ಯಾವುದೇ ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಕಾರ್ಯಕರ್ತರ ನಿಷ್ಠೆ ತುಂಬಾ ಅವಶ್ಯ. ಆದರೆ ಈ ಸಾಹಿತ್ಯ ಸಂಘದ ಆರಂಭದ ಕಾರ್ಯಕರ್ತರು ತುಂಬಾ ನಿಷ್ಠೆಯಿಂದ ಕೆಲಸಮಾಡುತ್ತಿದ್ದರು. ಆದರೆ ಇಂದು ಕಾರ್ಯಕರ್ತರು ಹೆಸರು ಹೇಳಿಕೊಳ್ಳಲು ಮಾತ್ರ ಇದ್ದಾರೆ. ವೇದಿಕೆ ತಯಾರಾಗು ವವರೆಗೂ ಆಕಡೆ-ಈಕಡೆ ಓಡಾಡುವ ಜನ ಇಂದು ಜಾಸ್ತಿಯಾಗಿದ್ದಾರೆ. ಇಂತಹ ಕಾರ್ಯಕರ್ತರಿಂದ ಕೆಲಸ ಆಗುವುದಿಲ್ಲ. ಆದರೆ ನಿಜವಾದ ಅಭಿಮಾನಿಗಳೆ ಬೇರೆ. ಅವರು ಅಲ್ಲಲ್ಲಿ ಕಾಣಿಸಿ ಕೊಳ್ಳುವುದಿಲ್ಲ. ಅವರು ನಿಜವಾದ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ. ಅವರು ತೆರೆಯ ಮರೆಯಲ್ಲಿಯೇ ಇದ್ದು ಕೆಲಸವನ್ನು ಮಾಡುತ್ತಾರೆ. ಅಂತವರು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ.

ಸುರಪುರ ಹಾಗೂ ರಂಗಂಪೇಟೆಯಲ್ಲಿ ಸಾವಿರಾರು ವರ್ತಕರು, ಅಗರ್ಭ ಶ್ರೀಮಂತರು, ರಾಜಕಾರಣಿಗಳು, ಮಾಜಿ ಮಂತ್ರಿಗಳು ಕೂಡ ಇದ್ದಾರೆ. ಅಂಥವರಿಂದ ಸಹಾಯ ಪಡೆಯುವ ಕೆಲಸ ಸಾಹಿತ್ಯ ಸಂಘದಿಂದಾಗಿಲ್ಲ ಇಲ್ಲಿಯವರೆಗೂ ಸರ್ಕಾರದಿಂದ ಸಹಾಯ ಪಡೆಯಬಹುದಾಗಿತ್ತು. ಆದರೆ ಸಂಘದ ಸದಸ್ಯರು ಯಾವ ರೀತಿ ಸರ್ಕಾರಕ್ಕೆ ಕಣ್ಣುತೆರಿಯಿಸಬೇಕು ಎಂದು ಯೋಚಿಸುವ

ಜನರಿಲ್ಲ. "ಸಾಹಿತ್ಯ ಸಂಘದ ಸದಸ್ಯರು ಯಾವಾಗಲೂ ರಂಗಂಪೇಟೆ-ಸುರಪುರದ ಜನರು ನಾವೆಲ್ಲರೂ ಒಂದೇ ಎಂದು ಬಾಯಿ ಮಾತಿನಲ್ಲೇ ಹೇಳುತ್ತಾರೆ. ಆದರೆ ಯಾವುದೇ ಸಮಾರಂಭಕ್ಕೆ ಸುರಪುರದ ಜನರನ್ನು ಕರೆಯುವುದಿಲ್ಲ. ಕೂಸು ನಿಮ್ಮದು, ತೊಟ್ಟಿಲೂ ನಿಮ್ಮದೆ. ಆದರೆ ತೂಗುವ ಜನರನ್ನು ಕರೆಯಿಸಿ ಸಾಹಿತ್ಯ ಸಂಘವೆನ್ನುವ ತೊಟ್ಟಿಲನ್ನು ತೂಗಿಸಬೇಕು"[೮]. ಎನ್ನುವಂತಹ ಬುದ್ಧಿವಂತರು ಬೇಕಾಗಿದ್ದಾರೆ. ಹಾಗಾಗಿ ಇಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತದೆ. ಆದರೆ ಪಟ್ಟಬದ್ರ ಹಿತಾಸಕ್ತಿಗಳು ಅಂತಹ ಕೆಲಸವನ್ನು ಮಾಡಲು ಬಿಡುತ್ತಿಲ್ಲ.

ಹೀಗಾಗಿ ಪ್ರಸ್ತುತ ದಿನದಲ್ಲಿ ಸಾಹಿತ್ಯ ಸಂಘಕ್ಕೆ ನಿಶ್ಚಿತ ಠೇವಣಿಯ ಸಮಸ್ಯೆ, ದಾನಿಗಳ ಕೊರತೆ ರಾಜಕಾರಣಿಗಳ ನಿರ್ಲಕ್ಷ್ಯಕ್ಕೆ ಸಂಘ ಒಳಗಾಗಿದೆ. ಅದರ ಜೊತೆಗೆ ಸಾಹಿತ್ಯ ಸಂಘಕ್ಕೆ ಪ್ರಾಯೋಜಕತ್ವದ ಕೊರತೆಯು ಕೂಡ ಎದ್ದುಕಾಣುತ್ತದೆ. ಒಟ್ಟಾರೆಯಾಗಿ ಆರ್ಥಿಕವಾಗಿ ತುಂಬಾ ತೊಂದರೆಯಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಸಿಲುಕಿದೆ ಎಂದು ಹೇಳಬಹುದು.

೯. ಸಾಹಿತ್ಯ ಸಂಘದಲ್ಲಿ ತಳ ಸಮುದಾಯದವರನ್ನು ಸೇರಿಸಿಕೊಳ್ಳದಿರುವುದು

ಪ್ರಸ್ತುತ ದಿನಮಾನದಲ್ಲಿ ಜಾತಿ ಪ್ರೇರಿತ ಸಂಘ ಸಂಸ್ಥೆಗಳು ತುಂಬಾ ಪ್ರಬಲವಾಗಿವೆ. ಆದರೆ ಸಾರ್ವತ್ರೀಕವಾಗಿ ಜನಮನ್ನಣೆಗಳಿಸಬೇಕಾದರೆ ಸಮಾಜದ ಎಲ್ಲಾ ವರ್ಗದವರು ಸಂಘವನ್ನು ಪ್ರತಿನಿಧಿಸುವಂತಿರಬೇಕು. ಸಾಹಿತ್ಯ ಸಂಘ ಆರಂಭವಾದಾಗಿನಿಂದ ತಳವರ್ಗದ ಯಾವ ಸಮುದಾಯ ದವರೂ ಸದಸ್ಯರಾಗಿರುವುದನ್ನು ನಾವು ಕಾಣುವುದಿಲ್ಲ. ಕೇವಲ ಮೇಲ್ವರ್ಗದ ಬ್ರಾಹ್ಮಣ. ಲಿಂಗಾಯಿತ ಜಾತಿಯ ಸದಸ್ಯರುಗಳು ಮಾತ್ರ ಸಂಘದಲ್ಲಿ ಹೆಚ್ಚಾಗಿರುವುದು. ಈ ಸಂಘ ಸಾರ್ವತ್ರಿಕವಾಗಿ ಬೆಳೆಯುವಲ್ಲಿ ವಿಫಲವಾಗಿದೆ. ಯಾವೊಬ್ಬ ದಲಿತನು ಇದುವರೆವಿಗೂ ಈ ಸಂಘದ ಸದಸ್ಯರಾಗಿಲ್ಲ. ಕೇವಲ ಬ್ರಾಹ್ಮಣರನ್ನು ಮಾತ್ರ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದವರು ಕರೆಯುತ್ತಾರೆ. ಬ್ರಾಹ್ಮಣರ ಪುಸ್ತಕಗಳನ್ನು ಮಾತ್ರ ಪ್ರಕಟಿಸುತ್ತಾರೆ"[೯]. ಎನ್ನುವ ಅಸಮಾದಾನದ ಹೋಗೆ ಕೂಡ ಕಾಣಿಸುತ್ತದೆ. ಇಂತಹ ಸಮಸ್ಯೆಯನ್ನು ಕೂಡ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಎದುರಿಸುತ್ತಿದೆ. ಹಾಗಾಗಿ ತಳ ಸಮುದಾಯದ ಯಾವುದೇ ಕಾರ್ಯಕರ್ತರು, ಅಭಿಮಾನಿಗಳು ಪೋಷಕರು, ದಾನಿಗಳು ಈ ಸಂಘದಲ್ಲಿ ಕೆಲಸ ನಿರ್ವಹಿಸಲು ಹಿಂಜರಿಯುತ್ತಾರೆ.

೧೦. ಗ್ರಂಥಭಂಡಾರದ ಪುನಶ್ಚೇತನದ ಸಮಸ್ಯೆ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಆರಂಭದಿಂದಲೂ ಗ್ರಂಥಾಲಯವನ್ನು ಪ್ರಾರಂಭಿಸಿ ಓದುಗರ ಜ್ಞಾನದಾಹವನ್ನು ತೀರಿಸುವ ಕಾರ್ಯದಲ್ಲಿ ನಿರತವಾಗಿತ್ತು. ೨೫೦೦-೩೦೦೦ ಪುಸ್ತಕಗಳನ್ನು ಒಳಗೊಂಡ ಈ ಗ್ರಂಥಭಂಡಾರ ತುಂಬಾ ಮಹತ್ವದ ಹಾಗೂ ಮೌಲ್ಯಯುಕ್ತವಾದ ಹಲವಾರು ಭಾಷೆಯ ಕೃತಿಗಳಿದ್ದವು. ಆದರೆ ಈಗ್ಗೆ ಐದು ವರ್ಷಗಳ ಕೆಳಗೆ ದುಷ್ಕರ್ಮಿಗಳ ದಾಳಿಗೆ ಸಿಕ್ಕು ಗ್ರಂಥಾ ಭಂಡಾರನಾಶವಾಗಿತ್ತು.

"ಸಾಹಿತ್ಯ ಸಂಘದ ಗ್ರಂಥಾಲಯದ ಹತ್ತಿರದಲ್ಲಿ ನೂರು ಮೀಟರ ದೂರದಲ್ಲಿ ಮುಸ್ಲಿಂರಿಗೆ ಸಂಬಂಧಿಸಿದ 'ಮದುರಾಸ' ಇದೆ. ಒಂದು ದಿನ ಮಧ್ಯಾಹ್ನ ಗ್ರಂಥಾಲಯದ ಬೀಗ ಮುರಿದು ಪುಸ್ತಕಗಳನ್ನು ಕದ್ದು ಹೊಯ್ಯುವಾಗ ಪುಸ್ತಕದ ತುಂಡುಗಳು 'ಮದುರಸಾ'ದವರೆಗೆ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಂತರ ಗ್ರಂಥಭಂಡಾರಕ್ಕೆ ಬೆಂಕಿ ಹಚ್ಚಲಾಯಿತು. ಕ್ಷಣಾರ್ಧದಲ್ಲಿಯೇ ಬೆಂಕಿಯನ್ನು ನಂದಿಸಲಾಯಿತು. ಈ ಕುರಿತು ಸುರಪುರ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಯಿತು. ಆದರೆ ಹಿಂದೂ ಮುಸ್ಲಿಂರನಡುವೆ ಕೋಮುಗಲಭೆ ಉದ್ಭವಿಸುವ ಸೂಚನೆಗಳು ಕಂಡುಬಂದಿದ್ದರಿಂದ ಕೇಸನ್ನು ಅಲ್ಲಿಗೆ ನಿಲ್ಲಿಸಲಾಯಿತು"[೬]. ಪರಿಣಾಮವಾಗಿ ಗ್ರಂಥಭಂಡಾರದಲ್ಲಿ ಇಂದಿಗೂ ಪುಸ್ತಕಗಳ ಕೊರತೆ ಕಂಡುಬರುತ್ತದೆ.

೧೧. ಪ್ರಚಾರದ ಕೊರತೆ

ಸ್ವಾತಂತ್ರ್ಯ ಹೋರಾಟ, ಹೈದ್ರಾಬಾದ್ ನಿಜಾಂ ದಬ್ಬಾಳಿಕೆ ವಿರುದ್ಧದ ಹೋರಾಟ, ಕರ್ನಾಟಕ ಏಕೀಕರಣ ಮತ್ತು ಕನ್ನಡ ಭಾಷೆ-ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ನಿಸ್ವಾರ್ಥ ಹೋರಾಟವನ್ನು ಮಾಡಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ಕಾರ್ಯವೈಖರಿಯನ್ನು ಇದುವರೆಗೆ ರಾಜ್ಯ ಸರ್ಕಾರವಾಗಲಿ ಕನ್ನಡ ಸಾಹಿತ್ಯ ಪರಿಷತ್ ಆಗಲಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ವಾಗಲಿ ಈ ಸಾಹಿತ್ಯ ಸಂಘದ ಮೇಲೆ ಗಮನ ಹರಿಸಿಲ್ಲ. ಸತತ ಅರವತ್ತೈದು ವರ್ಷಗಳಿಂದಲೂ ನಾಡಹಬ್ಬ, ಗಜಾನನ ಉತ್ಸವ, ಕರ್ನಾಟಕ ರಾಜ್ಯೋತ್ಸವ, ವಾರ್ಷಿಕೋತ್ಸವ ಹೀಗೆ ಮುಂತಾದ ಸಂದರ್ಭಗಳಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ರಸದೌತಣವನ್ನು ಉಣಬಡಿಸಿದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಪ್ರಚಾರದ ಕೊರತೆ ತುಂಬಾ ಎದ್ದು ಕಾಣುತ್ತಿದೆ.

ಪತ್ರಿಕೆಗಳಾಗಲಿ, ಸಮೂಹ ಮಾಧ್ಯಮಾಗಳಾಗಲಿ ಒಂದು ಸಲವಾದರೂ ಈ ಸಾಹಿತ್ಯ ಸಂಘದ ಕಾರ್ಯವೈಖರಿಯನ್ನು ಪ್ರಸ್ತುತಪಡಿಸಲಿಲ್ಲ. ಪ್ರಚಾರಪಡಿಸಲಿಲ್ಲ. ಹೀಗಾಗಿ ಹೈದ್ರಾಬಾದ್ ಕರ್ನಾಟಕ ದಲ್ಲಿ ಇಂತಹ ಒಂದು ಸಾಹಿತ್ಯ ಸಂಘ ಇದೆ ಎನ್ನುವ ವಿಷಯ ರಾಜ್ಯದೆಲ್ಲಡೆ ತೋರ್ಪಡಿಸುವಲ್ಲಿ ಪತ್ರಿಕೆಗಳು ಹಿಂದೇಟು ಹಾಕಿದ್ದೂ ಕೂಡ ಇದರ ಹಿನ್ನೆಡೆಗೆ ಕಾರಣವಾಯಿತು.

ಹೀಗಾಗಿ ಸತತ ಕನ್ನಡ ಮಾತೆ, ಭಾರತಮಾತೆಯ ಸೇವೆಯಲ್ಲಿ ತೊಡಗಿದ್ದ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘಕ್ಕೆ ಸಮಸ್ಯೆಗಳ ಆಗರವಾಗಿ ಸಂಘವು ಈ ಭಾಗದ ಸಾಹಿತ್ಯ ಸಂಘಗಳಿಂದ ಪೈಪೋಟಿಯನ್ನು ಎದುರಿಸಬೇಕಾಗಿದೆ. ತನ್ನ ಸಾಮರ್ಥ್ಯದ ಬಗ್ಗೆ ತನಗೆ ವಿಶ್ವಾಸವಿಲ್ಲದಂತಾಗಿದೆ. ಕೇವಲ ಕೆಲವೇ ಬೆರಳೆಣಿಕೆಯಷ್ಟೆ ನಿಷ್ಠಾವಂತ ಕಾರ್ಯಕರ್ತರಿದ್ದಾರಾದರೂ ಅವರು ಸಂಘವನ್ನು ಆರ್ಥಿಕವಾಗಿ ಬಲಪಡಿಸುವಲ್ಲಿ ವಿಫಲವಾಗಿದ್ದಾರೆ.

ಬ. ಪರ್ಯಾಯ ಮತ್ತು ಹೊಸ ಸಾಧ್ಯತೆಗಳು

ಹಲವು ದಶಕಗಳಿಂದಲೂ ಹಿಂದುಳಿದ ಪ್ರದೇಶವೆಂದೆ ಹಣೆಪಟ್ಟಿ ಕಟ್ಟಿಕೊಂಡ ಹೈದ್ರಾಬಾದ್ ಕರ್ನಾಟಕವು ಹೋರಾಟದ ದೃಷ್ಟಿಯಿಂದಲೂ ಸಾಂಸ್ಕೃತಿಕ ದೃಷ್ಟಿಯಿಂದಲೂ, ಐಕ್ಯತೆ ದೃಷ್ಟಿಯಿಂದಲೂ

ತನ್ನದೆಯಾದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಭಾಷೆ ಹಾಗೂ ಸಂಸ್ಕೃತಿಯನ್ನು ಕಟ್ಟಿಬೆಳೆಸುವ ನಿಟ್ಟಿನಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಹುಟ್ಟಿಕೊಂಡಿತು. ಈ ಪ್ರದೇಶದಲ್ಲಿ ಸಾಹಿತ್ಯ ಸಂಘವು ಹಲವಾರು ಸಾಂಸ್ಕೃತಿಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಆದರೆ ಪ್ರಸ್ತುತ ದಿನಗಳಲ್ಲಿ ನಾಯಕತ್ವದ ಕೊರತೆ, ಭೌತಿಕ, ಸಾಂಸ್ಕೃತಿಕ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ.

ಸಾಹಿತ್ಯ ಸಂಘವು ಪ್ರಸ್ತುತ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಎದುರಿಸುತ್ತಿದ್ದು ಅವುಗಳನ್ನು ಮೆಟ್ಟಿ ನಿಲ್ಲಲು ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಮತ್ತೇ ತನ್ನ ಗತ ವೈಭವದ ದಿನಗಳನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ತುಂಬಾ ಶ್ರಮಿಸಬೇಕಿದೆ. ಆದ್ದರಿಂದ ಅದು ಸರ್ವಜನರ ಸಹಕಾರದ ಅವಶ್ಯಕತೆಯನ್ನು ಆಪೇಕ್ಷಿಸುತ್ತಿದೆ. ಸಂಘವು ಪ್ರಾರಂಭದ ದಿನಗಳಲ್ಲಿ ಹೋರಾಟದ ಕ್ರಾಂತಿಕಾರಿ ಹೆಜ್ಜೆಗಳನ್ನು ಇಟ್ಟು ಜನಮಾನಸದಲ್ಲಿ ಹೆಸರುವಾಸಿಯಾಗಿತ್ತು. ಆದರೆ ಇಂದು ಸಂಘ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ಹೊರಬರದೆ ಪ್ರಕ್ಷುಬ್ದ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಹೇಳಬಹುದು.

ಯಾವುದೇ ಒಂದು ಯೋಜನೆ ಯಶಸ್ವಿಯಾಗಬೇಕಾದರೆ ಅದಕ್ಕೆ ತಕ್ಕಂತೆ ಪೂರ್ವ ತಯಾರಿ ಅತ್ಯಗತ್ಯ. ಇಲ್ಲಿ ನಾಯಕತ್ವ ಪ್ರಮುಖ ಪಾತ್ರವಹಿಸುತ್ತದೆ. ಜೊತೆಗೆ ಆಡಳಿತವರ್ಗದ ಸಹಕಾರವು ಅಷ್ಟೇಮುಖ್ಯ. ಹೀಗಾಗಿ ಅದು ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಘವನ್ನು ಬಲಪಡಿಸಲು ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ಸಾಹಿತ್ಯ ಸಂಘವು ಒಂದು ರಾಜ್ಯಮಟ್ಟದ ಸಾಂಸ್ಕೃತಿಕ ಕೇಂದ್ರವಾಗಿ ಪುನರ್‌ನಿರ್ಮಾಣವಾಗಬೇಕಾದರೆ ಈ ಕೆಳಗಿನಂತೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ.

೧. ಭೌತಿಕ ಸಮಸ್ಯೆಗಳ ನಿವಾರಣೆಗೆ ಸೂಕ್ತಯೋಜನೆ

ಪ್ರತಿಯೊಂದು ಸಂಘ-ಸಂಸ್ಥೆಗಳು ತನ್ನದೆಯಾದ ಸುಸಜ್ಜಿತವಾದ ಕಟ್ಟಡವನ್ನು ಹೊಂದಿರುತ್ತಿವೆ. ಆದರೆ ಇದಕ್ಕೆ ಅಪವಾದ ಎನ್ನುವಂತೆ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಇದುವರಿಗೂ ಒಂದು ಸೂಕ್ತ ನಿವೇಶನ ಇಲ್ಲದೆ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ ಎಂದರೆ ಆಶ್ಚರ್ಯ ಎನಿಸಬಹುದು. ಆದರೆ ಇತ್ತೀಚೆಗೆ ಈ ಸಂಘವು ತನ್ನ ಅಸ್ತಿತ್ವಕ್ಕಾಗಿ ಸೂಕ್ತ ನಿವೇಶನವನ್ನು ಖರೀದಿಸಿದೆ. ಆ ನಿವೇಶನದಲ್ಲಿ ಒಂದು ಸುಸಜ್ಜಿತವಾದ ಕಟ್ಟಡದ ಯೋಜನೆಯನ್ನು ರೂಪಿಸಿ, ಅದಕ್ಕೆ ಬೇಕಾಗುವ ಆರ್ಥಿಕ ಸಹಾಯವನ್ನು ಈ 'ಸಂಘವೂ' ಸ್ಥಳೀಯರನ್ನು ಒಗ್ಗೂಡಿಸಿಕೊಂಡು ರಾಜಕಾರಣಿಗಳಿಂದ ಸಹಾಯವನ್ನು ಪಡೆದುಕೊಳ್ಳಬೇಕು. ಸುರಪುರ ಹಾಗೂ ರಂಗಂಪೇಟೆಯಲ್ಲಿನ ವ್ಯಾಪಾರಿಗಳ ಸಹಾಯವನ್ನು ಪಡೆಯಬಹುದು. ಅದರ ಜೊತೆಗೆ ಸಾಹಿತ್ಯ ಆಸಕ್ತರಿಂದ ದೇಣಿಗೆಯನ್ನು ಸಂಗ್ರಹಿಸಬೇಕು. ಅಲ್ಲದೆ ಕಟ್ಟಡದ ಕೆಲಸಕ್ಕಾಗಿ ಹಣಕಾಸಿನ ನೆರವನ್ನು ನೀಡುವಂತೆ ಕರ್ನಾಟಕ ಸರ್ಕಾರವನ್ನಾಗಲಿ, ಕನ್ನಡ ಸಾಹಿತ್ಯ ಪರಿಷತ್‌ಗಾಗಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರೊಂದಿಗೆ

ಸಂಪರ್ಕ ಹೊಂದಿ ಅವರ ಮನವಲಿಸಿ ಆರ್ಥಿಕ ಸಹಾಯವನ್ನು ಪಡೆಯುವಲ್ಲಿ ಸ್ಥಳೀಯರು ಹಾಗೂ ಸಾಹಿತ್ಯ ಸಂಘದ ಸದಸ್ಯರು ಜೊತೆಗೂಡಿ ಶ್ರಮಿಸಬೇಕು.

ಈ ಕೆಲಸಕ್ಕಾಗಿ ದಕ್ಷ ಹಾಗೂ ನಿಷ್ಠವಂತ ನಾಯಕರನ್ನು ಸಂಘ ಆಯ್ಕೆಮಾಡಿ, ನಿಷ್ಠಾವಂತ ಕಾರ್ಯಕರ್ತರಿಂದ ಸಹಾಯವನ್ನು ಪಡೆದು ಯೋಜನೆಯನ್ನು ಯಶಸ್ವಿಗೊಳಿಸಿಕೊಳ್ಳಬೇಕಾಗಿದೆ. ಈ ಕಾರ್ಯದಲ್ಲಿ ಸ್ಥಳೀಯ ರಾಜಕಾರಣಿಗಳ ಭಾಗವಹಿಸುವಿಕೆ ತುಂಬಾ ಮಹತ್ವವಾದದ್ದು. ಅವರನ್ನು ಸಾಹಿತ್ಯ ಸಂಘದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವರಿಂದ ಪ್ರಯೋಜನ ಪಡೆದುಕೊಳ್ಳುವ ನಿಟ್ಟಿನಲ್ಲಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘ ಕಾರ್ಯಪ್ರವೃತ್ತವಾಗಬೇಕಾಗಿದೆ.

೨. ಸಾಹಿತ್ಯ ಕಾರ್ಯಕ್ರಮಗಳ ಜೊತೆಗೆ ಸಾಹಿತ್ಯೇತರ ಕಾರ್ಯಕ್ರಮಗಳನ್ನು ನಡೆಸುವುದು

ಸಾಹಿತ್ಯ ಸಂಘ ಆರಂಭವಾದಾಗಿನಿಂದ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಕಾಲಗತಿಸಿದಂತೆ ಜನಸಾಮಾನ್ಯರ ಆಸಕ್ತಿಗಳು ಆಶೋತ್ತರಗಳು ಬದಲಾಗುತ್ತಿವೆ. ಕಾಲಕ್ಕೆ ತಕ್ಕಂತೆ ಸಂಘದ ಕಾರ್ಯಕ್ರಮಗಳು ಕೂಡ ಬದಲಾಯಿಸಿಕೊಳ್ಳಬೇಕು. ಸಂಪೂರ್ಣವಾಗಿ ಸಾಹಿತಿಕ ಕಾರ್ಯಕ್ರಮಗಳನ್ನು ನಡೆಸದೆ ಅದರ ಜೊತೆಗೆ ಸಾಹಿತ್ಯೇತರ ಕಾರ್ಯಗಳತ್ತ ಸಾಹಿತ್ಯ ಸಂಘ ಒಲವು ತೋರಿಸಬೇಕು. ಸ್ಥಳೀಯ ಸಮಸ್ಯೆಗಳನ್ನು ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಸ್ಥಳೀಯ ಪ್ರತಿಭೆಗಳನ್ನು ಗುರ್ತಿಸಿ ಗೌರವಿಸಬೇಕು. ಜನಪರ ಹಾಗೂ ಜೀವಪರ ಕಾಳಜಿಯುಳ್ಳ ಕಾರ್ಯಕ್ರಮಗಳನ್ನು ಆಯೋಜಿಸುವುದು ಸೂಕ್ತ. ಪ್ರಾದೇಶಿಕ ಬೇದವನ್ನು ಮರೆತು. ವಯಕ್ತಿಕ ಆಶೋತ್ತರಗಳನ್ನು ಬದಿಗೊತ್ತಿ, ಸಾರ್ವತ್ರಿಕವಾಗಿ ಎಲ್ಲಾ ಜನಾಂಗದ ಎಲ್ಲಾ ಸಮುದಾಯದ ಜನರನ್ನು ಒಗ್ಗೂಡಿಸುವಂತ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಅವಶ್ಯ.

೩. ಎಲ್ಲಾವರ್ಗ, ಸಮುದಾಯಗಳನ್ನು ಒಳಗೊಳ್ಳುವ ಕಾರ್ಯಕ್ರಮಗಳ ನಿಯೋಜನೆ

ಸಾಹಿತ್ಯ ಸಂಘದ ಆಡಳಿತವರ್ಗವು ಮೊದಲು ಎಲ್ಲಾ ವರ್ಗದ ಎಲ್ಲಾ ಜನಾಂಗದವರನ್ನು ಪ್ರತಿನಿಧಿಸುವಂತ ಸದಸ್ಯರನ್ನು ಆಯ್ಕೆಮಾಡಿಕೊಳ್ಳುವುದು ಸೂಕ್ತ. ಕರ್ನಾಟಕದ ಹಲವಾರು ಪ್ರಬಲ ಸಂಘ-ಸಂಸ್ಥೆಗಳು ಕೇವಲ ಒಂದು ಕೋಮಿನ, ಒಂದು ಜನಾಂಗವನ್ನು ಪ್ರತಿಬಿಂಬಿಸುವ ಸದಸ್ಯರನ್ನು, ಅಧ್ಯಕ್ಷರನ್ನು ಆಯ್ಕೆಮಾಡುತ್ತವೆ. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಅದಕ್ಕೆ ಹೊರತಾಗಿಲ್ಲ ಎನ್ನುವ ಅಪವಾದದ ಮಾತುಗಳು ಕೇಳಿಬರುತ್ತವೆ. ಇದುವರೆಗೂ ಕೇವಲ ಬ್ರಾಹ್ಮಣರಿಗೆ, ಲಿಂಗಾಯತರಿಗೆ ಒಟ್ಟಾರೆ ಮೇಲ್ವರ್ಗದವರನ್ನು ಮಾತ್ರ ಸದಸ್ಯರನ್ನಾಗಿ ಮಾಡಲಾಗುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತವೆ. ಹೀಗಾಗಿ ರಂಗಂಪೇಟೆ ಕನ್ನಡ ಸಾಹಿತ್ಯ ಸಂಘವು ಒಂದು ಪ್ರಭುದ್ದವಾದ ಸಂಘವೆಂದು ಪ್ರಸಿದ್ದಿ ಪಡೆಯಬೇಕಾದರೆ ಎಲ್ಲಾ ಜನಾಂಗದ ಸದಸ್ಯರನ್ನು ಆಡಳಿತದಲ್ಲಿ ಆಯ್ಕೆಮಾಡಿಕೊಳ್ಳಬೇಕು. ಅದರ ಜೊತೆಗೆ ಎಲ್ಲಾ ಸಮುದಾಯಗಳ ಸಾಹಿತಿಗಳು ಪ್ರತಿನಿಧಿಸುವಂತ

ಕಾರ್ಯಕ್ರಮಗಳನ್ನು ಆಯೋಜಿಸುವುದು ಸೂಕ್ತವಾಗಿದೆ. ಜಾಗತೀಕರಣ, ಖಾಸಗೀಕರಣದಂಥ ಇಂದಿನ ದಿನಮಾನದಲ್ಲಿ ತುಳಿತಕ್ಕೆ ಹಾಗೂ ದಮನಕ್ಕೆ ಒಳಗಾದಂತ ತಳ ಸಮುದಾಯವನ್ನು ಮೇಲೆತರುವಂತ ಕೆಲಸಗಳು ಈ ಸಾಹಿತ್ಯ ಸಂಘದಿಂದ ನಡೆಯಬೇಕಾಗಿದೆ. ಆ ನಿಟ್ಟಿನಲ್ಲಿ ಸಂಘದ ನಾಯಕರು ಸದಸ್ಯರು ಸೂಕ್ತ ಯೋಜನೆಗಳನ್ನು ರೂಪಿಸಿಕೊಳ್ಳಬೇಕು.

೪. ಮಹಿಳೆಯರ ಭಾಗವಹಿಸುವಿಕೆಗೆ ಮುಕ್ತ ಅವಕಾಶ ಒದಗಿಸುವುದು

ಈ ಸಂಘವು ಏರ್ಪಡಿಸುವ ತನ್ನ ಕಾರ್ಯಕ್ರಮಗಳಲ್ಲಿ ಸಾಹಿತ್ಯವನ್ನು ಸ್ತ್ರೀ-ವಾದಿ ದೃಷ್ಟಿ ಕೋನದಲ್ಲಿ ಚರ್ಚಿಸಿ ಮಹಿಳೆಯರಿಗಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಿದರೆ ಸಾಲದು. ಸಾಹಿತ್ಯ ಸಂಘದ ಆಡಳಿತದಲ್ಲಿ ಹಾಗೂ ಕಾರ್ಯಕ್ರಮಗಳಲ್ಲಿ ಮೇಲು-ಕೀಳು ಜಾತಿ-ಮತ ಎನ್ನದೆ ಮುಕ್ತವಾಗಿ ಭಾಗವಹಿಸುವಂತ ಅವಕಾಶಗಳನ್ನು ಕಲ್ಪಿಸಿಕೊಡುವುದು ಅವಶ್ಯವಾಗಿದೆ.

೧. ಈ ಭಾಗದ ಮಹಿಳೆಯರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರಿಗೆ ಸಂಬಂಧಿಸಿದಂತ ವಿಷಯಗಳನ್ನು ಕುರಿತು ಉಪನ್ಯಾಸವನ್ನು ಏರ್ಪಡಿಸುವುದು.

೨. ಮಹಿಳೆಯರಿಂದಲೇ ಮಹಿಳೆಯರಿಗಾಗಿ ಮಹಿಳಾ ಕವಿಗೋಷ್ಠಿಯನ್ನು ಏರ್ಪಡಿಸಬೇಕು.

೩. ಮಹಿಳಾ ಲೇಖಕಿಯರಿಂದ ಮಹಿಳಾ ಕಥಾಗೋಷ್ಠಿ ಹಾಗೂ ಕಥಾ ಸ್ಪರ್ಧೆಗಳನ್ನು ಏರ್ಪಡಿಸುವುದು

೪. ವಿಶ್ವ ಮಹಿಳಾ ದಿನವನ್ನು ಸಾಹಿತ್ಯ ಸಂಘದಿಂದ ಆಚರಿಸುವಂತಾಗಬೇಕು.

೫. ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದಲ್ಲಿ ಒಂದು 'ಮಹಿಳಾ ಘಟಕ'ವನ್ನು ರಚಿಸಿಕೊಂಡು ಎಲ್ಲಾ ವರ್ಗದ ಎಲ್ಲಾ ಸಮುದಾಯಗಳ ಮಹಿಳೆಯರನ್ನು ಸದಸ್ಯರನ್ನಾಗಿ ನೇಮಿಸಿಕೊಂಡು ಆ ಮುಖಾಂತರವಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುವಂತಾಗಬೇಕು.

೬. ರಂಗಂಪೇಟಡೆ ಕನ್ನಡ ಸಾಹಿತ್ಯ ಸಂಘವು ಇದುವರೆಗೂ ಯಾವುದೇ ಮಹಿಳಾ ಬರಹಗಾರರ ಕೃತಿಗಳನ್ನು ಪ್ರಕಟಿಸಿಲ್ಲ. ಆ ನಿಟ್ಟಿನಲ್ಲಿ ಕೆಲಸವಾಗಬೇಕು. ಪ್ರಕಟಣೆಯಲ್ಲಿ ಮಹಿಳೆಯರಿಗೆ ಆಧ್ಯತೆಯನ್ನು ನೀಡುವಂತ ಕೆಲಸವಾಗಬೇಕು.

ಈ ರೀತಿ ಮಹಿಳೆಯರು ಸಂಪೂರ್ಣವಾಗಿ ಮುಕ್ತವಾಗಿ ಭಾಗವಹಿಸುವಂತಾಗಬೇಕು. ಆಗಾದಾಗ ಮಾತ್ರ ಸಾಹಿತ್ಯ ಸಂಘವು ಒಳ್ಳೆಯ ಹೆಸರು ಮಾಡಲು ಸಾಧ್ಯವಾಗುತ್ತದೆ.

೫. ರಾಜ್ಯಮಟ್ಟದ ಸಾಹಿತ್ಯಿಕ ಚಟುವಟಿಕೆಗಳನ್ನು ಈ ಭಾಗದಲ್ಲಿ ಪ್ರಚಾರ ಪಡಿಸುವುದು

ಈ ಭಾಗದ ಪ್ರಾದೇಶಿಕ ಪತ್ರಿಕೆಗಳನ್ನು ಬಳಸಿಕೊಂಡು ರಾಜ್ಯದಲ್ಲಿ ನಡೆಯುವ ಸಾಹಿತ್ಯ ಚಟುವಟಿಕೆಗಳ ಮಾಹಿತಿಯನ್ನು ಈ ಭಾಗದ ಸಾಹಿತ್ಯಸಕ್ತರಿಗೆ ಮತ್ತು ಜನರಿಗೆ ತಿಳಿಸುವಂತ ಕೆಲಸವಾಗಬೇಕಿದೆ.

